ಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನೆನಪಿಗೆ

ಪುಸ್ತಕಮನೆ ಪ್ರಕಟಣೆ ೧೩

ಓದು, ಬರಹ, ಬಲ್ಲವರ ಪುಸ್ತಿಕೆ

- ನಡುಬಾಳಿನ ನೀರ್ದಾಣ
- ಬಿ.ಎಂ.ಶ್ರೀ. ಪ್ರಯೋಗ
- ಕನ್‌ನಡದ ಬೀವುಟ
- ಶಂಕರ ಬಟ್ ಅವರ 'ಹೊಸ ಬರಹ'
- ಕನ್ನಡ ಶಬ್ದ ಸಂಪತ್ತನ್ನು ಒದಗಿಸುವ ವಿಧಾನಗಳು
- ಪಂಡಿತ ಮ.ಪ್ರ. ಪೂಜಾರ
- ಕುಡ್ವಿಯವರ ಒಂದಾಣೆ ಮಾಲೆ
- ಸಾಂಸ್ಕೃತಿಕ ಕಣಿವೆ ಕಂದರಗಳು
- ಸ್ವಾತಂತ್ರ್ಯೋತ್ತರ ಕರ್ನಾಟಕದ ಶಿಕ್ಷಣಕ್ಷೇತ್ರ
- ಕರ್ನಾಟಕದ ವಿದ್ಯಾರ್ಥಿಗಳು ಮತ್ತು ವಿದ್ಯಾವಂತ ಪದವೀಧರರು ದಡ್ಡರೇ?

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಓದು, ಬರಹ, ಬಲ್ಲವರ ಪುಸ್ತಿಕೆ

೨ನೇ ವರ್ಷದ ೪ನೇ ಪುಸ್ತಿಕೆ

ಡಿಸೆಂಬರ್ ೨೦೦೭

ಬೆಲೆ

ಒಟ್ಟು 24 ಪುಸ್ತಿಕೆಗಳಿಗೆ

ರೂ. 500/-

ಬೆಂಗಳೂರಿನ ಹೊರಗಿನವರು ಹಣವನ್ನು
ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ
'ಪುಸ್ತಕಮನೆ'
ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ

ಒಳಪುಟಗಳಲ್ಲಿ....

ಪ್ರಕಾಶನ : ಪುಸ್ತಕಮನೆ
702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062
ಮೊಬೈಲ್ : 9845867184 / 9242221506
e-mail : hariharapriya@gmail.com pustakamane@yahoo.com

ಮುದ್ರಣ : ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು 560 026 ದೂರವಾಣಿ : 32715773 / 26757159

೧

ನಡುಬಾಳಿನ ನೀದರ್ಾಣ

ಸಂಪಾದಕ

ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾಡಬಹುದಾದ-ಮಾಡಬೇಕಾದ ಒಂದು ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೈಗೆತ್ತಿಕೊಂಡಿದೆ. ಅದಕ್ಕಾಗಿ ಅಭಿನಂದನೆಗಳು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ, ವಿಶ್ವವಿದ್ಯಾಲಯಗಳ ಘಟಿಕೋತ್ಸವ ಭಾಷಣಗಳಿಗಿಂತ "ಮನೆಯಂಗಳದಲ್ಲಿ ಮಾತುಕತೆ'ಯ ಈ ಅತಿಥಿ ಸ್ಥಾನ ದೊಡ್ಡದು ಎಂದು ನನ್ನ ಭಾವನೆ. ಕೇವಲ ಸಾಹಿತ್ಯಕ್ಕೋ, ಉನ್ನತ ಅಧಿಕಾರ ಸ್ಥಾನಕ್ಕೋ, ವಯಸ್ಸಾದವರು ಎಂಬ ಒಂದೇ ಕಾರಣಕ್ಕೋ-ಸೀಮಿತವಾಗದೆ, ನಾಡಿನ ನಾನಾ ಕ್ಷೇತ್ರದ ಗಣ್ಯರನ್ನು ಆಹ್ವಾನಿಸಿ, ಅವರವರ ಬದುಕು, ಅನುಭವ, ಆಲೋಚನೆಗಳನ್ನು ತೆರೆದಿರಿಸಿ, ನೇರವಾಗಿ ಸಾರ್ವಜನಿಕರೊಂದಿಗೆ ಮುಖಾಮುಖಿಯಾಗಿಸುವ ಈ ಕ್ರಿಯಾವಿಧಿ ವಿಧಾನ ನಿಜಕ್ಕೂ ಸ್ಮರಣೀಯವಾದದ್ದು. ಈವರೆಗಿನ ಕಲಾಪವನ್ನು ಆಡಿಯೊ ವಿಡಿಯೊ ಮುಖೇಣ ಸಂರಕ್ಷಿಸುವ ಕೆಲಸ ಆಗಿದ್ದರೆ ಚೆನ್ನ. ಏಕೆಂದರೆ ೮೧ ಜನ ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಜಾನಪದ, ಚಿತ್ರಕಲೆ, ಚಲನಚಿತ್ರ, ಶಿಕ್ಷಣ, ಯಕ್ಷಗಾನ, ಆಡಳಿತ, ಪತ್ರಿಕೋದ್ಯಮ, ವಿಜ್ಞಾನ, ನ್ಯಾಯಾಂಗ, ಸ್ವಾತಂತ್ರ್ಯ ಹೋರಾಟ, ಅರ್ಥಶಾಸ್ತ್ರ - ಹೀಗೆ ತಮ್ಮತಮ್ಮ ರಂಗಗಳಲ್ಲಿ ನಾಡು ಬದುಕು ರೂಪಿಸಿದ ಹಿರಿಯರು ಪಾಲುಗೊಂಡದ್ದು ಮಹತ್ವದ್ದು. ಇಂತಹ ಕಾರ್ಯಕ್ರಮದಲ್ಲಿ ಸಾಹಿತಿ, ಪತ್ರಕರ್ತ, ಹೋರಾಟಗಾರ ಎಂದೋ ಅಥವಾ ಪುಸ್ತಕಪ್ರಿಯ ಎಂದೋ, ಬದುಕಿನ ನಡುಗುಡ್ಡೆಯ ಮೇಲಿರುವ ನನ್ನನ್ನೂ ಆಹ್ವಾನಿಸಿರುವುದು; ನಾಡು, ನುಡಿ, ಸಂಸ್ಕೃತಿ ನೀಡಿದ ಪ್ರೀತಿ ವಿಶ್ವಾಸ ಗೌರವ ಎಂದು ಭಾವಿಸುತ್ತಿದ್ದೇನೆ.

ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ದಿಟ್ಟತನದ ದಕ್ಷ ಅಧಿಕಾರಿಯಾಗಿ ಬಂದಿರುವ ಆಯುಕ್ತ ಶಿವನಂಜಯ್ಯ ಅವರನ್ನು, ಉತ್ಸಾಹಶೀಲ ಸಂವೇದನಾಶೀಲ ಬರಹಗಾರ ನಿರ್ದೇಶಕ ಕಾ.ತ. ಚಿಕ್ಕಣ್ಣ ಅವರನ್ನು ಹಾಗೂ ಇಲಾಖೆಯ ಎಲ್ಲ ಅಧಿಕಾರಿ ಸಿಬ್ಬಂದಿವರ್ಗದವರನ್ನೂ ಮನಸಾ ವಂದಿಸುತ್ತಿದ್ದೇನೆ. ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿರುವ ನಿಮಗೂ ಹೃತ್ಪೂರ್ವಕ ನಮಸ್ಕಾರಗಳು.

೪೦ ವರ್ಷಗಳ ಹಿಂದೆಯೇ ಸಾಂಸ್ಕೃತಿಕ ರಂಗದಲ್ಲಿ ಅಡಿಯಿಟ್ಟು ಏನು ಮಾಡಬೇಕು ಅಂದು ಕೊಂಡಿದ್ದೆನೋ, ಏನು ಮಾಡಲು ಆಯಿತೋ ಅಂತೂ ಈವರೆಗೆ ಏನೋ ಮಾಡಿದೆ ಎಂಬ ಕಿರುಪರಿಚಯ ವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಆಹ್ವಾನ ಪತ್ರಿಕೆಯಲ್ಲಿ ಅಚ್ಚಿಸಿದ್ದಾರೆ. ಅದರಿಂದ ಅದಕ್ಕೂ ಮೀರಿ ನನ್ನ ಬಗ್ಗೆ, ನನ್ನ ಕಲಾಪಗಳ ಬಗ್ಗೆ ಏನೊ ಏನೇನೋ ಗೊತ್ತಿರುವ ಹಿರಿಯ-ಕಿರಿಯ ಬಂಧುಗಳು ನೀವಾಗಿದ್ದೀರಿ, ಸಂತೋಷ.

ಆದರೆ ಈವತ್ತಿಗೂ ಈ ಕ್ಷಣಕ್ಕೂ ನಾನು ಮಾಡಿದ್ದೇನು, ಮಾಡಬೇಕು ಎಂದಿರುವುದೇನು-ಅದನ್ನು ಯಾವ ಪರಿಸರ ವಾತಾವರಣಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಳ್ಳಲು ಸಾಧ್ಯವಾಯಿತು ಎಂಬುದನ್ನು ಆಗಾಗ್ಗೆ, ಅದರಲ್ಲೂ ಯಾರಾದರೂ ಹೊಗಳಿದಾಗ, ತೆಗಳಿದಾಗ ನನಗೆ ನಾನೇ ಒಳಹೊಕ್ಕು ನೋಡಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತೇನೆ. ಆ ಮೂಲಕ ಏನಾಯಿತು, ಹೇಗಾಯಿತು, ನನಗೇ ಏನನ್ನಿಸುತ್ತಿದೆ, ಹೊರಗಿನವರಿಗೆ ಏನನ್ನಿಸುತ್ತಿದೆ ಎಂದು ಶೋಧಿಸಿಕೊಳ್ಳುವ ಪ್ರಯತ್ನವೇ ೧೯೬೬ರ 'ಹೇಮಾವತಿ' ಕವನ ಸಂಕಲನದಿಂದ ೨೦೦೫ರ 'ದಾರುಣ ಭಾರತ' ನಾಟಕದವರೆಗಿನದಾಗಿದೆ. ಕಳೆದ ಎರಡು ವರ್ಷಗಳ 'ಪ್ರಜಾಸಾಹಿತ್ಯ' ಎಂಬ ಮಾಸಪತ್ರಿಕೆಯೂ ಇವುಗಳ ಮುಂದುವರಿಕೆಯೇ ಆಗಿದೆ.

ಅಂತಹದ್ದೇ ಒಂದು ಅವಕಾಶ, ಪ್ರಯತ್ನ ಈ ದಿನ ಲಭಿಸಿದೆ ಎಂದುಕೊಂಡಿದ್ದೇನೆ. ನೀವೂ ಕೂಡ ಓದುವುದಲ್ಲ, ಕೇಳಿಸಿಕೊಳ್ಳುವ ಮೂಲಕ, ನಿಮ್ಮೊಳಗೆ ನನಗೆ ಸ್ಥಳಾವಕಾಶ ಸಿಗಬಹುದು, ಆ ಮೂಲಕ ಓದು, ಬರಹ, ಬದುಕು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬಹುದು ಎಂಬುವ ಆಸೆ, ನಿರೀಕ್ಷೆ ಇಟ್ಟುಕೊಂಡಿದ್ದೇನೆ.

ಇದೀಗ ನನ್ನ ಸ್ವಂತ ಅನುಭವಕ್ಕೆ ಬಂದ ಘಟನೆಯ ಮೂಲಕವೇ ಈವತ್ತಿನ ನನ್ನ ಹಾಗೂ ನಿಮ್ಮ ಪರಿಸರ ವಾತಾವರಣ ಎಂಥಾದ್ದು ಎಂಬುದನ್ನು ತಿಳಿಯಲು, ಆ ಮೂಲಕ ಅಕ್ಷರವಿದ್ಯೆ, ಕಲೆ, ಸಂಸ್ಕೃತಿ ಮಾಧ್ಯಮಗಳ ಹಕ್ಕು ಮತ್ತು ಬಾಧ್ಯತೆಗಳನ್ನು ಗುರುತಿಸಿಕೊಳ್ಳಲು ಸಾಧ್ಯವಾಗಬಹುದು ಎಂದುಕೊಂಡಿದ್ದೇನೆ.

ಇದೇ ಬೆಂಗಳೂರಿನಿಂದ ದಕ್ಷಿಣಕ್ಕೆ ಕೇವಲ ೧೫ ಕಿಲೋಮೀಟರ್ ದೂರದ, ಹೊಸ ಬಡಾವಣೆಯಲ್ಲಿ, ೪-೫ ವರ್ಷಗಳಿಂದ ಮನೆಕಟ್ಟಿಕೊಂಡು ವಾಸಿಸುತ್ತಿದ್ದೇವೆ. ಒಳ ರಸ್ತೆಯ ಬದಿಯ ಒಂದೇ ಮನೆ ನಮ್ಮದು. ಮನೆಯ ಪಕ್ಕದ ಸಾರ್ವಜನಿಕ ರಸ್ತೆಯಲ್ಲಿ ಶ್ರೀಮಂತರ ಹತ್ತಾರು ಎಕರೆ ಜಮೀನುಗಳೇ ಇವೆ. ವಾಸಕ್ಕೆ ಹೋದಾಗಿನಿಂದ, ವರ್ಷವರ್ಷವೂ ಮಳೆಬಿದ್ದಾಗ, ನಮ್ಮ ಮನೆಯ ರಸ್ತೆಗೇ ಶ್ರೀಮಂತರ ಜಮೀನಿನಿಂದ ನೀರು ನುಗ್ಗಿ ಬರುವುದರಿಂದ ಪೂರ್ಣ ಕೊರಕಲು ಬೀಳುತ್ತದೆ.

ನಮಗೆ ಹೊಸ ಜಾಗ. ಒಂದೇ ಮನೆ. ಇನ್ನೂ ನಾಗರೀಕ ಸೌಲಭ್ಯಗಳು ಇಲ್ಲ. ಆದರೂ ನಾವು ಬದುಕುತ್ತಿದ್ದೇವೆ. ಕುಟುಂಬಸ್ತ ಬೇರೆ.

ವರ್ಷವರ್ಷವೂ ಹೋಗಿ ಆ ಶ್ರೀಮಂತ ಜಮೀನುದಾರರನ್ನು ಕಾಣಲು ಪ್ರಯತ್ನಿಸಿದ್ದೇನೆ. ಕಂಡು ಆಗುತ್ತಿರುವ ದುರವಸ್ಥೆ ಹೇಳಲೂ ಪ್ರಯತ್ನಿಸಿದ್ದೇನೆ. ಭೇಟಿ ಸಾಧ್ಯವೇ ಆಗಲಿಲ್ಲ. ಏಕೆಂದರೆ ನಾವು ಕೇವಲ ಒಂದು ಸೈಟಿನ ನಿವಾಸಿಗಳು. ಅವರೋ ಶ್ರೀಮಂತ ಜಮೀನುದಾರರು. ಅವರ ಜಮೀನಿಗೊಬ್ಬ ಕಾವಲುಗಾರ. ಇಂದ್ರಾ ಹುಯ್ತಾನೆ ಹರೀತದೆ ಬತ್ತದೆ ಅದಕ್ಕೆ ಏನು ಮಾಡಾಕೆ ಆದೀತು ಎಂಬ ಎಲೆ ಅಡಿಕೆ ಹಾಕಿ ಉಗಿದಷ್ಟೇ ನೇರ ಉತ್ತರ. ಹೀಗಿರುವಾಗ ನಾನೇ ಸ್ವತಃ ನಿಂತು. ನೀರು ಹೋಗಲು ಹಿಕ್ಕಲು ತೆಗೆಯುವುದು, ಮಣ್ಣು ಕಲ್ಲು ಅಡ್ಡೆ ಹಾಕುವುದು ಮಾಡುತ್ತ ಬಂದಿರುವೆ. ವಯಸ್ಸು ೫೬ ದಾಟುತ್ತ ಬಂದಿದ್ದಾಯಿತು.

ಈ ಸಲ. ಮೊನ್ನೆಮೊನ್ನೆ. ಬಂದ ಮಳೆ ಕಡೆ ಗಮನ ಹೋಗಲಿಲ್ಲ. ಮೊಮ್ಮಗಳು ಮನೆಯ ಮುಂದೆ ಬಿದ್ದು, ಮಂಡಿ ಗಾಯ ಮಾಡಿಕೊಂಡಾಗಲೇ ಈ ಬಗ್ಗೆ ಮತ್ತೆ ಅರಿವಾದದ್ದು. ಏನಾದರೂ ಅನಾಹುತ ಪರರಿಗೆ ಆಗಲಿ ಆಗ ಬುದ್ಧಿ ಬಂದೀತು ಎಂದುಕೊಳ್ಳುವವರಿಗೇ ಅರಿವು ಹೆಚ್ಚುವಂತೆ ಆಗುತ್ತಲ್ಲ ಏಕೊ!

ತಿಂಗಳ ಹಿಂದೆಯೇ ಯಾರನ್ನೊ ಕಂಡು, ಸ್ವಲ್ಪ ಮಣ್ಣು ಕಲ್ಲು ಸುರಿಯಪ್ಪ; ನೀವೂ ಓಡಾಡುವ ರಸ್ತೆಯಲ್ಲವೆ; ಎಲ್ಲಕ್ಕೂ ಸರ್ಕಾರ ಅಧಿಕಾರಿಗಳನ್ನು ಕಾಣುವುದು ಕಾಯುವುದು ಸರಿಯಲ್ಲ ಎಂದು ಪರಿಪರಿ ಬೋಧಿಸಿದ್ದೆ. ಯಾವ ಗ್ರಹಚಾರವೊ ಆ ಪುಣ್ಯಾತ್ಮ ೪-೫ ಟ್ರಾಕ್ಟರ್ ಮಣ್ಣು ತಂದು ರಸ್ತೆಯಲ್ಲಿ ಹಾಕಿ ಹೋಗಿಬಿಟ್ಟಿದ್ದ. ಅದು ಗೊತ್ತಾದದ್ದು ದೂರದಲ್ಲಿಯೇ ಶಾಲೆ ವ್ಯಾನು ಮೊಮ್ಮಗಳನ್ನು ಬಿಟ್ಟು, ಮನೆ ಹತ್ತಿರ ಬರಲು ಸಾಧ್ಯವಾಗದೇ ಇದ್ದದ್ದು, ನಾಳೆ ಬೆಳಿಗ್ಗೆಯೂ ಇದೇ ಸ್ಥಿತಿ ಎಂಬುದು ಗೊತ್ತಾಯಿತು.

ಎಲ್ಲಿಗೋ ಹೋಗಿ ಮನೆಗೆ ಬರುತ್ತಿದ್ದಂತೆಯೇ ಹೆಂಡತಿ, ಕಳೆದ ೩೦ ವರ್ಷಗಳಂತೆಯೇ, ನಿಮಗೆ ಯಾಕೆ ಬೇಕು ಈ ಉಸಾಬರಿ? ಓಡಾಡುವ ಊರಿನ ಜನ, ಬೃಹತ್ ನಗರ ಪಾಲಿಕೆ, ಸರ್ಕಾರವೇ ಸುಮ್ಮನಿರುವಾಗ, ನಮಗೆ ಯಾಕೆ ಬೇಕು ಈ ಗೊಡವೆ? ಎಂದರೆ; ಮಗಳು ಮನೆಗೆ ಬಂದವಳೇ ಇಂತಹ ಕಡೆ ಇರುವುದು ಸಾಧ್ಯವಿಲ್ಲ. ಮಗು ಕರೆದುಕೊಂಡು ಬೇರೆ ಕಡೆ ಮನೆ ಮಾಡಿಕೊಂಡು ಹೋಗುತ್ತೇನೆ ಎಂದಳು. ಇದೆಲ್ಲ ನಡೆಯುವ ಹೊತ್ತಿಗೆ ಮಗನೂ ಬಂದು, ಯಾವಾಗಲೂ ಮನೆಯಲ್ಲಿ ಜಗಳವೇ, ಅದಕ್ಕಾಗಿ ಮನೆಗೆ ಬರಬೇಕೆ? ನೀವೇ ಇರಿ, ನಾನು ಹೋಗುತ್ತೇನೆ ಎಂದ.

ಇನ್ನೇನು ಸಾಯಂಕಾಲವೂ ತಿರುಗುತ್ತಿತ್ತು. ವಿಧಿ ಇಲ್ಲ. ತಪ್ಪು ನನ್ನದೆ. ಸಮಸ್ಯೆಗೆ ಗತಿ ಕಾಣಿಸಲೇಬೇಕು. ಗುದ್ದಲಿ ಹಿಡಿದು ಹೊರಟೆ. ೪-೫ ಟ್ರಾಕ್ಟರ್ ಮಣ್ಣನ್ನು ಒಬ್ಬನೇ ಎಳೆದು, ಸಮ ಮಾಡಿದೆ. ಆ ಸಮಯಕ್ಕೆ ಆ ಶ್ರೀಮಂತರ ಜಮೀನಿನ ಕಾವಲುಗಾರ ಹಾದುಹೋಗುತ್ತ ಇದ್ದ. ಏನಯ್ಯ ನಿಮ್ಮ ಯಜಮಾನ ಯಾವನೋ ಅವ ಮನಸ್ಸು ಮಾಡಿದರೆ ಈ ಎಲ್ಲ ಗೋಳು ತಪ್ಪಿಸಬಹುದಿತ್ತು. ಇಷ್ಟಕ್ಕೂ ಶ್ರೀಮಂತರು ಎನ್ನುತ್ತೀಯ. ಸಾರ್ವಜನಿಕರಿಗೆ ನಮ್ಮಂತಹವರಿಗೆ ಎಷ್ಟು ಕಿರುಕುಳ, ಹಿಂಸೆ ಆಗುತ್ತಿದೆ ನೋಡಯ್ಯ ಎಂದು ಆದದ್ದೆಲ್ಲ ವಿವರಿಸಿದೆ. ನೀನಾದರೂ ಮನಸ್ಸು ಮಾಡಿ, ಆ ಹರಿವ ನೀರು ಈ ಕಡೆ ಬರೋದು ತಪ್ಪಿಸಬಹುದಲ್ಲ. ಹೋಗಲಿ ನನಗಾದರೂ ಈಗ ಸಹಾಯ ಮಾಡಬಹುದಲ್ಲ ಎಂದೆ.

ನಮ್ಮ ಯಜಮಾನರನ್ನ ಏಕವಚನದಿಂದ ಕರೆಯೊ ನಿನ್ಯಾವನೋ ಎಂದು. ಕನ್ನಡದ ಶ್ರೇಷ್ಠ ಬೈಗುಳಗಳ ಕಾದಂಬರಿಯಾದ ಭೈರಪ್ಪನವರ "ಗೃಹಭಂಗ'ದ ಎಲ್ಲವನ್ನೂ ಮುಖಕ್ಕೆ ಉಗಳಿದ. ಮಾತು ಬೆಳೆಯಿತು.

ಪಕ್ಕದಲ್ಲಿದ್ದ ದೊಡ್ಡ ಕಲ್ಲು ಎತ್ತಿ, ಮಗನೇ ಇವತ್ತು ನೀನಿಲ್ಲದಂತೆ ಮಾಡುತ್ತೇನೆ ಎಂದು ಮೈಮೇಲೆ ಬಂದೇಬಿಟ್ಟ.

ಆ ಕ್ಷಣ. ತಲೆ ಚೂರುಚೂರು ಆಗಿಯೆ ಹೋಯಿತೇನೊ ಎಂಬ ಭಯಂಕರ ಶೂನ್ಯ ಆವರಿಸಿತು. ಹೇಗೆ ಅಲ್ಲಿಂದ ತಪ್ಪಿಸಿಕೊಂಡನಲ್ಲ ಕದಲಿ ಮನೆಗೆ ಬಂದೆ. ಈಗ ಕೇಳಿದರೂ ಹೇಳಲಾರೆ, ಗೊತ್ತಿಲ್ಲ. ಮನೆಯವರಿಗೂ ಏನನ್ನೂ ಹೇಳುವ ಸ್ಥಿತಿ ಅದಾಗಿರಲಿಲ್ಲ. ಬಟ್ಟೆ ಹಾಕಿಕೊಂಡು ಪೊಲೀಸ್ ಠಾಣೆಗೆ ಹೋಗುವುದೇ ನನ್ನ ಗುರಿಯಾಗಿತ್ತು.

ಇದ್ದಕ್ಕಿದ್ದಂತೆ ದೂರವಾಣಿ ಶಬ್ದ. ಬೆವರು ಕಿತ್ತುಕೊಳ್ಳುತ್ತಿದೆ. ಸಾವು ಕಂಡು ಬಂದು, ಜೀವ ದೇಹ ಎರಡೂ ತತ್ತರಿಸುತ್ತಿವೆ. ನಾನೇ ಎತ್ತಿಕೊಂಡೆ. ನಾನು ವೆಂಕಟಸ್ವಾಮಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕನ್ನಡ ವಿಭಾಗದಿಂದ ಎಂಬ ನುಡಿಗಳು. ಏನು ಹೇಳಿ ಎಂದೆ, ಇದನ್ನೇ ಕೇಳಲು ಬದುಕಿ ಬಂದಿರುವಂತೆ. ಮೊನ್ನೆ ನಮ್ಮ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ನಿಮ್ಮ 'ಜಾಬಾಲಿ' ನಾಟಕಕ್ಕೆ ಶ್ರೇಷ್ಠ ರಚನೆ ಎಂದು ಪ್ರಶಸ್ತಿ ಬಂದಿದೆ. ನಿಮಗೆ ಮುಂಚೆಯೇ ತಿಳಿಸಲಾಗಲಿಲ್ಲ, ಕ್ಷಮಿಸಿ - ಎಂದರು.

ಅಳಬೇಕೊ ನಗಬೇಕೊ ನಿಜವಾಗಿಯೂ ಗೊತ್ತಾಗುವ ಸಮಯ ಅದಾಗಿರಲಿಲ್ಲ.

ಈಗ ಕಣ್ಣೆದುರಿಗೆ ತಲೆ ಒಡೆಯಲಿಕ್ಕೆ ಬಂದ ಶ್ರೀಮಂತ ಜಮೀನುದಾರನ ಕಾವಲುಗಾರ ಹೇಗೋ ಹಾಗೆಯೇ ೪೦ ವರ್ಷಗಳಿಂದ ಈ ನಾಡಿನ ಸಾಂಸ್ಕೃತಿಕ ಲೋಕದ ಪಟ್ಟಭದ್ರರು ಎಂದೂ ಯಾವ ಅವಕಾಶ, ಮನ್ನಣೆ ನೀಡದೆ ಇದ್ದದ್ದೂ ಈ ಗಳಿಗೆಯಲ್ಲಿ ನೆನಪಾಯಿತು. ಎರಡರಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಗೊತ್ತಾಗಲಿಲ್ಲ. ಅದರಲ್ಲೂ ಸುಮಾರು ೩೦ ವರ್ಷದ ಹಿಂದೆ ಪ್ರಕಟಿಸಿದ 'ಜಾಬಾಲಿ' ನಾಟಕವನ್ನು ರಾಯಚೂರಿನ ಅಲ್ತಾಫ್ ರಂಗಮಿತ್ರರು ಪರಿಚಯವೇ ಇಲ್ಲದಿದ್ದರೂ ಪ್ರದರ್ಶಿಸಿ, ಬಹುಮಾನಗಿಟ್ಟಿಸಿದ್ದು - ಸಾವಿನ ಗಳಿಗೆಯಲ್ಲಿ ಗುಟುಕು ನೀರು ಹೊಯ್ದಂತೆ ಅನ್ನಿಸಿತು.

ಪೊಲೀಸ್ ಠಾಣೆಗೆ ಹೋಗಿ, ನಡೆದದ್ದು ವಿವರಿಸಿ, ಅವನು ಅಲ್ಲೇ ಇದ್ದಾನೆ, ಬೇಗ ಬನ್ನಿ ಎಂದು ಕೇಳಿಕೊಂಡೆ. ಒಂದು ಗಂಟೆ ಕಾಲ, ಹಿರಿಯ ಅಧಿಕಾರಿಗಳು ಇಲ್ಲ, ಹೋಗು ಎಂದವ ಇನ್ನೇನೊ ಕೆಲಸವಿದೆ ಎಂದ, ಮತ್ತೊಬ್ಬನನ್ನು ಹೋಗು ಎಂದರೆ ಅವ ಟಾಯ್‌ಲೆಟ್‌ಗೆ ಹೋಗಿಬರುತ್ತೇನೆ ಎಂದ.... ಅಂತೂ ಒಬ್ಬ ಪೇದೆಯನ್ನು ಕರೆದುಕೊಂಡು ಬರುವ ಹೊತ್ತಿಗೆ, ಈ ಕಾವಲುಗಾರ ಇರಲಿಲ್ಲ. ಜಮೀನಿನ ಹತ್ತಿ ಹೋದರೆ ಸಿಗಲಿಲ್ಲ. ನನ್ನಿಂದ ದೂರು ಬರೆಸಿಕೊಂಡು, ನಾಳೆ ಅವನನ್ನು ಹಿಡಿದು ತರುತ್ತೇವೆ ಹೋಗಿ ಎಂದು ಕಳಿಸಿಕೊಟ್ಟರು.

ರಾತ್ರಿ ಎಲ್ಲಾ ನಿದ್ದೆ ಇಲ್ಲ. ಯಾರೂ ಹೇಳುವವರು ಕೇಳುವವರು ಇಲ್ಲದ ಈ ನೆಲದಲ್ಲಿ, ಯಾವ ಕ್ಷಣ ಹೇಗೋ ಎನ್ನುವ ಸ್ಥಳದಲ್ಲಿ, ಕುಟುಂಬ ಸಮೇತ ಯಾವ ಧೈರ್ಯದಿಂದ ಬದುಕು ನಡೆಸಲು ಸಾಧ್ಯ? ಸಾರ್ವಜನಿಕರಿಗೆ ಆಗುತ್ತಿರುವ ದುರವಸ್ಥೆ, ದುರ್ಗತಿ ತಪ್ಪಿಸಲು ಯಾವ ರೀತಿ ಹೋರಾಟ ಮಾಡಬೇಕು?

ಇನ್ನೊಂದು ಬದಿಗೆ : ಆ ಕಾವಲುಗಾರ ತಲೆ ಚಚ್ಚುತ್ತೇನೆ ಎಂದಾಗ, ನಾನೂ ಅವನನ್ನು ಕತ್ತರಿಸಿ ತುಂಡು ಮಾಡುತ್ತೇನೆ ಎಂದು ನುಗ್ಗಲಿಲ್ಲ ಏಕೆ? ಅವನ ಕೆಚ್ಚು, ರೊಚ್ಚು ನನಗೆ ಬರಲಿಲ್ಲ ಏಕೆ? ಅವನ ಆ ದೇಹ, ಆ ಮನಸ್ಸಿನ ಗಟ್ಟಿತನ ನನಗೆ ಇಲ್ಲವೆ? ಅವನ ಶ್ರೀಮಂತನಷ್ಟೇ ನಾನೂ ಶ್ರೀಮಂತನಾಗಿದ್ದರೆ ನನಗೆ ತಗ್ಗಿಬಗ್ಗಿ ವರ್ತಿಸುತ್ತಿದ್ದನೆ?

ಈ ವಿಷಯ ಸಾರ್ವಜನಿಕರಿಗೆ ತಿಳಿಸುವುದು, ಪೊಲೀಸರಿಗೆ ಸರ್ಕಾರದವರಿಗೆ ತಿಳಿಸಿ ಕಾನೂನು ಕಟ್ಟಲೆ ಬಳಸುವುದು - ಎಂದು ತೀರ್ಮಾನಿಸಿಕೊಂಡೆ.

ಬೆಳಗ್ಗೆ ಹೋಗಿ ಠಾಣೆಯಲ್ಲಿ ವಿಚಾರಿಸಿದೆ. ಅವನು ಸಿಕ್ಕಲಿಲ್ಲ, ಮಧ್ಯಾಹ್ನ ಸಂಜೆ ಹೊತ್ತಿಗೆ ಹಿಡಿದು ತರುತ್ತೇವೆ ಎಂದರು. ದಿಢೀರಂತ ಸಂಜೆ ಹೊತ್ತಿಗೆ ಮತ್ತೆ ಹೋದೆ. ವಿಚಾರಿಸಿದೆ. ಸಿಕ್ಕಿಲ್ಲ ಎಂದರು. ರೋಸಿ ಹೋಗಿ, ತಲೆಚಚ್ಚಿಸಿಕೊಂಡೋ, ಪರಸ್ಪರ ಹೊಡೆದಾಡಿಕೊಂಡೋ ಬಂದಿದ್ದರೆ ನೀವು ಈ ವಿಷಯ ಬಗೆಹರಿಸುತ್ತಿದ್ದಿರಾ ? ಅಂದೆ.

ಪಕ್ಕದ ಕುರ್ಚಿಯಲ್ಲಿ ಕುಳಿತಿದ್ದ, ಕಟ್ಟುಮಸ್ತಾದ ಯುವಕನೊಬ್ಬ, ಏನೋ ಪಾಪ ಸ್ವಾಮಿ, ತಿಳಿಯದೋನು, ತಪ್ಪು ಮಾಡಿದ್ದಾನೆ, ನೀವು ತಿಳಿದೋರು ಕ್ಷಮಿಸಬೇಕು ಎಂದ. ಆತ ಯಾರೊ ಏನೊ. ಮಾಮೂಲಿಯಾಗಿ

ಗ್ರಾಮೀಣರಂತೆ ವಿಷಯ ಕೇಳಿ ತನಗೆ ತಿಳಿದ ಸಲಹೆ ಕೊಡುತ್ತಿದ್ದಾನೆ ಎಂದು ಭಾವಿಸಿದೆ. ಹೀಗೇ ಮಾತಾಡುತ್ತ ಮೊಬೈಲ್ ತೆಗೆದು, ಏ ಬಾರ್ಲಾ, ಸ್ವಾಮಿಗಳೂ ಬಂದವ್ರೆ, ಬೇವರ್ಸಿ ನನ್ ಮಗನೆ, ಬಾ, ಸ್ವಾಮಿಗೋಳನ್ನ ಕಾಯ್ಸಬಾರ್ದು - ಅಂತ ಯಾರಿಗೆ ಅನ್ನುತ್ತಿದ್ದಾನೆ ಅನ್ನುವ ಹೊತ್ತಿಗೆ ಆ ಕಾವಲುಗಾರ ಪ್ರತ್ಯಕ್ಷನಾದ.

ಪೊಲೀಸ್ ಠಾಣೆ, ಪೊಲೀಸ್ ಸಿಬ್ಬಂದಿ ಎಲ್ಲಾ ಇದ್ದ ಹಾಗೇ ಇದ್ದವು.

ಈತ ಯಾರು ಎಂದು ಪಕ್ಕದಲ್ಲಿದ್ದ ಜೈರೆಯವರನ್ನು ಕೇಳಿದೆ. ಅವನೂ ಅವನ ಕಡೆಯವನೊ ಏನೊ. ಅಥವಾ ಪೊಲೀಸ್ ಠಾಣೆಯೇ, ಅಲ್ಲಿರುವವರೆಲ್ಲ ಅವನ ಕಡೆಯವರೊ ಏನೊ. ಯಾಕೆ ಸ್ವಾಮಿ, ನಿಮಗೆ ಗೊತ್ತಿಲ್ವ, ಹೊಸಬರು ಅಂತ ಕಾಣುತ್ತೆ. ಈ ಊರಿನ ದೊಡ್ಡ ಮನುಷ್ಯರ ತಮ್ಮ ಅಂದರು.

ಆಯಿತು. ಯಾರಾದರೆ ನನಗೇನು? ನಾನು ಮಾಡಿದ ತಪ್ಪೇನು? ಎಂದುಕೊಂಡು, ಆ ಕಾವಲುಗಾರನೇ ಹೇಳಲಿ, ಏನು ಹೇಳುತ್ತಾನೊ ಕೇಳಿ ಎಂದೆ. ಆ ದೊಡ್ಡವರ ತಮ್ಮ, ಏ ಕಚಡಾ ನನ್ ಮಗನೆ, ಅದು ಬೀದಿ ವಿಷಯ. ನೀರಾರು ಹರೀಲಿ ರಕ್ತನಾದ್ರು ಹರೀಲಿ ನಿನಗೇನ್ಲಾ? ನಿನ್ನ ಯಜಮಾನರು ಉಂಟು ಈ ಸ್ವಾಮಿಗಳು ಉಂಟು. ನಿನಗೇನಾಗಬೇಕು ಹೇಳು ಬಡ್ಡೀದೆ? ಇಲ್ಲೀಂದ್ರೆ ಇಲ್ಲಿ ಇಲ್ಲಾಂದ್ರೆ ಎಲ್ಲಾದ್ರೂ ಎಂಜಲು ತಿನ್ನೊ ನಾಯಿನನ್ ಮಗನೆ ನಿನಗೇನಾಗಬೇಕು, ತಪ್ಪಾಯ್ತು ಅಂತ ಕೇಳು ಅಂದ.

ತಪ್ಪು ಸರಿ ಪ್ರಶ್ನೆ ಅಲ್ಲ. ೪-೫ ವರ್ಷದಿಂದ ನೀರು ಹರೀತಾನೇ ಇದೆ. ಬೆಳಗ್ಗೆ ನಂ ಮಗಾ ಬಿದ್ದು ಕಾಲು ಮುರಕೊಂಡದೆ. ಇರೋದು ಒಂದೇ ಮನೆ. ಯಾರು ಬಂದು ರಿಪೇರಿ ಮಾಡಿಸ್ತಾರೆ. ಮುಂದೆ ಏನೇನು ಅನಾಹುತ ಕಾದಿದೆಯೊ. ಇವನೂ ಅಲ್ಲೇ ಓಡಾಡಬೇಕು. ಇವನೇ ಅಲ್ಲಿ ಸ್ವಲ್ಪ ಅಡ್ಡ ಹಾಕಿ ತಪ್ಪಿಸಬಹುದು. ಹೀಗಿರುವಾಗ ತಲೆ ಚೆಚ್ಚಿತೀನಿ ಅಂತ ಬಂದಿದ್ದಾನಲ್ಲ, ಚೆಚ್ಚೇ ಬಿಟ್ಟಿದ್ದರೆ ಗತಿ ಏನಪ್ಪಾ? ಎಂದು ನನ್ನ ಅಳಲು ತೋಡಿಕೊಂಡೆ.

ನೋಡಿಸ್ವಾಮಿ ಅವನು ಬಡವ, ಅಮಾಯಕ, ಅವಿದ್ಯಾವಂತ. ಓದಕ್ಕೆ ಬರೆಯೋಕ್ಕೆ ಬಂದಿದ್ರೆ, ಆ ಕತೆ ಬ್ಯಾರೆ. ನೀವಾದ್ರೂ ನಿಂತ್ರೆ ಕುಂತ್ರೆ ಬರೀತೀರಿ. ಓದದೇ ಕಸಬು. ಎಂಥ ದೊಡ್ಡೋರನ್ನು ಅನ್ನೊಂಡ್ರೆ ಕಾಣ್ತೀರಿ. ಚೆನ್ನಾಗಿ ಮಾತಾಡಬಲ್ರೀ. ಕವಿಗಳು. ಪುಸ್ತಕ ಬರೀತೀರಿ. ಪ್ರಶಸ್ತಿಗಳು ಸನ್ಮಾನ ತಗೋತೀರಿ. ಟಿ.ವಿ. ರೇಡಿಯೋಗಳಲ್ಲಿ ನೀವು ಬರ್ತೀರಿ. ನೀವೇನು ಸಾಮಾನ್ಯರ? ಏನೋ ಪಾಪ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರವ? ಬುಟ್ಟುಬುಡಿಸ್ವಾಮಿ – ಅಂದ ಆ ದೊಡ್ಡ ಮನುಷ್ಯರ ತಮ್ಮ.

ಇಷ್ಟೆಲ್ಲ ನನ್ನ ಬಗ್ಗೆ ತಿಳಿದ ಇವ, ನನಗೇ ಗೊತ್ತಿಲ್ಲವೆ? ನನ್ನ ಎಲ್ಲಾ ಆಗು ಹೋಗು ಗಮನಿಸುತ್ತಿದ್ದಾನಲ್ಲ, ಗತಿ ಏನು? ಅಂದುಕೊಂಡೆ. ಕಾವಲುಗಾರ ಸುಮ್ಮನೇ ನಿಂತಿದ್ದು, ಈ ದೊಡ್ಡ ಮನುಷ್ಯರ ತಮ್ಮನೇ ಮಾತಾಡ್ತಾ ಇದ್ದಾನಲ್ಲಾ ಅಂತ, ಮಾಡೋದೆಲ್ಲ ಮಾಡಿ ನಿಮ್ಮನ್ನ ಹಿಡಿದುಕೊಂಡು ಬಂದಿದ್ದಾನಲ್ಲಾ ಅಂದುಬಿಟ್ಟೆ.

ಇಷ್ಟು ಕಾಲ ಮೆತ್ತಗೇ ಇದ್ದ, ನನ್ನ ಎಲ್ಲ ಪೂರ್ವೋತ್ತರ ಹಾಡಿ ಹೊಗಳಿದ, ಆ ದೊಡ್ಡವರ ತಮ್ಮ, ಏನ್ ಸ್ವಾಮಿ ಭಾರೀ ಜೋರು ಮಾಡ್ತಾ ಇದ್ದೀರಿ. ಅವನೇನು ನಿಮ್ಮ ತಲೆ ಒಡ್ದನೆ? ಅದ ನೋಡಿರೋರು ಯಾರು ತೋರ್ಸಿ ಸ್ವಾಮಿ? ಎಂದವನೇ, ಸುಮ್ಮನೆ ಎಲ್ಲಾ ನೋಡುತ್ತ ಕೂತಿದ್ದ ಪೊಲೀಸಿನವನ ಕಡೆ ತಿರುಗಿ, ತಗೊಳ್ರಿ ಪೇಪರ್ರು, ಬರೀರಿ. ಈವಯ್ಯ ಅವನ ಹೆಂಡ್ತೀನ ಹಿಡಕ್ಕೊಳ್ಳೋಕೆ ಹೋಗಿದ್ದ, ಇದು ನಡದದೆ. ಅದಕ್ಕೆ ಹಿಂಗೆ ಕಂಪ್ಲೆಂಟು ಕೊಟ್ಟವನೆ ಅಂತ ಹಾರಾಡಿ ಚೀರಾಡಿಬಿಟ್ಟ.

ತಲೆ ಒಡೆದಿದ್ರೂ ಇಷ್ಟು ನೋವು ಹಿಂಸೆ ಆಗ್ತಾ ಇರಲಿಲ್ಲ ಅನ್ನಿಸಿಬಿಟ್ಟಿತು. ಕಾವಲಿಯಿಂದ ಬೆಂಕಿಗೆ ಹಾಕಿದಂತೆ ಆಯಿತು. ಬಡವ, ಅಮಾಯಕ, ಅವಿದ್ಯಾವಂತ ಒಂದು ಕಡೆ, ಸಾಕ್ಷಾತ್ ರಾಕ್ಷಸ ಸ್ವರೂಪಿ ಇನ್ನೊಂದು ಕಡೆ.

ಆ ರಾಕ್ಷಸ ಸಂಸ್ಕೃತಿಗೆ ನಾನೇ ಹೊಂದಿಕೊಳ್ಳಲು ಆಗಲಿಲ್ಲವೋ, ಇವನ ಬಡತನ, ಅಮಾಯಕ, ಅವಿದ್ಯಾವಂತ ಸ್ಥಿತಿಗೆ ನಾನೇ ಕಾರಣಾನೋ ಒಂದೂ ತಿಳಿಯಲಾರದೇ ನಡುಗಿಬಿಟ್ಟೆ, ಅವನ ಭಯ ಹೋಗಿ ಇವನ ಭಯ ಶುರುವಾಯಿತು. ಹೋಗಿಲಿ ಬಿಡಿ ಎಂದು, ದೂರು ವಾಪಸ್ಸು ಪಡೆದು ಎದ್ದೆ. ಹಂಗೆ ಬನ್ನಿ ದಾರಿಗೆ ಅಂದ ರಾಗ ಬೆನ್ನಿನ ಹಿಂದೆ ಕೇಳಿ ಬಂದಿತು.

ರಸ್ತೆ ಹಾಗೇ ಇದೆ, ಪೊಲೀಸ್ ಠಾಣೆ ತರಹ. ಮಳೆ ಬೀಳುತ್ತಲೇ ಇದೆ, ಕಾನೂನು ಕಟ್ಟಳೆ ತರಹ.

ನಾನೂ ಬದುಕಿದ್ದೇನೆ. ಆ ಕಾವಲುಗಾರ ಅವನ್ನು ಕಾಪಾಡಿದ ದೊಡ್ಡವರ ತಮ್ಮ - ಇಬ್ಬರೂ ಬದುಕಿಯೇ ಇದ್ದಾರೆ.

ಇದು ಕರ್ನಾಟಕ. ಇದೇ ಭಾರತ. ಇದೂ ೨೧ನೇ ಶತಮಾನ.

ನನಗಿಂತ ಹಿಂದೆ ನಮ್ಮ ತಾಯಿ ತಂದೆ ಇದೇ ಸಮಸ್ಯೆ ಸಾಯುವವರೆಗೂ ಎದುರಿಸಿದರು. ಜಾತಿ, ಹುಟ್ಟಿದ ಊರು, ಹಣ, ಅಧಿಕಾರ, ವೃತ್ತಿ ಎಲ್ಲವೂ ಕಾಡಿದವು. ಇರಗೊಡಿಸಲಿಲ್ಲ. ನಮಗೂ ಇದೇ ಸಮಸ್ಯೆ ಎದುರಿಸುತ್ತಲೇ ಇದ್ದೇವೆ. ನಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ ಇದು ತಪ್ಪುತ್ತದೆ ಅನ್ನಿಸುತ್ತಿಲ್ಲ.

ಆದರೂ ನಾನು ಸಾಹಿತಿ, ಪತ್ರಕರ್ತ, ಹೋರಾಟಗಾರ. ಬಟ್ಟೆ ಹಾಕಿಕೊಂಡು, ಪೆನ್ನು ಹಿಡಿದು, ವೇದಿಕೆ ಹತ್ತಿ, ಸುಂದರವಾಗಿ ಅರ್ಥಬದ್ಧವಾಗಿ ಮಾತಾಡಿ ಚಪ್ಪಾಳೆ ಗಿಟ್ಟಿಸಲು, ಹಾರ ತುರಾಯಿ ಹಾಕಿಸಿಕೊಳ್ಳಲು ಈ ಕೊರಳು ಸಿದ್ಧವಾಗುತ್ತಲೇ ಇರುತ್ತದೆ. ೪೦ ಪುಸ್ತಕಗಳು ಹೀಗೇ ಬರೆಯುತ್ತ ಬಂದಿದ್ದೇನೆ. ೪-೫ ಪತ್ರಿಕೆಗಳಿಗೆ ಸಂಪಾದಕನಾಗಿದ್ದೇನೆ. ನಾಡು, ನುಡಿ, ಸಂಸ್ಕೃತಿಗೆ ಹೋರಾಟ ಮಾಡುತ್ತಿದ್ದೇನೆ. ಸಾಲದು ಎಂದು ೪೦ ಸಾವಿರ ಪುಸ್ತಕ ಸಂಗ್ರಹಿಸಿ, ಮೆರೆದಿದ್ದೇನೆ.

ಇತ್ತೀಚೆಗೆ ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳ ಬಗ್ಗೆ ದಿನವೂ ಹೋರಾಟ ನಡೆಯುತ್ತಲೇ ಇದೆ. ಮಾಧ್ಯಮಗಳಲ್ಲೂ ಸುದ್ದಿ ಬಿಂಬಗಳು ಪುಂಖಾನುಪುಂಖವಾಗಿ ಬರುತ್ತಲೇ ಇವೆ. ಈ ನಡುವೆ ಸರ್ಕಾರ, ನಾನಾ ಬಗೆಯ ಪಕ್ಷಗಳು ಬರುತ್ತಲೇ ಇವೆ. ಹೋಗುತ್ತಲೇ ಇವೆ.

ಬದುಕಲಾರದ ನನ್ನಂತಹ ವಿದ್ಯಾವಂತರು, ಕಾವಲುಗಾರನಂತಹ ತಲೆ ಚೆಚ್ಚುವವರು, ಇಬ್ಬರನ್ನೂ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು ಆಡಿಸುವ ದೊಡ್ಡವರ ತಮ್ಮಂದಿರು ಈ ಪ್ರಜಾಪ್ರಭುತ್ವದಲ್ಲಿ ನಮ್ಮ ನಡುವೆಯೇ ಇದ್ದಾರೆ. ಇರುತ್ತಾರೆ.

ಹಾಗಾದರೆ ನನ್ನ ನಿಮ್ಮ ಹಕ್ಕು ಬಾಧ್ಯತೆ ಏನು? ಈವರೆಗಿನ ಓದು ಬರಹ ಬದುಕು ಯಾವ ಪುರುಷಾರ್ಥಕ್ಕೆ? ಹೌದು, ನಾನು ಬದಲಾಗಬೇಕು. ಕಾವಲುಗಾರ ಬದಲಾಗಬೇಕು. ದೊಡ್ಡವರು ಬದಲಾಗಬೇಕು. ಬದಲಾಗುವುದು ಹೇಗೆ? ಯಾವಾಗ? ಯಾರಿಂದ ?

ಈವರೆಗಿನ ೫೬ ವರ್ಷಗಳು ಹೀಗೇ ಆಯಿತು. ಇನ್ನು ಇರುವ ಕಾಲದಲ್ಲಿ ಏನು ಮಾಡಬಹುದು, ಏನು ಮಾಡಬೇಕು ಎಂದು ಕಾದು ನಿಂತಿರುವೆ.

ಇದೆಲ್ಲ ನನ್ನ ಪುರಾಣವಾಯಿತು. ನಿಮಗಾರಿಗೂ ಈ ಸಮಸ್ಯೆ, ಹಿಂಸೆ ಇಲ್ಲವೆ? ನೀವು ಸಹಜವಾಗಿಯೇ ಬದುಕಿದ್ದೀರಾ? ನೀವು ಕಂಡುಕೊಂಡ ಮಾರ್ಗ, ಹಿಡಿದ ದಾರಿ ಯಾವುದು ? ಅಥವಾ ನಿಮ್ಮಲ್ಲಿ ವಿದ್ಯಾವಂತ, ಕಾವಲುಗಾರ, ದೊಡ್ಡವರು ಯಾರು? ದಯವಿಟ್ಟು ಹೇಳಿ ನೀವು ಯಾರ ಕಡೆ?

❑

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ದೂರ-ದರುಶನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡಸುತ್ತಿರುವ 'ಮನೆಯಂಗಳದಲ್ಲಿ ಮಾತುಕತೆ', ರಾಜ್ಯದ ಪ್ರತಿಷ್ಠಿತ ಕಾರ್ಯಕ್ರಮ. ಆದರೆ 'ಕನ್ನಡಪ್ರಭ' ಸೇರಿ ಕರ್ನಾಟಕ ನೆಲದ ಇಂಗ್ಲಿಷ್ ಪತ್ರಿಕೆಗಳು ಹಾಗೂ 'ಈ ಟಿವಿ'ಯಂತಹ (ಒಂದು ಸಾಲಿನ) ಎಲ್ಲಾ ದೂರದರ್ಶನಗಳೂ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಬಗೆಯುತ್ತಿರುವ ಅನಾದರ, ಅಲಕ್ಷ್ಯ, ನಾಚಿಕೆಗೇಡಿನ ವಿಷಯ. ಅದರಲ್ಲೂ ಸರ್ಕಾರಿ ದೂರದರ್ಶನ, ತನ್ನ ನಿರ್ದೇಶಕನ ಹಾಡು, ಕುಣಿತ, ಮುಖದರುಶನದಿಂದಲೇ ಸದಾ ಪವಿತ್ರ, ಪಾವನ, ಮನರಂಜನೆಯೊದಗಿಸುತ್ತಿರುವಾಗ ಇನ್ನು ಕನ್ನಡಿಗರಿಗೆ ಮನೆಯಂಗಳ ಎಂದೆಂದಿಗೂ ದೂರ-ದರುಶನವೇ ತಾನೆ.

ಸೂರ್ಯಸತ್ಯ

೨

ಬಿ.ಎಂ.ಶ್ರೀ. ಪ್ರಯೋಗ

"ಕನ್ನಡದ ಬಾವುಟ ಎಂಬ ಕವಿತೆಯ ಅಚ್ಚಿನ ವಿಷಯದಲ್ಲಿ ಒಂದು ಮಾತು. ಕನ್ನಡ ಬರವಣಿಗೆಯಲ್ಲಿ ಈಗಿರುವ ಅಕ್ಷರ ಸಂಯೋಜನೆಯ ಕ್ರಮ ಹಲವು ದೃಷ್ಟಿಗಳಿಂದ, ಅದರಲ್ಲಿಯೂ ಮುದ್ರಣ ದೃಷ್ಟಿಯಿಂದ ಬಲು ತೊಡಕಾದದ್ದೆಂದೂ, ಯಾವ ರೀತಿಯಲ್ಲಾದರೂ ಕೊಂಚಮಟ್ಟಿಗಾದರೂ ತೊಡಕು ಬಿಡಿಸಿ ಸರಳ ಮಾಡಬೇಕೆಂದೂ ಹಲವರು ಅಭಿಪ್ರಾಯಪಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ ಆಗಬೇಕಾದ ಮಾರ್ಪಾಟುಗಳ ಪರ್ಯಾಲೋಚನೆಯನ್ನು ಆ ಸಮಿತಿಗೆ ವಹಿಸಿದರು. ಆ ಸಮಿತಿ ಚರ್ಚೆಗಳನ್ನು ನಡೆಸಿ ಕೆಲವು ತೀರ್ಮಾನಗಳಿಗೆ ಬಂತು. ಅದು ಸೂಚಿಸಿದ ಕೆಲವು ಮಾರ್ಪಾಟುಗಳನ್ನು ಇಲ್ಲಿ ಬಳಕೆಗೆ ತಂದಿದೆ. ಮುಖ್ಯವಾಗಿ ಮಾಡಿರುವ ಮಾರ್ಪಾಟುಗಳು ಮೂರು :

(i) ದೀರ್ಘ ಚಿಹ್ನೆಯನ್ನು ಎಲ್ಲ ಕಡೆಯೂ ಒಂದೇ ರೀತಿ ಬರೆಯುವುದು-ಆ=ಅೀ, ಬಾ=ಬೀ, ಕೂ=ಕುೀ

(ii) ಒತ್ತಕ್ಷರಗಳನ್ನು ಬಿಡಿಸಿ ಪಕ್ಕದಲ್ಲಿ ಬರೆಯುವುದು-ಕನ್ನಡ=ಕನ್‌ನಡ, ಶ್ರೀ=ಶ್‌ರೀ,

(iii) ಎಲ್ಲಾ ಮಹಾಪ್ರಾಣ ಚಿಹ್ನೆಗಳನ್ನೂ ಅಲ್ಪಪ್ರಾಣ ಚಿಹ್ನೆಗಳ ಹೊಕ್ಕಳು ಸೀಳಿಯೇ ಮಾಡಿಕೊಳ್ಳುವುದು-ಛ-ಚ; ಭ=ಬ.

ಈ ಸಣ್ಣ ಮಾರ್ಪಾಟುಗಳನ್ನು ತಾಳ್ಮೆಯಿಂದಲೂ, ದೂರದೃಷ್ಟಿಯಿಂದಲೂ ನೋಡಿ ಎಲ್ಲರೂ ಒಪ್ಪಿಕೊಂಡು ಆದಷ್ಟು ಬೇಗ ಬಳಕೆಗೆ ತಂದರೆ ಎಳೆಯ ಮಕ್ಕಳ ಹೊರೆ, ಅಚ್ಚುಕೂಟಗಳ ತೊಡಕು ಅರ್ಧಕ್ಕರ್ಧ ಕಡಮೆಯಾಗುವುದೆಂದು ನಂಬಿದ್ದೇನೆ."

ಬೆಂಗಳೂರು
೧೭-೪-೧೯೩೮

ಕೃಪೆ: ಕನ್ನಡದ ಬಾವುಟ, ಮುನ್ನುಡಿ

೩

ಕನ್‌ನಡದ ಬೀವುಟ

ಶ್‌ರೀ

ಏರಿಸಿ, ಹೇರಿಸಿ, ಕನ್‌ನಡದ ಬೀವುಟ !
ಓಹೊ ಕನ್‌ನಡ ನೀಡು, ಅೀಹ ಕನ್‌ನಡ ನುಡಿ !
ಹೇರಿಸಿ, ತೋರಿಸಿ, ಕೆಚ್‌ಚೆದೆಯ ಬೀವುಟ!
ಗೀಳಿಯಲಿ ಫಟಪಟ, ದೀಳಿಯಲಿ ಚಟಚಟ,
ಉರಿಯಿತೋ ಉರಿಯಿತು ಹಗೆಯ ಹಟ ಮನೆ ಮಟ,
ಹೇಳ್ ಹೇಳ್ ಸುರಿಯಿತು ಹಗೆಯ ಬೀಡಕ್‌ಕಟ !

ಬೀಳ್ ಕನ್‌ನಡ ತೀಯ್!
ಏಳ್ ಕನ್‌ನಡ ತೀಯ್ !
ಅೀಳ್ ಕನ್‌ನಡ ತೀಯ್ !
ಕನ್‌ನಡಿಗರೊಡತಿ ಓ ರೀಜೇಶ್‌ವರೀ !

ಮೌರ್‌ಯ ಕಳಚುರ್‌ಯರು, ಗಂಗರು, ಕದಂಬರು,
ರಟ್‌ಟರು, ಚಳುಕ್‌ಯರು, ಹೊಯ್‌ಸಳರು, ಯೀದವರು,
ಇಳೆಗೆ ಮೇಲೀದವರು, ಬೀಣರು, ಜೀಣರು,
ಕೊಲೆಯ ಕೀಳ್‌ಕಿಚ್‌ಚಿಂಗೆ ತಂಪುಮಳೆ ತಳಿದು,
ಚೆಲುವು ನೆಲ ಸೀಲುತ್‌ತು, ಕಲೆಯ ಹೊಂಬೆಳೆಯಿಟ್‌ಟು,
ನಗಿಸಿದರು ನೀಡನು, ಕಡಿದು ಕಗ್‌ಗೀಡನು :
ಮೀನವನ ದೇವತೆಗೆ ತಂದ ಜಿನಭಕ್‌ತರು,
ಹಂಪೆಯ ವಿರುೀಪಾಕ್‌ಷ ಪುತ್‌ರರು, ವಿರಕ್‌ತರು,
ವೀರನೀರೀಯಣನ ಕೃಪೆಯೊಳೀಸಕ್‌ತರು,
ಶ್‌ರೀ ಗೌರಿ ಕೀವಲಿಹ ರೀಯರನುರಕ್‌ತರು,

ನಮ್‌ಮ ತೀಯ್ ಮಕ್‌ಕಳು-
ಬೀಳ ಬೆಳ್‌ದಿಂಗಳಲಿ ಒಲಿದು ನಲಿದವರು-
ಬೇವೊ ಬೆಲ್‌ಲವೊ ಬರಲಿ, ಮಲ್‌ಲಿಗೆಯೊ ಮುಳ್‌ಳೋ,
ಬೀನ ಬೆಳಕಿನಲಿ, ಮೀನದಳುಕಿನಲಿ,
ಚೆನ್‌ನು ಬದುಕನು ಕುಣಿಸಿ, ಒಲಿದು ನಲಿದವರು-

ನಮ್‌ಮ ತೀಯಣುಗರು,
ಪಂಪನೋ, ರನ್‌ನನೋ, ಬಸವನೋ, ಮೀಧವನೊ,
ಅೀ ಅಕ್‌ಕಮಹದೇವಿ, ನೀರಣಪ್ಪ, ಚಿಕದೇವ,
ಜಕ್‌ಕಣ, ಹೊನ್‌ನಮ್‌ಮ, ನಮ್‌ಮಮ್‌ಮನೆಳೆಯರು,
ಚೆಲುವ ಚೆಲುವೆಯರು-ಚಿನ್‌ನದ ಚಿಣ್‌ಣರು,
ಕಲಿಗಳು, ಕಿಡಿಗಳು, ಗಂಡರು, ಮೊಂಡರು.
ನಲಿದೊಲಿದು ಬೆಚ್‌ಚೊಂದು ನೆಚ್‌ಚಿಂಗೆ ಮೆಚ್‌ಚಿಂಗೆ
ಕಿಚ್‌ಚಿನಲ್ಲಿ ಹೀಯ್‌ದ ನಲ್‌ಲನ ಹಿಡಿದ ಹೆಂಡಿರು,
ಸತಿಗಳು, ಯತಿಗಳು, ವ್‌ರತಿಗಳು, ಕೃತಿಗಳು-
ಕನ್‌ನಡದ ಬೀವುಟವ ಹಿಡಿಯದವರೀರು?
ಕನ್‌ನಡದ ಬೀವುಟಕೆ ಮಡಿಯದವರೀರು?
ನಮ್‌ಮ ಇೀ ಬೀವುಟಕೆ ಮೀಡಿಯದವರೀರು?
ಹೇಳಿರೋ ಹೆಸರೊಂದು ನೆನಹಿನಲಿ ಸುಳಿದರೆ !
ಹುಡುಕಿರೋ ಹೇಡಿ ತೀನೊಬ್‌ಬ ಮನೆಗುಳಿದರೆ !
ಕನ್‌ನಡದ ನೀಡಲೀ,
ಕನ್‌ನಡದ ನುಡಿಯಲೀ
ಕನ್‌ನಡಿಗನೆದೆ ಕಡೆದ ತೆನೆಯರಲೀ।
ಬೆಳಕು ಹರಿಯಿತು ಏಳಿ,
ಇರುಳು ಸವೆಯಿತು ಏಳಿ,
ತೀಯ ಕರೆ ಕೇಳಿ,
ಏಳಿರೋ, ಏಳಿರೋ, ಬೀಳ ಬಲಿ ಬೀಳಿರೋ
ಎಲ್‌ಲೊಲುಮೆಯೇ ಕೂಡಿದೊಂದೊಲುಮೆ ತೀರಿರೋ,
ತೀಯುಳಿಯೆ ನೀನುಳಿದೆ,
ತೀಯಳಿಯೆ ನೀನಳಿದೆ,
ಮನೆ ಕೀಯಿ, ತುರು ಕೀಯಿ, ನೀಡ ಗುಡಿ ಗುಡಿ ಕೀಯಿ,
ಕೀಯಲೀರೆಯ, ಸೀಯಿ,
ಎಂದೆಲ್‌ಲ ಏಳಿರೋ-

ಅೕಹ ಕನ್‌ನಡ ನುಡಿ, ಅೕಹ ಕನ್‌ನಡ ನೕಡು,
ಹಿರಿಯ ಕನ್‌ನಡ ಪಡೆ, ಮರಿಯ ಕನ್‌ನಡ ಪಡೆ,
ಎೕಳಿರೋೕ, ಬೕಳಿರೋೕ.
ಕನ್‌ನಡದ ಬೕವುಟವ ಹಿಡಿಯಿರೋೕ, ನಡೆಯಿರೋೕ. ।
ಎೕಳ್ ಕನ್‌ನಡ ತೕಯ್,
ಬೕಳ್ ಕನ್‌ನಡ ತೕಯ್,
ಅೕಳ್ ಕನ್‌ನಡ ತೕಯ್,
ಕನ್‌ನಡಿಗರೊಡತಿ, ಒೕ ರೕಜೇಶ್‌ವರೀ !
ಇಂದಿನದೆ ಹೇಳಿರೋೕ ಇೕ ನಮ್‌ಮ ಬೕವುಟ !
ಕುಂದಿಹುದೆ ನೋೕಡಿರೋೕ ಇೕ ನಮ್‌ಮ ಬೕವುಟ !
ಕಂದದಿದೆ ಇಂದಿಗುೕ ಕನ್‌ನಡದ ಬೕವುಟ !
ಎೕನೇನ ಕಂಡುದೋೕ ಜೀವ ಕಳೆ ಬೕವುಟ
ಕನ್‌ನಡದ ಬೕವುಟಗಳೊಂದೇದ ಬಾವುಟ

ಎೕರಿಸಿ, ಹೕರಿಸಿ, ತೋೕರಿಸಿ ಬೕವುಟ ।
ತೇಲೕಡು, ಮೇಲೕಡು, ಒೕಲೕಡು ಬೕವುಟ ।
ಚೆಲುವೕಗು, ಗೆಲುವೕಗು, ಬಲವೕಗು ಬೕವುಟ ।
ಹೊನ್‌ನೕಗಿ, ಹೆಣ್‌ಣೕಗಿ, ಹಸನೕದ ಮಣ್‌ಣೕಗಿ
ಹೊಸಹೊಸತು ಕಣ್‌ಣೕಗಿ, ಬೆಳಕೕಗಿ, ಬೆಳೆಯೕಗಿ,
ಕುೕಡುತಿಹ ಕನ್‌ನಡದ ಹೊಮ್‌ಮುಗೆಯ ಕೕವೕಗಿ,
ಪರಿಪರಿಯ ಹೊಂಬಗೆಯ ಹೆರಿಗೆಯೕ ನೋೕವೕಗಿ,
ನೕಲುಮಡಿ ಕೃಷ್‌ಣನೕ ಕಟ್‌ಟೊಲುಮೆ ಹುೕವೕಗಿ,
ಬೕಳು ಎಲೆ ಬೕವುಟ
ಬೕಳ್ ಕನ್‌ನಡ ತೕಯ್
ಎೕಳ್ ಕನ್‌ನಡ ತೕಯ್
ಅೕಳ್ ಕನ್‌ನಡದ ತೕಯ್
ಕನ್‌ನಡಿಗರೊಡತಿ, ಒೕ ರೕಜೇಶ್‌ವರೀ!

೪

ಶಂಕರ ಬಟ್ ಅವರ 'ಹೊಸ ಬರಹ'

ಡಿ.ಎನ್. ಶಂಕರ ಬಟ್

ಈ ಪುಸ್ತಕದಲ್ಲಿ ನಾನು ಕನ್ನಡದ 'ಹೊಸ ಬರಹ'ವನ್ನು ಬಳಸಿದ್ದೇನೆ. ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಕನ್ನಡದಲ್ಲಿ ಬರೆಯುವಾಗ ಅವು ಸಂಸ್ಕೃತದಲ್ಲಿ ಹೇಗಿವೆಯೋ ಹಾಗೆಯೇ ಬರೆಯುವ ಅವಶ್ಯಕತೆಯಿಲ್ಲ : ಅವು ನಮ್ಮ ಉಚ್ಚಾರಣೆಯಲ್ಲಿ ಹೇಗಿವೆಯೋ ಹಾಗೆ ಬರೆದರೆ ಸಾಕು ಎಂಬ ನಿರ್ಣಯದ ಮೇಲೆ ಈ 'ಹೊಸ ಬರಹ'ವನ್ನು ಯೋಜಿಸಲಾಗಿದೆ.

ಬೇರೆ ಬಾಶೆಗಳಿಂದ ಎರವಲಾಗಿ ಬಂದ ಪದಗಳನ್ನು ನಾವು ನಮ್ಮ ಉಚ್ಚಾರಣೆಗನುಸಾರವಾಗಿ ಬರೆಯುತ್ತೇವಲ್ಲದೆ ಆ ಬಾಶೆಗಳಲ್ಲಿರುವ ಹಾಗೆ ಬರೆಯುವುದಿಲ್ಲ. ಇಂಗಿಶ್‌ನಲ್ಲಿ ಎರಡು ವಕಾರಗಳಿವೆ ಎರಡು ಶಕಾರಗಳಿವೆ. ಎರಡು ಸಕಾರಗಳಿವೆ. ಆದರೆ ಇವನ್ನೆಲ್ಲ ನಾವು ಒಂದೇ ರೀತಿ ಬರೆಯುತ್ತೇವೆ.

ಹಳೆಗನ್ನಡದಲ್ಲೇನೇ ಳ-ೞ ಮತ್ತು ರ-ಱಗಳ ನಡುವೆ ವ್ಯತ್ಯಾಸವಿತ್ತು; ಆದರೆ ನಾವು ಅದನ್ನೂ ಹೊಸಗನ್ನಡದಲ್ಲಿ ಬಿಟ್ಟುಕೊಟ್ಟಿದ್ದೇವೆ. ಹೀಗಿರುವಾಗ ಹಳೆಗನ್ನಡದ ಸಮಯಕ್ಕಿಂತಲೂ ಹಿಂದೆ ಸಂಸ್ಕೃತದಲ್ಲಿ ಇದ್ದಿರಬಹುದಾದ ವ್ಯತ್ಯಾಸಗಳನ್ನು ಸಂಸ್ಕೃತಕ್ಕಿಂತ ತೀರ ಬೇರಾಗಿರುವ ಕನ್ನಡ ಬಾಶೆಯ ಬರಹಗಳಲ್ಲಿ ಇವತ್ತಿಗೂ ಉಳಿಸಿಕೊಳ್ಳಬೇಕೆಂದು ಹೇಳುವುದು ಯಾವ ರೀತಿಯಲ್ಲೂ ಸಮರ್ತನೀಯವಲ್ಲ.

ಕನ್ನಡಿಗರ ಮಾತಿನಲ್ಲಿ ಸಂಸ್ಕೃತ ಪದಗಳಲ್ಲಿ ಬರುವ ಮಹಾಪ್ರಾಣಾಕ್ಶರಗಳು ಅಲ್ಪಪ್ರಾಣಾಕ್ಶರಗಳಾಗಿ ಉಚ್ಚಾರವಾಗುತ್ತವೆ; ಷಕಾರ ಶಕಾರವಾಗಿ, ಋಕಾರ ರು ಎಂಬುದಾಗಿ, ವಿಸರ್ಗ ಸ್ವರದ ಮೊದಲು ಹಕಾರವಾಗಿ ಮತ್ತು ವ್ಯಂಜನದ ಮೊದಲು ಆ ವ್ಯಂಜನದ ಒತ್ತಕ್ಶರವಾಗಿ, ಐ ಮತ್ತು ಔಗಳು ಅಯ್ ಮತ್ತು ಅವ್‌ಗಳಾಗಿ ಉಚ್ಚಾರವಾಗುತ್ತವೆ. ಹಾಗಾಗಿ, ಸಂಸ್ಕೃತ ಪದಗಳಲ್ಲಿ ಮಾತ್ರವೇ ಬರುವ ಈ ಎಲ್ಲಾ ಅಕ್ಶರಗಳನ್ನು (ಮತ್ತು ಕನ್ನಡ ಪದಗಳಲ್ಲೂ ಬರುವ ಐ, ಔಗಳನ್ನು) 'ಹೊಸ ಬರಹ'ದಲ್ಲಿ ಅವುಗಳ ಉಚ್ಚಾರಣೆಗನುಸಾರವಾಗಿ ಬರೆಯಲಾಗುತ್ತದೆ.

ಇದಲ್ಲದೆ, ರಕಾರಕ್ಕೆ ಕನ್ನಡದ ಲಿಪಿಯಲ್ಲಿ ಮೂರು ರೂಪಗಳಿವೆ (ರ, ೯ ಮತ್ತು ್ರ). ಇವುಗಳಲ್ಲಿ ಎರಡನೆಯದು ನಿಜಕ್ಕೂ ಅವಶ್ಯವಿಲ್ಲವಾದ ಕಾರಣ ಅದನ್ನೂ ಬಿಟ್ಟುಕೊಡಲಾಗಿದೆ. ಇದೇ ರೀತಿಯಲ್ಲಿ ಕನ್ನಡ ಲಿಪಿಯಲ್ಲಿ ಸೊನ್ನೆ (ಂ) (ಅನುಸ್ವಾರ)ವನ್ನು ಕೆಲವು ವಿಶಿಶ್ಟವಾದ ಸಂದರ್ಬಗಳಲ್ಲಿ ಮೂಗುಲಿ (ಅನುನಾಸಿಕ)ಗಳ ಬದಲು ಬಳಸುವ ಕಾರಣ, ಙ್ ಮತ್ತು ಞ್‌ಗಳ ಅವಶ್ಯಕತೆಯಿಲ್ಲ. ಹಾಗಾಗಿ ಅವನ್ನೂ ಬಿಟ್ಟುಕೊಡಲಾಗಿದೆ.

ಈ 'ಹೊಸ ಬರಹ'ದ ಕುರಿತು ಹೆಚ್ಚಿನ ವಿವರಗಳನ್ನು ನಾನು ೨೦೦೫ರಲ್ಲಿ ಬರೆದು ಪ್ರಕಟಿಸಿರುವ ಕನ್ನಡ ಬರಹವನ್ನು ಸರಿಪಡಿಸೋಣ! ಪುಸ್ತಕದಲ್ಲಿ ನೋಡಬಹುದು.

ಸಂಸ್ಕೃತದಿಂದ ಎರವಲಾಗಿ ಬಂದ ಪದಗಳನ್ನು ಈ ರೀತಿ ಬರೆಯುವುದರಿಂದ ಅವು ಬಂದಿರುವ ವಾಕ್ಯಗಳನ್ನು ಓದಿ ಅರ್ತ ಮಾಡಿಕೊಳ್ಳುವಲ್ಲಿ ಯಾವ ತೊಂದರೆಯೂ ಆಗುವುದಿಲ್ಲವೆಂಬುದು ಈ ಪುಸ್ತಕವನ್ನು ಓದಿದವರಿಗೆ ಸ್ಪಶ್ಟವಾಗದಿರದು.

ಈ ಬರಹವನ್ನು ಬಳಸುವುದರಿಂದ ಕನ್ನಡವನ್ನು ಕಲಿಯುವ ಮಕ್ಕಳಿಗೆ (ಅದರಲ್ಲೂ ಕೆಳವರ್ಗದ ಮಕ್ಕಳಿಗೆ) ಮತ್ತು ಅದನ್ನು ಅನಂತರ ಬಳಸುವ ಜನರಿಗೆ ಬಹಳಶ್ಟು ಉಪಕಾರವಾಗಬಲ್ಲುದೆಂಬುದೇ ಅದನ್ನು ಬಳಕೆಗೆ ತರಬೇಕೆಂಬ ಈ ಪ್ರಯತ್ನಕ್ಕೆ ಮುಕ್ಯ ಕಾರಣ.

ಮೀಸಲಾತಿಯಿಂದಾಗಿ ಹೇಗೆ ಹೆಚ್ಚುಹೆಚ್ಚು ಮಂದಿ ಕೆಳವರ್ಗದ ಜನರು ಸಮಾಜದಲ್ಲಿ ಮೇಲೆ ಬರುತ್ತಿದ್ದಾರೋ ಹಾಗೆಯೇ ಈ ಹೊಸ ಬರಹದ ಬಳಕೆಯಿಂದಾಗಿ ಹೆಚ್ಚುಹೆಚ್ಚು ಮಂದಿ ಕೆಳವರ್ಗದ ಜನರು ಕನ್ನಡ ಬರಹವನ್ನು ಕೀಳರಿಮೆಯಿಲ್ಲದೆ ಬಳಸುವಂತಾಗಬಲ್ಲರೆಂಬುದರಲ್ಲಿ ಸಂಶಯವಿಲ್ಲ.

ಮೇಲೆ ಸೂಚಿಸಿದ ನನ್ನ ಕನ್ನಡ ಬರಹವನ್ನು ಸರಿಪಡಿಸೋಣ! ಪುಸ್ತಕವನ್ನು ಓದಿದವರಲ್ಲಿ ಹಲವರು 'ಹಾಗೆ ಮಾಡಿದರೆ ಬಹಳ ಒಳ್ಳೆಯದಿತ್ತು, ಆದರೆ ಮಾಡುವುದು ಯಾರು?' ಎಂದು ಕೇಳಿದ್ದಾರೆ. ಅದರ ವಿಮರ್ಶಕರೊಬ್ಬರು 'ಬೆಕ್ಕಿನ ಕುತ್ತಿಗೆ ಗಂಟೆ ಕಟ್ಟುವವರು ಯಾರು?' ಎಂದು ಪ್ರಶ್ನಿಸಿದ್ದಾರೆ.

ಕನ್ನಡದ ಬರಹಗಾರರು ಈ 'ಹೊಸ ಬರಹ'ವನ್ನು ಬಳಸಿದರೆ ಒಳ್ಳೆಯದೆಂದು ಅನಿಸಿದರೂ ಬಳಸುವ ಎದೆಗಾರಿಕೆಯನ್ನು ತೋರಿಸದಿರುವುದಕ್ಕೆ ಹಾಗೆ ಮಾಡಿದಲ್ಲಿ ಅವರ ಬರಹಕ್ಕೆ ಕನ್ನಡದ ಇವತ್ತಿನ ಹಲವು ವಿದ್ವಾಂಸರ ಮನ್ನಣೆ ದೊರೆಯದಿರಬಹುದು ಮತ್ತು ಅದಕ್ಕೆ ಸಿಗಬಹುದಾದ ಪ್ರಶಸ್ತಿಗಳು ತಪ್ಪಿಹೋಗಬಹುದು ಎಂಬ ಹೆದರಿಕೆಯೇ ಮುಕ್ಯ ಕಾರಣವಿರಬೇಕು.

ನನಗೆ ವಿದ್ವಾಂಸರ ಮನ್ನಣೆ ದೊರೆಯದಿರಬಹುದೆಂಬ ಹೆದರಿಕೆಯಿಲ್ಲ; ಯಾಕೆಂದರೆ ಅದನ್ನು ಪುಸ್ತಕದ ಯೋಗ್ಯತೆ ನಿರ್ದರಿಸಬೇಕಲ್ಲದೆ ಅದಕ್ಕಾಗಿ ಬಳಸಿದ ಬರಹದ ಸ್ವರೂಪವಲ್ಲ. ಇನ್ನು ಪ್ರಶಸ್ತಿಗಳ ಮೇಲೆ ನನಗೆ ಸ್ವಲ್ಪವೂ ಆಸೆಯಿಲ್ಲ.

ಹಾಗಾಗಿ 'ಹೊಸ ಬರಹ'ವನ್ನು ಬಳಸಲು ಸುರುಮಾಡುವುದಕ್ಕೆ ನಾನೇ ತಕ್ಕ ವ್ಯಕ್ತಿ ಎಂದು ನಿರ್ದರಿಸಿ ಈ ಪುಸ್ತಕದಲ್ಲಿ ಅದನ್ನು ಬಳಸಲು ಮೊದಲು ಮಾಡಿದ್ದೇನೆ. ನನ್ನ ಮುಂದಿನ ಪುಸ್ತಕಗಳಲ್ಲೂ ಅದನ್ನೇ ಬಳಸುವ ನಿರ್ದಾರವನ್ನೂ ಮಾಡಿದ್ದೇನೆ.

ಈ 'ಹೊಸ ಬರಹ'ವನ್ನು ಬಳಸಿದುದರಿಂದ ಕೆಲವು ಮಂದಿ ಓದುಗರಿಗೆ ಸ್ವಲ್ಪ ಹಿಂಸೆಯಾಗಬಹುದು.

ಅದರಲ್ಲೂ ಬೇರೆ ಬರಹಗಾರರ ಹೆಸರುಗಳು (ಬಾಲಕ್ರುಶ್ಣನ್, ಕ್ರುಶ್ಣಮೂರ್‍ತಿ, ಗವ್ಡ, ಮೊದಲಾದವು) ಇಂತಹ ಅನಿಸಿಕೆಗೆ ಕಾರಣವಾಗಬಲ್ಲುವು. ಆದರೆ ಇದು ಬರಹದ ಮಾದ್ಯಮ ಬೇರಾದುದರ ಪರಿಣಾಮವಲ್ಲದೆ ಬೇರೇನಲ್ಲ.

ಬಣ್ಣದ ಚಿತ್ರದಲ್ಲಿ ಕೆಂಪಾಗಿ ಕಾಣಿಸುವ ತುಟಿ ಕಪ್ಪು-ಬಿಳುಪು ಚಿತ್ರದಲ್ಲಿ ಕಪ್ಪಾಗಿ ಕಾಣಿಸುತ್ತದೆ. ಆದರೆ ಇದರಿಂದ ಯಾರಿಗೂ ಹಿಂಸೆಯಾಗುವುದಿಲ್ಲ. ಅದನ್ನು ನೋಡಿ ಬಳಕೆಯಾಗಿರುವುದೇ ಇದಕ್ಕೆ ಕಾರಣ. ಹೊಸ ಬರಹವೂ ಹಾಗೆಯೇ. ಬಳಕೆಯಾದಾಗ ಅದರಿಂದ ಯಾರಿಗೂ ಹಿಂಸೆಯಾಗದು.

ಕನ್ನಡದ್ದೇ ಪದಗಳು

ಈ ಪುಸ್ತಕದಲ್ಲಿ ಆದಶ್ಟು ಮಟ್ಟಿಗೆ ಕನ್ನಡದವೇ ಆದ ಪದಗಳನ್ನು ಬಳಸಲು ಪ್ರಯತ್ನಿಸಿದ್ದೇನೆ. ಇದು ಕನ್ನಡದ ವಿದ್ವಾಂಸರು ಸಾಮಾನ್ಯವಾಗಿ ಬಳಸುವ ವಿದಾನಕ್ಕಿಂತ ತೀರ ಬೇರಾಗಿದೆ.

ಉದಾಹರಣೆಗಾಗಿ, ಕನ್ನಡ ಪದಗಳಲ್ಲಿ ಕಾಣಿಸಿಕೊಳ್ಳುವ ಉಲಿಗಳನ್ನು ಮತ್ತು ಕನ್ನಡ ಪದಗಳ ಮತ್ತು ವಾಕ್ಯಗಳ ಒಳರಚನೆಯಲ್ಲಿ ಬಳಕೆಯಾಗುವ ನಿಯಮಗಳನ್ನು ವಿವರಿಸಬೇಕಾದಾಗ ಹಲವಾರು ಹೊಸ ಪದಗಳನ್ನು ಉಂಟು ಮಾಡಬೇಕಾಗುತ್ತದೆ. ಕನ್ನಡದಲ್ಲಿ ಇಂತಹ ವಿಶಯಗಳನ್ನು ತಿಳಿಸಲು ಯೋಗ್ಯವಾದ ಪದಗಳಿಲ್ಲದಿರುವುದೇ ಇದಕ್ಕೆ ಕಾರಣ.

ಇಂತಹ ಸಂದರ್‍ಬಗಳಲ್ಲಿ ಕನ್ನಡದ ವಿದ್ವಾಂಸರು ಸಂಸ್ಕ್ರುತದ ಮೊರೆಹೊಗುತ್ತಾರೆ. ಆ ನುಡಿಯಲ್ಲಿ ಈಗಾಗಲೇ ಬಳಕೆಯಲ್ಲಿರುವ ಪದಗಳನ್ನು ಅವರು ಎರವಲಾಗಿ ಪಡೆಯುತ್ತಾರೆ ಮಾತ್ರವಲ್ಲ, ಹೊಸ ಪದಗಳನ್ನು ಉಂಟು ಮಾಡಬೇಕಾಗಿರುವಲ್ಲೂ ಕನ್ನಡ ಪದಗಳನ್ನು ಬಳಸುವ ಬದಲು ಸಂಸ್ಕ್ರುತ ಪದಗಳನ್ನು ಬಳಸುತ್ತಾರೆ (ಕೆಂಪೇಗವ್ಡ ೧೯೭೬ ನೋಡಿ). ಆದರೆ ಅಂತಹ ಪದಗಳನ್ನು ಬಳಸಿದ ಕನ್ನಡ ಬರಹ ಕಗ್ಗಂಟಾಗುತ್ತದೆ.

ಹಾಗೆ ಮಾಡುವ ಬದಲು ನಾನು ಈ ಪುಸ್ತಕದಲ್ಲಿ ಹೆಚ್ಚು ಹೆಚ್ಚು ಕನ್ನಡದ್ದೇ ಆದ ಪದಗಳನ್ನು ಉಂಟುಮಾಡಿ ಬಳಸಿದ್ದೇನೆ. ತಡೆಯುಲಿ, ಮಡಚಿದ ತಡೆಯುಲಿ, ಉಜ್ಜುಲಿ, ಮುಂದಿನ ಸ್ವರ, ಮೇಲಿನ ಸ್ವರ, ಉದ್ದ ಸ್ವರ ಮೊದಲಾದ ಈ ಪದಗಳನ್ನು ಕಲಿಯುವುದು ಮತ್ತು ನೆನಪಿನಲ್ಲಿಟ್ಟುಕೊಳ್ಳುವುದು ಕನ್ನಡಿಗರಿಗೆ ಹೆಚ್ಚು ಸುಲಬವೆಂದು ನನಗೆ ತೋರುತ್ತದೆ. ಇವುಗಳ ಅರ್‍ತವನ್ನು ಪುಸ್ತಕದ ಕೊನೆಯಲ್ಲಿ ಕೊಡಲಾಗಿದೆ.

ಈ ಪುಸ್ತಕದ ಕುರಿತು

ಕನ್ನಡ ನುಡಿ ಮೂಲದ್ರಾವಿಡದಿಂದ ಬದಲಾಗುತ್ತಾ ಬಂದ ಬಗೆ ಹೇಗೆ ಎಂಬುದನ್ನು ವಿವರಿಸುವಲ್ಲಿ ಇದು ನನ್ನ ಮೂರನೆಯ ಪ್ರಯತ್ನವಾಗಿದೆ. ಇದಕ್ಕೆ ಮೊದಲು ೧೯೭೬ರಲ್ಲಿ ಕನ್ನಡ ಬಾಶೆಯ ಸಂಕ್ಶಿಪ್ತ ಚರಿತ್ರೆ ಎಂಬ ಪುಸ್ತಕವನ್ನು ಮತ್ತು ೧೯೮೫ರಲ್ಲಿ ಅದನ್ನೇ ತಿದ್ದಿ ದೊಡ್ಡದು ಮಾಡಿರುವ ಕನ್ನಡ ಬಾಶೆಯ ಕಲ್ಪಿತ ಚರಿತ್ರೆ ಎಂಬ ಪುಸ್ತಕವನ್ನು ಬರೆದಿದ್ದೆ.

ಈ ಪುಸ್ತಕ ಅವೆರಡಕ್ಕಿಂತಲೂ ಬೇರಾಗಿದ್ದು, ಕನ್ನಡ ನುಡಿಯಲ್ಲಿ ನಡೆದ ಬದಲಾವಣೆಗಳನ್ನು ವಿವರಿಸುವ ಒಂದು ಹೊಸ ಪ್ರಯತ್ನವಾಗಿದೆ. ಮೂಲ ದ್ರಾವಿಡದ ಸ್ವರ ಮತ್ತು ವ್ಯಂಜನಗಳು ಕನ್ನಡದ ಚರಿತ್ರೆಯಲ್ಲಿ ಯಾವ ರೀತಿಯ ಬದಲಾವಣೆಗಳಿಗೆಲ್ಲ ಒಳಗಾಗಿವೆ ಎಂಬುದನ್ನು ಆ ವಿಶಯದಲ್ಲಿ ಇತ್ತೀಚೆಗಿನವರೆಗೂ ನಡೆದಿರುವ ಸಂಶೋದನೆಗಳನ್ನು ಗಮನದಲ್ಲಿರಿಸಿಕೊಂಡು ಇಲ್ಲಿ ಹೆಚ್ಚು ವಿವರವಾಗಿ ಕೊಡಲಾಗಿದೆ.

ಕನ್ನಡದ ಒಳನುಡಿಗಳಲ್ಲಿ, ಅದರಲ್ಲೂ ಕರಾವಳಿ ಮತ್ತು ಬಡಗ ಒಳನುಡಿಗಳಲ್ಲಿ ನಡೆದ ಬದಲಾವಣೆಗಳು ಕನ್ನಡದ ಚರಿತ್ರೆಯನ್ನು ತಿಳಿಯಬೇಕೆಂದಿರುವವರಿಗೆ ಬಹಳ ಪ್ರಾಮುಕ್ಯವಾದವುಗಳು. ಯಾಕೆಂದರೆ ಕನ್ನಡದ ಬರಹ ಒಳನಾಡಿನ ಒಳನುಡಿಯೊಂದರಿಂದ ಬೆಳೆದು ಬಂದಿದೆಯಾದ ಕಾರಣ, ಅದು ಕನ್ನಡ ನುಡಿಯ ಚರಿತ್ರೆಯ ಒಂದು ಅಂಶವನ್ನು ತಿಳಿಯುವಲ್ಲಿ ಮಾತ್ರ ಸಹಾಯಕವಾಗಬಲ್ಲುದು. ಅದಕ್ಕೂ ಹಳೆಗನ್ನಡಕ್ಕೂ ನಡುವಿರುವ ವ್ಯತ್ಯಾಸಗಳನ್ನು ಅರ್‍ತಮಾಡಿಕೊಳ್ಳಬೇಕಿದ್ದರೂ ಕರಾವಳಿಯ ಒಳನುಡಿಗಳ ತಿಳಿವು ಅವಶ್ಯ.

ಈ ಕಾರಣಕ್ಕಾಗಿ, ಕರಾವಳಿ ಮತ್ತು ಬಡಗ ಒಳನುಡಿಗಳಿಗೆ ಈ ಪುಸ್ತಕದಲ್ಲಿ ಹೆಚ್ಚಿನ ಪ್ರಾಮುಕ್ಯತೆಯನ್ನು ಕೊಡಲಾಗಿದೆ. ಇದಲ್ಲದೆ ಇವತ್ತಿನ ದ್ರಾವಿಡ ನುಡಿಗಳಲ್ಲಿ ಕನ್ನಡಕ್ಕೆ ಅತಿ ಸಮೀಪದಲ್ಲಿರುವ ತಮಿಳು ನುಡಿಯ ಪದ ಮತ್ತು ಪದರೂಪಗಳನ್ನು ಅಲ್ಲಲ್ಲಿ ಕೊಡುವ ಮೂಲಕ ಕನ್ನಡ ನುಡಿ ನಡೆದು ಬಂದ ದಾರಿಯನ್ನು ಹೆಚ್ಚು ಸ್ಪಶ್ಟವಾಗಿ ತೋರಿಸಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ಪುಸ್ತಕದಲ್ಲಿ ವ್ಯಂಜನಗಳನ್ನು ಸೂಚಿಸಬೇಕಾದಾಗ ಅವನ್ನು ಅಕಾರದೊಂದಿಗೆ ಕೊಡಲಾಗಿದೆ. ಆದರೆ ಈ ಅಕಾರಕ್ಕೆ ಬೆಲೆಯಿಲ್ಲ ಎಂಬುದನ್ನು ಗಮನಿಸಬೇಕು. 'ಕ, ಚ, ತಗಳು' ಎಂದರೆ 'ಕ್, ಚ್, ತ್‌ಗಳು' ಎಂದೇ ಅರ್ಥ. ಕಕಾರ ಎಂಬುದಕ್ಕೂ ಕ್ ಎಂಬ ವ್ಯಂಜನ ಎಂಬ ಅರ್ಥವಿದೆ. ಅಲ್ಲೂ ಅಕಾರಕ್ಕೆ ಬೆಲೆಯಿಲ್ಲ.

ಕನ್ನಡದ ಚರಿತ್ರೆಯನ್ನು ವರ್ಣಿಸುವಲ್ಲಿ ಸ್ವರ ಮತ್ತು ವ್ಯಂಜನಗಳ ಕುರಿತು ಹೆಚ್ಚು ಹೇಳಲು ಸಾಧ್ಯವಾಗಿದೆ. ಆದರೆ ಪದ ಮತ್ತು ಪದರೂಪಗಳ ಕುರಿತು ಇದಕ್ಕಿಂತ ಸ್ವಲ್ಪ ಕಡಿಮೆ ಮತ್ತು ವಾಕ್ಯಗಳ ಕುರಿತು ಬಹಳ ಸ್ವಲ್ಪ ಮಾತ್ರ ತಿಳಿಸಲು ಸಾಧ್ಯವಾಗಿವೆ. ಮೂಲದ್ರಾವಿಡದ ಕುರಿತಾಗಿ ಇದುವರೆಗೆ ನಡೆದಿರುವ ಸಂಶೋಧನೆಗಳಲ್ಲಿರುವ ಕೊರತೆಯನ್ನು ಇದು ಸೂಚಿಸುತ್ತದೆ. ಈ ವಿಶಯದಲ್ಲಿ ಸಂಶೋಧನೆ ನಡೆಸಬೇಕೆಂದಿರುವವರು ಇದನ್ನು ಗಮನಿಸಬೇಕು.

ಆಗೋಸ್ಟು ೧, ೨೦೦೭ — ಕೃಪೆ : ಕನ್ನಡ ನುಡಿ ನಡೆದು ಬಂದ ದಾರಿ, ಮುನ್ನುಡಿ

ನೀನಾಸಂ, ಹೆಗ್ಗೋಡು, ಸಾಗರ ೫೭೭೪೧೭

❑

೫

ಕನ್ನಡ ಶಬ್ದ ಸಂಪತ್ತನ್ನು ಒದಗಿಸುವ ವಿಧಾನಗಳು

ಎಸ್.ಆರ್. ಮಳಗಿ

ಹಿನ್ನೆಲೆ

ಕನ್ನಡ ನುಡಿಗೆ ಎರಡು ಸಾವಿರ ವರುಷಗಳ ಉಜ್ವಲ ಇತಿಹಾಸವಿದೆ. ಈ ಸುದೀರ್ಘ ಕಾಲಾವಧಿಯಲ್ಲಿ ಅದು ಅನೇಕ ಸಲ ಪರಭಾಷಾ ದಾಳಿಗಳನ್ನು ಯಶಸ್ವಿಯಾಗಿ ಇದಿರಿಸಿದೆ. ಬಂದ ಆಪತ್ತು-ಕುತ್ತುಗಳನ್ನು ರೂಢಿಸಿಕೊಂಡು ಮೈಗೂಡಿಸಿಕೊಂಡು ಕನ್ನಡ ನುಡಿ ಪರಿಪುಷ್ಟವಾಯಿತಲ್ಲದೆ ಅವುಗಳ ಹೊಡೆತಕ್ಕೆ ಅದು ಬಡವಾಗಲಿಲ್ಲ. ಇದು ಈ ನುಡಿಯಲ್ಲಡಿಗದ ಸತ್ತ್ವದ ಗುಣ, ತಿರುಳಿನ ಶಕ್ತಿ. ದಾಳಿಯೆಸಗಿದ ಪರಭಾಷೆಗಳಲ್ಲಿ ಮೊಟ್ಟಮೊದಲಿನವು ಸಂಸ್ಕೃತ-ಪ್ರಾಕೃತಗಳು. ಸಂಸ್ಕೃತವು ಅಂದಿನ ಅತಿ ಪ್ರಮುಖ ಸಾಂಸ್ಕೃತಿಕ ಭಾಷೆ. ಪಂಡಿತರ ಹಾಗೂ ವಿಶಿಷ್ಟರ ಭಾಷೆಯೆನಿಸಿದ ಅದು ಜನಸಾಮಾನ್ಯರ ಮೇಲೂ ಪ್ರಗಾಢ ಪರಿಣಾಮವನ್ನುಂಟು ಮಾಡಿತು. ಪ್ರಬಲ ಹಾಗೂ ಸಾಮಾನ್ಯ ಸಂಸ್ಕೃತಿಗಳಲ್ಲಿ ಸಂಪರ್ಕ, ಸಂಘರ್ಷಣೆಗಳುಂಟಾದಾಗ ಬರಬರುತ್ತ ಸಾಮಾನ್ಯ ಸಂಸ್ಕೃತಿ ಸಾವುಕಾಶವಾಗಿ ಪರಿವರ್ತನೆಗೊಳ್ಳುತ್ತ ಪ್ರಬಲ ಸಂಸ್ಕೃತಿಯತ್ತ ಒಲೆದು, ಕೊನೆಯಲ್ಲಿ ಅದರ ಅಂಕಿತಕ್ಕೆ ಒಳಪಡುವುದು ಸ್ವಾಭಾವಿಕ. ಇತಿಹಾಸವು ಇದಕ್ಕೆ ಸಾಕ್ಷಿಯಾಗಿದೆ. ಕನ್ನಡವು ಮೊದಲಲ್ಲಿ ಸಂಸ್ಕೃತದ ಹಾಗೂ ಅದರ ಕೈಕೂಸಾಗಿದ್ದ ಪ್ರಾಕೃತದ ಪ್ರಭಾವಕ್ಕೆ ಒಳಪಟ್ಟುದು ಹೀಗೆಯೇ. ಅದು ತನ್ನತನವನ್ನು ಮರೆಯುವಷ್ಟರಮಟ್ಟಿಗೆ ಇವುಗಳಿಗೆ ವಶವರ್ತಿಯಾಯ್ತು. ಇದೆಲ್ಲದರ ಪರಿಣಾಮವೆಂದರೆ ಇಂದು ನಿರಕ್ಷರಕುಕ್ಷಿಗಳ ಬಾಯಲ್ಲೂ ಕೂಡ ನೂರಾರು ಸಂಸ್ಕೃತ ಪದಗಳು ಮೂಲ ರೂಪದಲ್ಲೊ ತದ್ಭವ ರೂಪದಲ್ಲೊ ನಲಿದಾಡುತ್ತಿವೆ. ಅಂದು ಪಂಡಿತರು ಸುಶಿಕ್ಷಿತರು ಎಂಬವರು ಸಂಸ್ಕೃತ, ಪ್ರಾಕೃತಗಳ ನೆರಪಿಗೆ ಕೈಯಾಂತು ನಿಂತುದು ಜನಸಾಮಾನ್ಯರಿಗೆ ಮತ್ತಷ್ಟು ಪ್ರೋತ್ಸಾಹಜನಕವೆನಿಸಿತು. ಹೀಗಾಗಿ ಸಂಸ್ಕೃತ, ಪ್ರಾಕೃತಗಳಿಗೆ ಕನ್ನಡದಲ್ಲಿ ಚೆಂಚುಪ್ರವೇಶಕ್ಕೆ ಎಡೆದೊರೆಯಿತಲ್ಲದೆ ಕೊನೆಕೊನೆಗೆ ಕನ್ನಡವು ಈ ಪರಭಾಷೆಗಳ ಸ್ವಚ್ಛಂದ ವಿಹಾರಕ್ಕೆ ಬಿತ್ತರದ ಆಡುಂಬೊಲವಾಯ್ತು. ಇದರಲ್ಲಿ ಅಚ್ಚರಿಯೇನಿಲ್ಲ. ಆ ಕಾಲದ ತಾತ್ವಿಕ, ವೈಚಾರಿಕ, ವೈಜ್ಞಾನಿಕ ಕ್ಷೇತ್ರಗಳ ಬೇಡಿಕೆಗಳಿಗನುಗುಣವಾಗಿ ಈ ಕ್ಷೇತ್ರಗಳಲ್ಲಿ ಶ್ರೀಮಂತವೆನಿಸಿದ್ದ ಸಂಸ್ಕೃತಕ್ಕೆ ಕನ್ನಡವು ಮಾರುಹೋಯ್ತು. ಒಂದು ದೃಷ್ಟಿಯಿಂದ ಕನ್ನಡದ ಶಬ್ದಭಾಂಡಾರವು ಇದರಿಂದ ಹಿಗ್ಗಲಿಸಿತೆಂದೇ ಹೇಳಬೇಕು. ಆದರೆ ಪರಭಾಷೆಯ ಈ ಸಂಬಂಧವು ಮೊದಮೊದಲು ಮೋಹಕವೆನಿಸಿದರೂ ಕಾಲಾನಂತರದಲ್ಲಿ ಅದೊಂದು ಕುತ್ತಾಗಿಯೇ ಪರಿಣಮಿಸಿತು. ಆಗ ಕನ್ನಡದ ಕಣ್ತೆರೆಯಿತು. ಪಂಡಿತರು, ಕವಿಗಳು ತಂತಮ್ಮ

ಕೃತಿಗಳಲ್ಲಿ ಹೆಚ್ಚುಹೆಚ್ಚಾಗಿ ಅಚ್ಚುಗನ್ನಡ, ತಿರುಳ್ಗನ್ನಡಗಳ ಬಳಕೆಯನ್ನು ರೂಢಿಸುತ್ತ ಬಂದರಲ್ಲದೆ ಸಂಸ್ಕೃತ ಶಬ್ದಗಳ ಕನ್ನಡೀಕರಣಕ್ಕೆ ತೊಡಗಿ ತದ್ಭವಗಳ ಬರವಿಗೆ ಹಾದಿಮಾಡಿಕೊಟ್ಟರು. ಈ ತದ್ಭವಗಳಲ್ಲಿ ಎರಡು ಗುಂಪುಗಳನ್ನು ಮಾಡಬಹುದಾಗಿದೆ : ೧) ಜನಸಾಮಾನ್ಯರ ಬಾಯಲ್ಲಿ ತಮ್ಮಷ್ಟಕ್ಕೆ ತಾವೇ ಸಹಜ ರೀತಿಯಲ್ಲಿ ಪರಿವರ್ತನೆಗೊಂಡುವು. ೨) ಮತ್ತು ಸುಶಿಕ್ಷಿತರು ಹಾಗೂ ಶಬ್ದಜ್ಞರು ಹಾಕಿಕೊಟ್ಟ ನಿಯಮಗಳಿಗನುಸಾರವಾಗಿ ರೂಪುಗೊಂಡುವು. ಎರಡನೆಯ ಪ್ರಕಾರದ ತದ್ಭವಗಳು ಕೇವಲ ಗ್ರಂಥಗಳಲ್ಲಿ ಕಾಣಸಿಗುವವು. ಆದರೆ ಜನಸಾಮಾನ್ಯರು ಮಾತ್ರ ಈ ಗ್ರಾಂಥಿಕ ತದ್ಭವಗಳನ್ನು ಲೆಕ್ಕಿಸದೆ ತಮ್ಮ ಸೊಲ್ಲಿನ ಸೌಲಭ್ಯದಂತೆ ಮಾಡಿಕೊಂಡ ತದ್ಭವಗಳನ್ನೇ ಬಳಸುತ್ತ ಬಂದಿದ್ದಾರೆ. ಉದಾಹರಣೆಗೆಂದು ಈ ಕೆಲವನ್ನು ಅವಲೋಕಿಸಬಹುದಾಗಿದೆ:

ಸಂಸ್ಕೃತ	ವ್ಯಾಕರಣ ಶುದ್ಧ ತದ್ಭವ	ರೂಢಿಯ ತದ್ಭವ
ಅಕ್ಷರ	ಅಕ್ಕರ	ಅಕರ
ಔಷಧ	ಔಸದ	ಅಗಸಿದ್ದೆ, ಔಸ್ದಿ
ಕಾರ್ಯ	ಕಜ್ಜ	ಕಾರೇವು
ಮುಖ	ಮೊಗ	ಮುಕ, ಮಕ
ವಿಧಿ	ಬಿದಿ	ಇದಿ
ವಿಷ	ಬಿಸ	ಇಸ
ಸಾಕ್ಷಿ	ಸಕ್ಕಿ	ಸಾಕ್ಸಿ
ಸುಖ	ಸೊದ	ಸುಕ
ಸ್ಫಟಿಕ	ಪಳಿಕು	ಪಟಕ (ಗ)

ಇದರಿಂದ ಒಂದು ಮಾತು ಸ್ಪಷ್ಟವಾಗುವುದು : ಸಂಸ್ಕೃತ ಶಬ್ದಗಳನ್ನು ಮೂಲದಲ್ಲಿದ್ದಂತೆಯೇ ಬಳಸಲು ಯತ್ನಿಸುವುದಕ್ಕಿಂತ ಅವುಗಳಿಗೆ ಕನ್ನಡದ ಉಚ್ಚಾರಸರಣಿಗೆ ಒಗ್ಗುವ ರೂಪಕೊಡುವ ಪ್ರಯತ್ನವು ಬುದ್ಧಿಪೂರ್ವಕವಾಗಿ ನಡೆಯುತ್ತ ಬಂದಿದೆ. ಶಬ್ದಜ್ಞರ ಕಟ್ಟು-ಕಟ್ಟಳೆಗಳನ್ನು ಶಿರಸಾವಹಿಸಿ ಪಾಲಿಸುತ್ತ ಜನತೆ ನಡೆದಿರಲಿಕ್ಕಿಲ್ಲ. ಸುಶಿಕ್ಷಿತರು, ತಜ್ಞರು ಇದರಿಂದ ಹತಾಶರಾಗದೆ ತಮ್ಮ ಪ್ರಯತ್ನಗಳನ್ನು ತಂತಮ್ಮ ಅಳವಿಗನುಗುಣವಾಗಿ ಮುಂದುವರಿಸುತ್ತಲೇ ಬಂದಿದ್ದಾರೆ. ಇದರ ಪರಿಣಾಮವು ಜನಸಾಮಾನ್ಯರ ಮನಸ್ಸಿನ ಮೇಲೆ ಆಗದೆ ಇಲ್ಲ. ವೈಯಾಕರಣಿಗಳ ನಿಯಮಗಳಿಗೆ ಒಳಪಟ್ಟು ಜನತೆಯ ಬಾಯ್ಬಳಕೆಯಲ್ಲಿ ರೂಢಿಗೊಂಡ ತದ್ಭವಗಳ ಈ ಪಟ್ಟಿಯನ್ನು ನೋಡಬಹುದು.

ಸಂಸ್ಕೃತ	ರೂಢಿಗೆ ಬಂದ ತದ್ಭವ	ಸಂ	ತ
ಆಕರ	ಆಗರ	ದೀಪಿಕೆ	ದೀವಿಗೆ
ಕುಠಾರ	ಕೊಡಲಿ	ದ್ವಿತೀಯೆ	ಬಿದಿಗೆ
ಗ್ರಂಥಿ	ಗಂಟು	ಪಶು	ಹಸು
ತೃತೀಯೆ	ತದಿಗೆ	ಪಾದುಕ	ಹಾವುಗೆ
ಫಳ(ಲ)ಕ	ಹಲಗೆ	ವಾಪಿ	ಬಾವಿ
ಘಟಕ	ಗಡಿಗೆ	ವೇಗ	ಬೇಗ
ಮಡಿಕೆ	ಮಳಿಗೆ	ವೀಥಿ	ಬೀದಿ
ವಲ್ಲಿ	ಬಳ್ಳಿ	ವೈಶಾಖ	ಬೇಸಗೆ
ವಸತಿ	ಬಸದಿ	ವಂಧ್ಯೆ	ಬಂಜೆ
ಯಾತ್ರೆ	ಜಾತ್ರೆ	ಸಂಧ್ಯೆ	ಸಂಜೆ
ವಾಲ	ಬಾಲ	ಸಂಸ್ಥೆ	ಸಂತೆ

ಈ ಪಟ್ಟಿಗೆ ಕೊನೆಯಿಲ್ಲ. ಸಂಸ್ಕೃತವು ಹೀಗೆ ಕನ್ನಡ ರೂಪ ತಳೆದು ತಿರುಳ(ಅಚ್ಚ)ಗನ್ನಡವೇನೋ ಎನಿಸುವಷ್ಟು ಕನ್ನಡ ನುಡಿಗಳಲ್ಲಿ ಸಾಮರಸ್ಯದಿಂದ ಬೆರಕೆ ಹೊಂದಿದೆ. ಸಂಸ್ಕೃತವು ಹೀಗೆ ಕನ್ನಡಕ್ಕೆ ಸರಿಪಟ್ಟು ತದ್ಭವೀಕರಣಹೊಂದುವಲ್ಲಿ ಪ್ರಾಕೃತದ ನೆರವು ವಿಶೇಷವಿತ್ತೆಂಬುದನ್ನು ಮರೆಯಕೂಡದು.

ಸಂಸ್ಕೃತ ಪ್ರಾಕೃತಗಳ ಕಾಲಾನಂತರ

ಸಂಸ್ಕೃತ, ಪ್ರಾಕೃತಗಳ ಕಾಲ ಗತಿಸಿ ಕನ್ನಡವು ಮುಸಲ್ಮಾನಿ (ಉರ್ದು), ಪೋರ್ತುಗೀಜ, ಹಾಗೂ ಕೊನೆಯಲ್ಲಿ ಆಂಗ್ಲ ಭಾಷೆಗಳ ಪ್ರಭಾವಕ್ಕೆ ಕಾಲಕ್ರಮದಲ್ಲಿ ಒಳಪಟ್ಟುದು ಕಂಡುಬರುತ್ತಿದೆ. ಸಂಸ್ಕೃತವನ್ನು ಅರಗಿಸಿಕೊಂಡು ರಕ್ತಗತಮಾಡಿಕೊಂಡ ಕನ್ನಡವು ಈ ಪರಭಾಷೆಗಳ ದಾಳಿಗೆ ಎಳ್ಳಷ್ಟೂ ತತ್ತರಿಸಲಿಲ್ಲ. ಸಂಸ್ಕೃತವನ್ನು ಬರಮಾಡಿಕೊಂಡಂತೆಯೇ ಇವುಗಳಿಗೂ ಸುಸ್ವಾಗತವಿತ್ತು. ತನಗೆ ಅವಶ್ಯವೆನಿಸಿದ ಶಬ್ದ ಸಂಗ್ರಹವನ್ನು ಹಿಂದುಮುಂದು ನೋಡದೆ ಸ್ವೀಕರಿಸಿದೆ, ಸ್ವೀಕರಿಸುತ್ತಲಿದೆ. ಆದರೆ ಅವುಗಳಿಗೆ ಕನ್ನಡದ ಮುದ್ರೆಯೊತ್ತಿಯೇ ಅವುಗಳನ್ನು ಬರಮಾಡಿಕೊಂಡಿದೆಯೆಂಬುದನ್ನು ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದಾಗಿದೆ :

ಅರಬ್ಬೀ ಇಲ್ಲವೆ ಮುಸಲ್ಮಾನೀ ಶಬ್ದಗಳು	ತದ್ಭವ
ಇಸ್ಮ	ಇಸಮು
ಕಚಹರೀ	ಕಚೇರಿ
ಕಾಗಜ್(ಝ್)	ಕಾಗದ
ಕುರ್ಸೀ	ಕುರ್ಚಿ
ಜಮಾ	ಜಮೆ (ಜಮಾಯಿಸು)
ಜ(ಝ)ಮೀನ್	ಜಮೀನು
ತಯ್ಯಾರ್	ತಯಾರು (ಧಾ. ತಯಾರಿಸು, ನಾ. ತಯಾರಿಕೆ)
ತಾರೀಖ್	ತಾರೀಖು
ಪರ್‌ವಾಹ್	ಪರಿವೆ
ಮುದತ್	ಮುದ್ದತ್ತು
ಮೇಜ್ (ಪೋರ್ತಗೀಜ)	ಮೇಜು
ರಯಿಯತ್	ರೈತ
ಸಲಾಹ	ಸಲಹೆ

ಈ ಶಬ್ದ ಸಂಗ್ರಹವೂ ಬಹು ದೊಡ್ಡದಿದೆ. ೮, ೯ನೆಯ ಶತಮಾನದಿಂದ ಮುಸಲ್ಮಾನರ ಸಂಬಂಧವು ಭಾರತದೊಡನೆ ಮತ್ತು ಕನ್ನಡ ನಾಡಿನೊಡನೆ ಬಂದುದರಿಂದ ಅವರ ನುಡಿಗಳ ಪ್ರವೇಶವು ನಿಯಮಿತ ಕ್ಷೇತ್ರಗಳಲ್ಲಿ ಕೆಲಮಟ್ಟಿಗೆ ಆವಶ್ಯಕವೇ ಎನಿಸಿತು. ಹೀಗೆಯೇ ಕನ್ನಡದ ನೆರೆಯಲ್ಲಿ ಪೋರ್ತುಗೀಜರ ಆಡಳಿತ ಏರ್ಪಟ್ಟುದರ ಫಲವಾಗಿ ಇಸ್ತ್ರಿ, ಕಾಡತೂಸು, ಚಾವಿ, ಪಗಾರ, ಬಿಸ್ಕೂಟು, ಲಿಲಾವು, ಪೊಪ್ಪಾಯಿ, ಬಟಾಟೆ, ಹಾಪೂಸ, ಪಾಯರಿ - ಮೊದಲಾದ ಹಲವಾರು ಶಬ್ದಗಳು ಕನ್ನಡಕ್ಕೆ ಬಂದವು. ಇವುಗಳ ಮೇಲೆ ಮೂಡಿದ ಕನ್ನಡದ ವಿಶಿಷ್ಟ ಉಚ್ಚಾರಸರಣಿಯ ಮುದ್ರೆ ಅಳಿಸುವಂತಿಲ್ಲ.

ಆಂಗ್ಲಭಾಷೆಯ ಪ್ರಭಾವ – ತದ್ಭವೀಕರಣ

ಇನ್ನು ಆಂಗ್ಲಭಾಷೆಯ ಪ್ರಭಾವದತ್ತ ಹೊರಳುವ. ಇಂದು ನಾವು ಆಂಗ್ಲರ ಆಡಳಿತದಿಂದ ಮುಕ್ತರಾಗಿದ್ದರೂ ಅವರ ಭಾಷೆಯ ವರ್ಚಸ್ಸಿನಿಂದ ನಮಗೆ ಬಿಡುಗಡೆ ಸಲ್ಲದು. ಇದರ ಕಾರಣವು ಆಂಗ್ಲಭಾಷೆಯ ಅಂತರ್‌ರಾಷ್ಟ್ರೀಯ ಮಹತ್ವದಲ್ಲಿದೆ. ಆಂಗ್ಲ ಭಾಷೆ ಇಂದು ಜಾಗತಿಕ ಭಾಷೆಯೇ ಎನಿಸುವಷ್ಟು ಎಲ್ಲೆಡೆಗಳಲ್ಲೂ ವ್ಯಾಪಿಸಿದೆ. ಭಾರತದಲ್ಲಿ ರಾಜಕೀಯ ಕಾರಣದಿಂದಾಗಿ ಸಕಲ ಕ್ಷೇತ್ರಗಳಲ್ಲೂ ಪ್ರವೇಶಿಸಿದೆ. ಆಂಗ್ಲಭಾಷೆಯೊಂದಿಗೆ ಅವಿನಾಭಾವಿಯಾಗಿ ಹೊಂದಿಕೊಂಡ ಸಾಹಿತ್ಯ, ಸಂಸ್ಕೃತಿ, ನಾಗರಿಕತೆಗಳ ಪ್ರಭಾವದ ಹಿಡಿತ ಭಾರತೀಯರ ಮನಸ್ಸುಗಳ ಮೇಲೆ ಬಲವತ್ತರವಾಗಿದೆ. ಹಿಂದಕ್ಕೆ ಸಾವಿರಾರು ವರುಷಗಳ ನಿಕಟ ಸಂಪರ್ಕದಿಂದ ಸಂಸ್ಕೃತ ಭಾಷೆಯ ವರ್ಚಸ್ಸಿಗೆ ಭಾರತೀಯ ಭಾಷೆಗಳೆಲ್ಲವೂ ಒಳಗಾಗಿದ್ದಂತೆ ಇಂದು ಕೇವಲ ಇನ್ನೂರು ಮುನ್ನೂರು ವರುಷಗಳ ಸಂಬಂಧದಿಂದಲೇ ಆಂಗ್ಲಭಾಷೆ ಎಲ್ಲ ಭಾರತೀಯ ಭಾಷೆಗಳ ಮೇಲೆ ಪ್ರಭುತ್ವ ಸ್ಥಾಪಿಸಿದೆ. ಇದರ ಪರಿಣಾಮವು ಸಂಸ್ಕೃತ ಭಾಷೆಯಷ್ಟು ಆಳವಾದುದಾಗಲಿಕ್ಕಿಲ್ಲ. ಸಂಸ್ಕೃತವು ಭಾರತೀಯರ ರಕ್ತದಲ್ಲಿ ಸೇರಿ ಒಂದಾಗಿದೆ. ಅದು ಕೊಟ್ಟ ಧರ್ಮ, ನೀತಿ, ಆಧ್ಯಾತ್ಮ, ವೇದಾಂತ, ಜೀವನಪದ್ಧತಿ, ಆಚಾರ-ವಿಚಾರ - ಇವೆಲ್ಲ ಇಂದು ನಮ್ಮವೇ ಆಗಿವೆ. ಆಂಗ್ಲಭಾಷೆ ಎಷ್ಟೇ ಪ್ರಭುತ್ವ ನಡೆಸುತ್ತಿದ್ದರೂ ಅದರ ಪ್ರವೇಶ ಜನಮನದ ಹೊರ ಅಂಗಳದಲ್ಲಿ ಮಾತ್ರ. ಹೃದಯದ ಗರ್ಭಗುಡಿಯಲ್ಲಿ ಅದಕ್ಕೆ ಪ್ರವೇಶ ದೊರೆತಿಲ್ಲ.

ಆದರೂ ಅದರ ಸಂಬಂಧವನ್ನು ಕಡೆಗಣಿಸುವಂತಿಲ್ಲ. ಅದು ಇಂದು ನವೀನ ನಾಗರಿಕತೆಯ ಪಾಠಗಳನ್ನು ನಮ್ಮ ಜನತೆಗೆ ಕಲಿಸಿದೆ. ಸುಶಿಕ್ಷಿತರೆನಿಸುವವರನ್ನು ಈ ನೂತನ ನಾಗರಿಕತೆಯಲ್ಲಿ ಪಳಸಿಗಿದೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಬ್ರಿಟಿಷರನ್ನು ಅನುಕರಿಸುವ ವಿಧಾನಗಳಲ್ಲಿ ಗುರುವಿಗೆ ತಿರುಮಂತ್ರ ಹೂಡುವಷ್ಟರಮಟ್ಟಿಗೆ ನಮ್ಮ ಜನ ತರಬೇತಿ ಪಡೆದರು. ಈ ಹೊಸ ನಾಗರಿಕತೆಯ ಪ್ರಭಾವ ಹೊಸ ಮಾದರಿಯ ವೇಷ-ಭೂಷಣ, ಊಟ-ಉಪಚಾರ, ಕೋರ್ಟು-ಕಚೇರಿಗಳಂತಹ ಸರಕಾರಿ ಮತ್ತು ಇತರ ಸಂಸ್ಥೆಗಳ ಆಡಳಿತ ವ್ಯವಹಾರ, ಸಾರ್ವಜನಿಕ ಕಾರ್ಯಕಲಾಪಗಳು, ಶಿಕ್ಷಣ ಪದ್ಧತಿ, ನಾಗರಿಕ ಸೌಲಭ್ಯ-ಸೌಕರ್ಯಗಳು - ಇತ್ಯಾದಿಗಳಲ್ಲೆಲ್ಲ ಒಡೆದು ಕಾಣುವಂತಿದೆ. ಅಲ್ಲದೆ ಆಂಗ್ಲಭಾಷೆ ರಾಜಕೀಯ ಭಾಷೆಯಾಗಿದ್ದರಿಂದಲೂ ಅದರ ಜಾಗತಿಕ ಸ್ಥಾನಮಾನಗಳು ಉನ್ನತವಾಗಿರುವುದರಿಂದಲೂ ಅದರ ಪರಿಚಯ, ಅಭ್ಯಾಸ, ವ್ಯಾಸಂಗಗಳು ಅನಿವಾರ್ಯವಾದವು. ಆಂಗ್ಲ ಭಾಷೆಯಲ್ಲಿ ಮಾತುಕಥೆ ನಡೆಸುವ, ಪತ್ರವ್ಯವಹಾರ ಮಾಡುವ, ಲೇಖನ ಕಾರ್ಯವೆಸಗುವ ನೈಪುಣ್ಯ ಪ್ರತಿಷ್ಠೆಯ ಲಕ್ಷಣವೆನಿಸಿತು. ಈ ಪ್ರವೃತ್ತಿ ಸುಶಿಕ್ಷಿತ ವರ್ಗದ ಮಟ್ಟಿಗೆ ಸಿಲ್ಲದೆ ಸರ್ವವ್ಯಾಪಿಯಾಗಿ ಭಾರತೀಯ ಜನಸಾಮಾನ್ಯರಲ್ಲೂ ಮೆಲ್ಲಮೆಲ್ಲನೆ ಹಬ್ಬ ಹತ್ತಿತು. ಇಂದು ಅನಕ್ಷರಸ್ಥನಿಗೂ ನೂರಾರು ಆಂಗ್ಲ ಶಬ್ದಗಳು ಗೊತ್ತಿವೆ. ಆದರೆ ತಾನು ಬಳಸುವ ಆಂಗ್ಲ ಶಬ್ದಗಳ ಉಚ್ಚರಣೆಯಲ್ಲಿ ಮಾತ್ರ ತನಗೆ ಹಗುರವೆನಿಸುವಂತೆ ಆತನು ಮಾರ್ಪಾಟು ಮಾಡಿಕೊಂಡಿದ್ದಾನೆ. ಸಂಸ್ಕೃತ ಶಬ್ದಗಳನ್ನು ನಿರಕ್ಷರಸ್ಥನು ಮಾರ್ಪಡಿಸಿಕೊಂಡ ವಿಧಾನವೇ ಆಂಗ್ಲನುಡಿಗಳ ಮಾರ್ಪಾಟಿನಲ್ಲಿ ಕಂಡುಬರುತ್ತಿದೆ. ಕೆಳಗಿನ ಈ ಉದಾಹರಣೆಗಳನ್ನು ಗಮನಿಸಬಹುದು :-

ಸಿಮೆಂಟು	ಕೋಟು	ಫೋನ್	ಕಾರ್ಡು	ಕಾಂಗ್ರೆಸ್ಸು	ಟೈಮು
ಬಕೆಟ್ಟು	ಶರ್ಟು	ಫೋಟೊ	ತಿಕೀಟು	ಇಲೆಕ್ಷನ್ನು	ವಾಚು
ಡ್ರಮ್ಮು	ಬೂಟು	ಕಾಲೇಜು	ಪೋಷ್ಟು	ಮಿನಿಷ್ಟರು	ಕ್ರಾಪು
ಬಂಗಲೆ	ಹ್ಯಾಟು	ಡಾಕ್ಟರು-ದಾಗದರು	ಮೋಟಾರು	ಚೀಫ್‌ಮಿನಿಷ್ಟರು	ಸಲೂನು
ಗೇಟು	ಬಾಂಬು	ಇಂಜೆಕ್ಷನ್ನು	ಕಾರು	ಕಂಟ್ರೋಲು	ಮೇಲು
ಹಾಟೆಲ್ಲು,	ಆಟಂಬಾಂಬು	ಕೇಸು	ಸಿನೇಮಾ	ರೇಶನ್ನು	ಲೋಕಲ್ಲು
ಹೋಟ್ಲು	ಏರೋಪ್ಲೇನು	ಕೋರ್ಟು	ಪಾರ್ಟು	ಬಸ್ಸು	ರೇಟು
ಟೀ	ರೇಡಿಯೋ	ಡಿಕರಿ	ಬ್ಯಾಂಡು	ಎಷ್ಪಿ ಬಸ್ಸು	ಮಾರ್ಕೀಟು
ಕಾಫಿ	ಟ್ರ್ಯಾಕ್ಟರು	ವಾರಂಟು	ಸರಕಸ್ಸು	ರೈಲು	ಕಲೆಕ್ಟರು
ಪಿಲೇಟು	ಮೀಟಿಂಗು	ಸಮನಸ್ಸು	ವೋಟು	ಬುಕ್ಕು	ಗೌರ್ನರು
ಮೆಂಬರು	ಪ್ರೆಸಿಡೆಂಟು	ಪಾಕೀಟು	ಟ್ಯಾಕ್ಸು	ಟೇಸನ್ನು	ಬಾಲು
ಬ್ಯಾಟು	ಎಕರೆ				

ಇದನ್ನು ಹತ್ತುಮಡಿಯಾಗಿ ಬೆಳೆಯಬಲ್ಲ ಪಟ್ಟಿ. ಈ ಶಬ್ದಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಲ್ಲಿ ಇವು ಹೇಗೆ ಕನ್ನಡೀಕರಣ ಹೊಂದುವ ಹಾದಿಯಲ್ಲಿವೆಯೆಂಬುದು ಹೊಳೆಯದಿರದು. ಪದಾಂತ್ಯದ ಅರ್ಧವ್ಯಂಜನವು ಉಕಾರಾಂತ ತಳೆದಿದೆ - ವಿಜಾತಿಯ ದ್ವಿತ್ವಗಳಲ್ಲಿಯ ಶಕಾರ, ಸಕಾರಗಳು ಷಕಾರಗಳಾಗಿವೆ. ಆ-ಓಗಳ ನಡುವಿನ ಸ್ವರವು ಈ ಸ್ವರಗಳಲ್ಲಿ ಒಂದರತ್ತ ಒಲೆಯುವ ಧೋರಣೆ ಕಂಡುಬರುತ್ತಿದೆ. ವಿಜಾತೀಯ ದ್ವಿತ್ವಗಳು ಬಹುಮಟ್ಟಿಗೆ ಸಿಥಿಲಗೊಂಡಿವೆ, ಇಲ್ಲವೆ ಒತ್ತನ್ನು ಕಳೆದುಕೊಂಡಿವೆ. ಮಹಾಪ್ರಾಣಗಳು ಅಲ್ಪಪ್ರಾಣಗಳಾಗಿವೆ. ಅಂತೂ ಆಂಗ್ಲ ನುಡಿಗಳ ತದ್ಭವೀಕರಣದಲ್ಲೂ ಸಂಸ್ಕೃತದ ತದ್ಭವಗಳಲ್ಲಿ ಕಂಡುಬರುವ ಮಾರ್ಪಾಟುಗಳೇ ಸಾಮಾನ್ಯವಾಗಿ ಘಟಿಸುತ್ತಿವೆ. ತಜ್ಞರು ಈ ಮಾರ್ಪಾಟುಗಳ ಗುಟ್ಟನ್ನರಿತು ಕನ್ನಡಕ್ಕೆ ಆವಶ್ಯಕವೆನಿಸುವ ಆಂಗ್ಲನುಡಿಗಳನ್ನು ಕನ್ನಡದ ನಾಲಗೆಗೆ ಒಗ್ಗುವಂತೆ ಕನ್ನಡದ ಸೊಲ್ಲಿಗೆ ಸಲ್ಲುವಂತೆ ಬುದ್ಧಿಪುರಸ್ಸರವಾಗಿ ತಿದ್ದಿ ತದ್ಭವಗಳನ್ನಾಗಿ ಮಾಡಿಕೊಳ್ಳುವುದು ಉಚಿತವಲ್ಲವೆ? ಹಾಗೆ ಮಾಡಿದಲ್ಲಿ ಆಂಗ್ಲ ನುಡಿಗಳೂ ಸಂಸ್ಕೃತದ ಸಹಸ್ರಾರು ತದ್ಭವಗಳಂತೆ - ಕನ್ನಡದ ನಾಲಗೆಯ ಸಹಜ ಸೊತ್ತಾಗಿ ಕನ್ನಡ ಶಬ್ದ ಭಾಂಡಾರದಲ್ಲಿ ಶಾಶ್ವತವಾಗಿ ಉಳಿಯಬಹುದಾಗಿದೆ. ನೂರಾರು ವರುಷಗಳ ಕಾಲ ಗತಿಸಿದಂತೆ ಆಂಗ್ಲನುಡಿಯಲ್ಲಿಯ ಮೂಲ ಸೊಲ್ಲಡಗಿ ಕನ್ನಡದ ನುಡಿಗಳೇನೋ ಎಂಬಂತೆ ಅವು ಕನ್ನಡದ ಪದಸಂಪತ್ತನ್ನು ಹೆಚ್ಚಿಸುವಲ್ಲಿ ಸಂದೇಹವಿಲ್ಲ. ಕೆಲ ಆಂಗ್ಲ ನುಡಿಗಳು ಹೀಗೆ ಕಾಲಚಕ್ರದ ಗಾಣಕ್ಕೆ ಸಿಲುಕಿ ಸವೆದು ಕನ್ನಡದ ಸೊಲ್ಲಿನಿಂಪುವಡೆದು ಮೂಲವನ್ನೇ ಮರೆಸುವಂತೆ ಮಾರ್ಪಟ್ಟಿಲ್ಲವೆ? ಕೆಳಗಿನ ಈ ಉದಾಹರಣೆಗಳು ಈ ಮಾತನ್ನು ಪುಷ್ಟೀಕರಿಸುತ್ತವೆ :

ಆಸ್ಪತ್ರೆ, ಕಂದೀಲು, ಕಪಾಟು, ಕಂತ್ರಾಟು, ಬಾಟ್ಲಿ, ಮಾಸ್ತರ, ಮೇಷ್ಟ್ರು, ರಸೀದಿ, ಲಂಗರು, ಲಾಟನ್ನು, ಲಾಂದರು - ಇತ್ಯಾದಿ.

- ಹೀಗೆ ಕನ್ನಡದ ಉಚ್ಚಾರಣೆಗಳಳವಡುವಂತೆ ಅನ್ಯದೇಶ್ಯಗಳನ್ನು ಮಾರ್ಪಡಿಸಿಕೊಳ್ಳಬಲ್ಲ ಶಕ್ತಿ-ಸಾಮರ್ಥ್ಯಗಳು ಕನ್ನಡದ ನಾಲಗೆಗುಂಟೆಂಬುದನ್ನು ಈ ಉದಾಹರಣೆಗಳು ಉದ್ಘೋಷಿಸುತ್ತಿವೆಯಲ್ಲವೆ ?

ಆಂಗ್ಲ ತದ್ಭವಗಳ ರಾಶಿಯೊಂದು ಕನ್ನಡದಲ್ಲಿ ಕಂಡಾಬಟ್ಟೆಯಾಗಿ ಬೆಳೆಯಬೇಕೆಂಬುದೇ ನನ್ನ ವಾದವೆಂದು ಮಾತ್ರ ಇದರಿಂದ ಊಹಿಸಕೂಡದು. ಈ ಆಂಗ್ಲಭವಗಳ ರಾಶಿ ಈಗಾಗಲೇ ಕನ್ನಡದಲ್ಲಿ ಉಳಿದೆಲ್ಲ ಭಾರತೀಯ ಭಾಷೆಗಳಲ್ಲಿಯಂತೆಯೇ ಪ್ರತಿಕ್ಷಣದಲ್ಲೂ ಕೂಡಿಬೀಳುತ್ತಲೇ ಇದೆ. ಯಾರ ಇಚ್ಛೆ ಅನಿಚ್ಛೆಗಳನ್ನೂ ಅದು ಅವಲಂಬಿಸಿಲ್ಲ. ಸುಶಿಕ್ಷಿತರು, ತಜ್ಞರು ಇಲ್ಲಿ ಮಾಡಬೇಕಾದ ಕರ್ತವ್ಯವೆಂದರೆ ಕೂಡಿಬೀಳುತ್ತಲಿರುವ ಈ ರಾಶಿಯನ್ನು ಅಭ್ಯಸಿಸಿ, ಶೋಧಿಸಿ ಪ್ರತಿಯೊಂದು ಶಬ್ದದ ಓರೆಕೋರೆಗಳನ್ನು ತಿದ್ದಿ ಪರಿಷ್ಕರಿಸಿ ಸರಿಪಡಿಸಿಕೊಳ್ಳುವುದು.

ಪ್ರತಿ ಶಬ್ದ ನಿರ್ಮಿತಿ

ಇಷ್ಟಕ್ಕೆ ಈ ಕಾರ್ಯ ಮುಗಿಯದು. ಇಂದು ಆಂಗ್ಲಭಾಷಾ ಮಹಾಪೂರದ ಅದಮ್ಯವಾದ ಒತ್ತಡಕ್ಕೆ ಕನ್ನಡದಲ್ಲಿ ಯೋಗ್ಯವಾದ ಮಾರ್ಗವನ್ನು ಕಲ್ಪಿಸಿಕೊಡಲು ಇನ್ನೂ ಒಂದು ವಿಧಾನವಿದೆ. ಅದು ಪ್ರತಿ ಶಬ್ದಗಳ ನಿರ್ಮಿತಿ. ಇದೂ ಕನ್ನಡದಲ್ಲಿ ಇದೀಗ ಕುದುರುತ್ತಿದೆ. ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಪ್ರತಿ ಶಬ್ದಗಳನ್ನು ಹುಟ್ಟಿಸಿಕೊಳ್ಳುತ್ತ ಬಂದಂತೆ ಕನ್ನಡದ ಬುದ್ಧಿ ಆಂಗ್ಲ ಪದಗಳ ಪ್ರತಿ ಶಬ್ದಗಳನ್ನೂ ಕಾಲಕಾಲಕ್ಕೆ ಅತ್ಯವಶ್ಯವೆನಿಸಿದಾಗ ನಿರ್ಮಿಸುತ್ತಲೇ ಬಂದಿದೆ. ಪ್ರತಿಶಬ್ದಗಳ ನಿರ್ಮಿತಿಯಲ್ಲಿ ಹಲವಾರು ವಿಧಾನಗಳ ಪ್ರಯೋಗಗಳನ್ನು ರೂಢಿಸಿ ನೋಡುವುದೂ ಈಗ ಕಂಡುಬರುತ್ತಿದೆ. ಒಂದು ಶಬ್ದಕ್ಕೆ ಹಲವಾರು ಪ್ರತಿಶಬ್ದಗಳು ಹುಟ್ಟಿದ ಬಳಿಕೆಯಲ್ಲಿ ಬರಬಹುದಾಗಿದೆಯಲ್ಲದೆ ಆ ಶಬ್ದದ ತದ್ಭವರೂಪವೂ ಅವುಗಳೊಡನೆಯೇ ಏಕಕಾಲಕ್ಕೆ ನಡೆಯುತ್ತಿರುವ ಸಂಭವವುಂಟು. ಈ ಅನೇಕ ಪ್ರಯೋಗಗಳಲ್ಲಿ ಯಾವುದೊಂದನ್ನೊ ಕೆಲವನ್ನೊ ಉಳಿಸಿಕೊಂಡು ಇನ್ನುಳಿದುವನ್ನು ಅಳಿಸಿಬಿಡುವ ಅಧಿಕಾರವನ್ನು ಕಾಲಪ್ರವಾಹಕ್ಕೆ ಬಿಟ್ಟುಕೊಡುವುದೇ ವಿಹಿತ. ಶಬ್ದಗಳ ಹುಟ್ಟು-ಬೆಳವಣಿಗೆಯಲ್ಲಿ ಯಾರೊಬ್ಬರ ಹಟ-ಮುರವತ್ತುಗಳಿಗೂ ಇಂಬಿಲ್ಲ. ಕೆಳಗಿನ ಈ ಶಬ್ದಗಳನ್ನು ಪರಿಶೀಲಿಸಬೇಕು.

ಆಂಗ್ಲ	ಕನ್ನಡ
ಇಲೆಕ್ಟ್ರಿಕ್‌ಲ್ಯಾಂಪ್	ವಿದ್ಯುದ್ದೀಪ, ಮಿಂಚುದೀವಿಗೆ
ಆಟಂಬಾಂಬ್	ಅಣ್ವಸ್ತ್ರ, ಅಣುಶಸ್ತ್ರ, ಅಣುಶಸ್ತ್ರಾಸ್ತ್ರ, ಅಣುಬಾಂಬು (ಪರಮಾಣು ಪ್ರಸ್ಫೋಟ, ಪರಮಾಣುಗೋಲ (ರ))
ಆಡ್ಜರ್ನ್	ಮುಂದುವರಿಸು, ಸ್ಥಗಿತಗೊಳಿಸು
ರೇಡಿಯೊ	ಬಾನುಲಿ, ಆಕಾಶವಾಣಿ, ಬಾಂದನಿ
ಕಾರ್ಡು	ಕಾಗದ, ರಟ್ಟು ಚೀಟಿ
ರೇಲ್ವೆ ಟ್ರೇನು	ಉಗಿಬಂಡಿ, ಹೊಗೆಬಂಡಿ, ರೈಲುಗಾಡಿ
ಸಾನೆಟ್	ಅಷ್ಟಷಟ್ಪದಿ, ಸುನೀತ
Satire	ವಿಡಂಬನೆ, ಶತಾರಿ
ಪೋಸ್ಟು	ಅಂಚೆ, ಟಪ್ಪಾಲು
ವಾಯರು, ಟೆಲೆಗ್ರಾಮು	ತಾರು, ತಂತಿ
ಮೂವ್ಹಿಸಿನೇಮಾ	ಚಲಚ್ಚಿತ್ರ
ಟಾಕೀ ಸಿನೇಮಾ	ವಾಕ್ಚಿತ್ರ, ವಾಕ್ಪಟ
Tragedy	ದುರಂತ ನಾಟಕ, ರುದ್ರ ನಾಟಕ, ಗಂಭೀರ ನಾಟಕ, ಆವಿದ್ಧ ಪ್ರಯೋಗ
Revolution	ಕ್ರಾಂತಿ, ದೊಡ್ಡ ಬದಲಾವಣೆ, ವಿಪ್ಲವ
Evolution	ಉತ್ಕ್ರಾಂತಿ, ವಿಕಾಸ, ಉದ್ವಿಕಾಸ
Mile	ಮೈಲು, ಮೈಲಿ

ಆಂಗ್ಲ	ಕನ್ನಡ
Member	ಸದಸ್ಯ, ಸಭಾಸದ, ಮೆಂಬರು
ಮೀಟಿಂಗು	ಸಭೆ, ಅಧಿವೇಶನ
ಹಾಟೆಲ್ಲು	ಖಾನಾವಳಿ, ಹೋಟ್ಲು, ಊಟದ ಮನೆ
	ಫಲಾಹಾರದಂಗಡಿ, ನಂಬರ ಮನೆ
ವಾರಂಟು	ಆಜ್ಞಾಪತ್ರ, ಪ್ರಮಾಣಪತ್ರ, ಅಧಿಪತ್ರ, ಅಧಿಕಾರ ಪತ್ರ
ಸಮನ್ಸ್	ಆಹ್ವಾನ, ಸಮನಸ್ಸು
ಚಾಲೆಂಜು	ಪ್ರತ್ಯಾಹ್ವಾನ, ಆಹ್ವಾನ
Invitation	ಆಮಂತ್ರಣ, ನಿಮಂತ್ರಣ, ಔತಣ, ಆಹ್ವಾನ

ಮಾದರಿಗಾಗಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಒಂದೆರಡನ್ನು ಪರಿಶೀಲಿಸಬಹುದು : ಆ್ಯಟಂಬಾಂಬು, ಅಣುಬಾಂಬು ಎಂಬಲ್ಲಿ ಇಂದಿನ ಪತ್ರಿಕೆಗಳು 'ಅಣ್ವಸ್ತ್ರ', 'ಅಣುಶಸ್ತ್ರ', 'ಅಣುಶಸ್ತ್ರಾಸ್ತ್ರ' ಮೊದಲಾದುವನ್ನು ಪ್ರಯೋಗಿಸುತ್ತಿವೆ. ಬಾಂಬು ಎಸೆಯಲ್ಪಡುವುದಾದ್ದರಿಂದ ಅದನ್ನು ಶಸ್ತ್ರ ಎನ್ನುವುದಕ್ಕಿಂತ ಅಸ್ತ್ರ ಎನ್ನುವುದೇ ಲೇಸಲ್ಲವೆ? ರೇಡಿಯೋ ಶಬ್ದದ ಪ್ರತಿಶಬ್ದಗಳಾಗಿರುವ 'ಬಾನುಲಿ', 'ಆಕಾಶವಾಣಿ' ಎಂಬೆರಡರಲ್ಲಿ 'ಆಕಾಶವಾಣಿ' ಎಂಬುದಕ್ಕೆ ಭಾರತೀಯ ಪೌರಾಣಿಕ ಕಥೆಗಳಲ್ಲಿ ಬೇರೊಂದು ಅರ್ಥಪ್ರತೀತಿ ಉಂಟಲ್ಲವೆ? 'ಬಾನುಲಿ' ಶಬ್ದವು ಜನಸಾಮಾನ್ಯರಿಗೆ ಇಂದು ಅಪರಿಚಿತವೆನಿಸಿದರೂ ಅದರ ಬಳಕೆ ಹೆಚ್ಚಿದಂತೆ ಅದು ಕನ್ನಡದಲ್ಲಿ ನೆಲೆಗೊಳ್ಳುವಂತೆ ತೋರುವುದಿಲ್ಲವೆ? ಈ ಸಂದರ್ಭದಲ್ಲಿ 'ಕ್ರಾಂತಿ' ಶಬ್ದದ ಚರಿತ್ರೆಯನ್ನು ಗಮನಿಸಬೇಕು. ೫೦, ೬೦ ವರುಷಗಳ ಹಿಂದೆ ಅಷ್ಟೊಂದು ಪ್ರಚಲಿತವಿಲ್ಲದ ಈ ಶಬ್ದವು ಬಳಕೆ ಹೆಚ್ಚಿದಂತೆ ಜನಪ್ರಿಯತೆಯನ್ನು ಪಡೆದಿಲ್ಲವೆ? To adjowin ಎಂಬುದಕ್ಕೆ 'ಮುಂದುವರಿಸು' ಎಂಬುದು ಸಮರ್ಪಕವಲ್ಲ ಎನಿಸುತ್ತಿದೆ - 'ಮುಂದುವರಿಸು' ಎಂಬಲ್ಲಿ 'ಮುಂದೆ ಸಾಗಿಸು' to continue ಎಂಬರ್ಥ ಅಡಕವಾಗಿಲ್ಲವೆ? ಅಂಚೆ, ಟಪ್ಪಾಲು, ತಾರು, ತಂತಿ - ಎಂಬಿವೇ ಮೊದಲಾದುವು ಇಂದು ಎಲ್ಲರ ಮನೆಮಾತಾಗಿವೆ. sonnet ಶಬ್ದವನ್ನು 'ಸುನೀತ'ವೆಂದೂ satire ಶಬ್ದವನ್ನು 'ಶತಾರಿ' ಎಂದು ಕನ್ನಡಿಸುವ ಹವಣಿಕೆಯಲ್ಲಿ ಮೂಲ ಶಬ್ದದ ಸೊಲ್ಲಿನ ಮೋಹ ಕಂಡುಬರುವುದಿಲ್ಲವೆ? ಇಂಥದರ ಔಚಿತ್ಯ ಸಮಂಜಸತೆಯನ್ನು ಪರಿಶೀಲಿಸಬೇಕು. 'ಆಹ್ವಾನ'ದಂತಹ ಶಬ್ದಗಳ ಬಳಕೆಯಲ್ಲಿರುವ ಗೊಂದಲಕ್ಕೆ ಪರಿಹಾರವನ್ನು ಶೋಧಿಸಬೇಕು. 'ಹೋಟ್ಲು', 'ಮೈಲಿ', 'ಉಗಿಬಂಡಿ', 'ಖಾನಾವಳಿ', 'ಆಮಂತ್ರಣ, ನಿಮಂತ್ರಣ' - ಇತ್ಯಾದಿಗಳಲ್ಲಿಯ ಪ್ರಾದೇಶಿಕತೆಯ ಬಗೆಗೆ ಇಂತಹುದೇ ಶುದ್ಧರೂಪವೆಂಬ ಹಟಕ್ಕೆ ಬೀಳುವುದಕ್ಕಿಂತ ಒಂದು ರಾಜ್ಯಕ್ಕೆ ಸೇರಿದ ಕನ್ನಡರೆಲ್ಲರು ಬೇರೆಬೇರೆ ಪ್ರದೇಶಗಳಲ್ಲಿ ವಿಶೇಷ ಪ್ರಚಲಿತವಿದ್ದ ಇಂತಹ ಶಬ್ದಗಳ ಪರಿಚಯ ಮಾಡಿಕೊಳ್ಳುವುದು ವಿಹಿತವೆಂದು ತೋರುತ್ತದೆ. ಇನ್ನೂ ಕೆಲವು ಆಂಗ್ಲನುಡಿಗಳ ಪ್ರತಿಶಬ್ದಗಳು ಜನಬಳಕೆಯಲ್ಲಿ ಇನ್ನು ಬಂದಿಲ್ಲ, ಬರೆವಣಿಗೆಯಲ್ಲೂ ಹೆಚ್ಚಾಗಿ ಇಳಿದಿಲ್ಲ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆ :

ಸಿಮೆಂಟು	-	ವಜ್ರಲೇಪ, ವಜ್ರಚೂರ್ಣ, ಯುಜಲೇಪ (ರ.ನಿ.)
ಇಂಜೆಕ್ಷನ್	-	ಚುಚ್ಚುಮದ್ದು
ಪಿನ್ನು	-	ಗುಂಡುಸೂಜಿ
ವಾಯರ್‌ಲೆಸ್ಸು	-	ಅಲೆಯಂಚೆ, ನಿಸ್ತಂತುವಾರ್ತೆ

ಇಂತಹ ಪ್ರತಿ ಶಬ್ದಗಳಲ್ಲಿ ಅರ್ಥಪೂರ್ಣತೆಯಿದ್ದರೂ ಇವುಗಳನ್ನು ಬರವಣಿಗೆಯಲ್ಲಿ ತಂದು ಜನಮೆಚ್ಚಿಗೆ ಪಡೆಯುವ ಹವಣಿಕೆಗಳೂ ನಡೆಯಬೇಕು - ಈ ಶಬ್ದಗಳ ನಿರ್ಮಿತಿಯಲ್ಲಿ ಕಂಡುಬರುವ ಸಾಹಸವು ಶ್ಲಾಘನೀಯವಾಗಿದೆ.

ಇನ್ನು ಪತ್ರಿಕೆಗಳಲ್ಲಿ ಬರುತ್ತಿರುವ ಈ ಕೆಲವು ಪದ ಪ್ರಯೋಗಗಳನ್ನು ಗಮನಿಸಬೇಕು :

Print of order	-	ವಿಧಿಬಿಂದು
Cold war	-	ಶೀತಲ ಯುದ್ಧ
Sitting on the fence	-	ಬೇಲಿಯ ಮೇಲೆ ಕುಳಿತುಕೊಳ್ಳುವುದು
Joint Secretary	-	ಸಹ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ

- 'ವಿಧಿಬಿಂದು', 'ಶೀತಲಯುದ್ಧ', 'ಬೇಲಿಯ ಮೇಲೆ ಕುಳಿತುಕೊಳ್ಳುವುದು' - ಇವುಗಳಲ್ಲಿ ಮೂಲದ

ಆಂಗ್ಲಪದ ಪ್ರಯೋಗಗಳ ಅರ್ಥಕ್ಕೆ ಗಮನಕೊಡದೆ ಶಬ್ದಕ್ಕೆ ಪ್ರತಿಶಬ್ದ ಹಿಡಿವ ಹುಡುಗುತನ ಎಷ್ಟು ಕಾಣುತ್ತದೆ. Point of order ಎಂಬುದಕ್ಕೆ ಉಚಿತ ಪ್ರಶ್ನೆ, ಕ್ರಮವಿಚಾರ ಎಂಬ ಪ್ರಯೋಗಗಳೂ cold war ಎಂಬುದಕ್ಕೆ 'ಪ್ರಚ್ಛನ್ನ ಯುದ್ಧ' ವೆಂಬುದೂ Sitting on the fence ಎಂಬುದಕ್ಕೆ ಎರಡೂ ದಂಡೆಯ ಮೇಲೆ ಕೈಯಾಡಿ ಕುಳಿತುಕೊಳ್ಳುವುದು, ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮೊದಲಾದ ರೂಢಿಯ ಪ್ರಯೋಗಗಳೂ ಮೂಲದ ತಿರುಳೆತ್ತಿ ತೋರುವದಿಲ್ಲವೆ? 'ಜಂಟಿ ಕಾರ್ಯದರ್ಶಿ'ಯಲ್ಲಿಯ ಅರಿಸಮಾಸವು ಉತ್ತರ. ಕನ್ನಡ ಕಿವಿಗಷ್ಟೆ ಕರ್ಕಶವೆನಿಸಲಾರದೆಂದು ಎನಿಸುತ್ತದೆ. 'ಸಹ ಕಾರ್ಯದರ್ಶಿ'ಯಂತಹ ಸುಂದರ ಸಮಸ್ತಪದವನ್ನೇಕೆ - ಕಡೆಗಣಿಸಬೇಕೋ ತಿಳಿಯದು !

ದಿನಪತ್ರಿಕೆಗಳ ಕಾರ್ಯ ಗುರುತರವಾದುದು. ಅಲ್ಪಾವಧಿಯಲಿ, ಅನಂತ ಹಾಗೂ ಅಮೋಘ ಕಾರ್ಯವೆಸಗುತ್ತಿರುವ ದಿನಪತ್ರಿಕೆಗಳು ಇಂದಿನ ರಾಜಕಾರಣ ಪ್ರಪಂಚಕ್ಕೆ ಸೇರಿದ ಹಲವಾರು ಆಂಗ್ಲ ಶಬ್ದಗಳಿಗೆ ಸುಂದರ ಹಾಗೂ ಯಥಾರ್ಥ ಪ್ರತಿಶಬ್ದಗಳನ್ನು ಒದಗಿಸಿವೆ. ಕೆಳಗಿನ ಈ ಪ್ರತಿಶಬ್ದಗಳನ್ನು ಯಾರು ಮೆಚ್ಚರು ? -

ಪಾರ್ಲಿಮೆಂಟು	-	ಸಂಸತ್ತು
Movement	-	ಚಳವಳಿ, ಆಂದೋಲನ
Tear-gas	-	ಅಶ್ರುವಾಯು
Leftists	-	ಎಡಪಕ್ಷದ ಸಭಾಸದರು, ವಿರೋಧಿ ಪಕ್ಷ
Security Council	-	ಭದ್ರತಾ ಮಂಡಲ
United Nations Organization	-	ಯುಕ್ತ ರಾಷ್ಟ್ರಸಂಘ
Colonisation	-	ವಸಾಹತುವಾದ

ಪ್ರತಿ ಶಬ್ದಗಳ ನಿರ್ಮಿತಿಯಲ್ಲಿ ಕವಿತ್ವವು ಅಮೋಘ ಕೆಲಸ ಮಾಡಬಲ್ಲದು. Electric shock ಎಂಬುದಕ್ಕೆ 'ತಟಿಚ್ಚುಂಬನ' ಎಂಬುದೂ survival of the fittest ಎಂಬುದಕ್ಕೆ 'ಬಲಿಷ್ಠನಿಗೆ ಬಾಳು', 'ಬಲಕ್ಕೆ ಬದುಕು' ಎಂಬುವೂ ಸೊಗಸಾದ ಪ್ರಯೋಗಗಳು. ಹೀಗೆಯೇ ಅಚ್ಚಗನ್ನಡ ಪ್ರಯೋಗಗಳು ಉತ್ತಮ ಪ್ರತಿ-ಶಬ್ದಗಳನ್ನು ಒದಗಿಸಬಲ್ಲವು : ಈ ವಾಕ್ಯವನ್ನು ಗಮನಿಸಿರಿ :' ಈ ವಚನದಲ್ಲಿ ಎಂತಹ 'ನಗೆಯೀಟಿ'ಯ ಚುಚ್ಚು ಕಿಚ್ಚಾಡುತ್ತಿದೆ' - (ಕುವೆಂಪು) ಇಲ್ಲಿ 'ನಗೆಯೀಟಿಯ ಚುಚ್ಚು' - Satire, Sarcasm ಕಟುವ್ಯಂಗ್ಯ ಎಂಬರ್ಥವನ್ನು ಅದೆಷ್ಟು ಸತ್ತ್ವಪೂರ್ಣವಾಗಿ ಎತ್ತಿ ತೋರುವುದಲ್ಲ! ಹಾಗೆಯೆ Inner truth ಎಂಬುದಕ್ಕೆ 'ಒಳ ನನ್ನಿ' ಎಂಬ ತಿರುಳ್ಗನ್ನಡ ಪದವು ಅದೆಷ್ಟು ಅರ್ಥಪೂರ್ಣವಾಗಿದೆ, ಸವಿಯಾಗಿದೆ ! ಇಂತಹ ಪ್ರಯೋಗಗಳು ಬರಿ ಪ್ರತಿಶಬ್ದಗಳಲ್ಲಿ; ಪಕ್ವ ಪ್ರತಿಭೆಯ ತೀಕ್ಷ್ಣಾನುಭವದ ಕಾವಿನಿಂದ ಸಿಡಿದೆದ್ದ ಮಿಂಚುನುಡಿಗಳು.

ಕೆಲವೊಂದು ಬರೆವಣಿಗೆಯಲ್ಲಿ 'ಇಸು' ಪ್ರತ್ಯಯವನ್ನು ನಾಮಗಳ ಹಾಗೂ ವಿಶೇಷಣಗಳ ಮುಂದೆ ಹತ್ತಿಸಿ ಧಾತುಗಳನ್ನು ಮಾಡಿಕೊಳ್ಳುವ ವಿಧಾನವು ಕಂಡುಬಂದಿದೆ. ಆಂಗ್ಲ ಧಾತುಗಳ ಸೊಗಸನ್ನು ಕನ್ನಡಕ್ಕೆ ತರುವ ಕಾಯಕವು ಇಲ್ಲಿದೆ : ಉದಾಹರಣೆಗೆ -

To define	-	ಲಕ್ಷಣಿಸು
To beautify	-	ಸುಂದರಿಸು
To lecture	-	ಉಪನ್ಯಸಿಸು
To name	-	ಹೆಸರಿಸು
To verify	-	ಕವನಿಸು
To interpret	-	ಅರ್ಥಯಿಸು

ಕೆಲಸಲ ಮೂಲಪದದ ಅರ್ಥವನ್ನು ಸಮರ್ಪಕವಾಗಿ ಅಭಿವ್ಯಕ್ತಪಡಿಸುವುದು ಅಸಾಧ್ಯವೆನಿಸಿದಾಗ ಲೇಖಕನು ತನ್ನ ಪ್ರತಿಭೆಯನ್ನು ಬೇರೊಂದು ದಿಸೆಯಲ್ಲಿ ಓಡಿಸಿ ಪ್ರತಿಶಬ್ದವನ್ನು ಮೂಡಿಸುತ್ತಾನೆ. ಇಂಥ ಶಬ್ದನಿರ್ಮಿತಿಗೆ ಬರಿ ಶಬ್ದಾರ್ಥ ಜ್ಞಾನವಷ್ಟೇ ಸಾಲದು. ಆ ಶಬ್ದದ ಇತಿಹಾಸ ಪ್ರಜ್ಞೆ ಇಲ್ಲಿ ಅದ್ಭುತ ರೀತಿಯಲ್ಲಿ ಕೆಲಸ ಮಾಡುವದು. ಉದಾಹರಣೆಗೆ, ಈವಾಕ್ಯವನ್ನು ಗಮನಿಸಿರಿ :

"ಇದೊಂದು ಸಾಹಿತ್ಯದ tantricism ಎಂದರೆ ಗೋರಕ್ಷನಾಥ ತಂತ್ರ"

ಇಲ್ಲಿ tantricism ಪದದಲ್ಲಿ ಅಡಕವಾದ ಅರ್ಥವನ್ನು ಮನಸೆಳೆವ ಹಾಗೂ ನಾಟಕೀಯ ರೀತಿಯಲ್ಲಿ ಭಾಷಾಂತರಿಸಿದ್ದಾಗಿದೆ.

ವೈಜ್ಞಾನಿಕ ಪರಿಭಾಷೆ

ಇಂದು ಆಂಗ್ಲ ಭಾಷೆಯಲ್ಲಿಯ ವೈಜ್ಞಾನಿಕ ಶಬ್ದ ಸಂಪತ್ತಿನ ಯಾವುದೇ ಭಾರತೀಯ ಭಾಷೆಯಲ್ಲಿ 'ತರ್ಜುಮೆ' ಮಾಡುವುದು ಬಹು ಕಠಿಣ ಕೆಲಸ. ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಅರ್ಥಶಾಸ್ತ್ರ, ರಾಜನೀತಿಶಾಸ್ತ್ರ, ಶಿಕ್ಷಣಶಾಸ್ತ್ರ, ಆಧ್ಯಾತ್ಮ, ವಿಜ್ಞಾನ, ಸಾಹಿತ್ಯ ವಿಮರ್ಶಾ ಶಾಸ್ತ್ರ - ಇವೇ ಮೊದಲಾದ ವಿಜ್ಞಾನ ವಿಷಯಕ ಶಬ್ದ ಭಾಂಡಾರವು ಆಂಗ್ಲ ಭಾಷೆಯಲ್ಲಿ ಅಪ್ರತಿಮವಾಗಿದೆ. ಇಂದು ಈ ಶಾಸ್ತ್ರಗಳಲ್ಲಿ ಪರಿಣತರಾದವರೂ ಕನ್ನಡದ ತಿರುಳರಿತವರೂ ಇವುಗಳಿಗೆ ಸಂಬಂಧಪಟ್ಟ ಪಾರಿಭಾಷಿಕ ಶಬ್ದಸಂಗ್ರಹವನ್ನು ಕಲೆಹಾಕಬೇಕು. ಈ ಮೊದಲೆ ಸೂಚಿಸಿದಂತೆ - ತದ್ಭವೀಕರಣದಿಂದಲೂ ಪ್ರತಿಶಬ್ದ ನಿರ್ಮಿತಿಯಿಂದಲೂ ವೈಜ್ಞಾನಿಕ ಪರಿಭಾಷೆಯನ್ನು ಸಿದ್ಧಪಡಿಸುವುದು ಸಾಧ್ಯವಿದೆ. ಇಲ್ಲಿಯೂ ಹೆಚ್ಚಾಗಿ ಸಂಸ್ಕೃತದ ಸಹಾಯವು ಆವಶ್ಯಕ. ಅರ್ಥಶಾಸ್ತ್ರದ ವಿವರಣೆಯಲ್ಲಿ ಹೊಸಹೊಸ ಪಾರಿಭಾಷಿಕ ಶಬ್ದಗಳು ಎಂದಿನಿಂದಲೂ ಕನ್ನಡದಲ್ಲಿ ಬಳಕೆಯಲ್ಲಿ ಬರುತ್ತಲಿವೆ. ಆಧ್ಯಾತ್ಮ ವಿದ್ಯಾನಿಧಿಯೆನ್ನುವ ಸಂಸ್ಕೃತವು ಈ ಪರಿಭಾಷೆಗೆ ಹೇಗೆ ನೆರವಾಗಬಲ್ಲದೆಂಬುದನ್ನು ಕೆಳಗಿನ ಈ ಉದಾಹರಣೆಗಳಲ್ಲಿ ಕಂಡುಕೊಳ್ಳಬಹುದಾಗಿದೆ:

Subconscions	-	ಉಪ ಪ್ರಜ್ಞೆ
Subliminal consciousness	-	ಪ್ರಕಾಶಿತ ಪ್ರಜ್ಞೆ
Unconscious	-	ಪ್ರಜ್ಞಾ ರಹಿತ ಪಾತಾಳ
Collective unconscious	-	ವಿಶ್ವಪ್ರಜ್ಞೆ
Supermind	-	ಅತಿಮಾನಸ
Supra mental	-	ಅತಿಮಾನಸ

ವಿವಿಧ ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಬೇರೆಬೇರೆ ಪಾರಿಭಾಷಿಕ ಶಬ್ದ ಸಂಗ್ರಹಗಳನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ರಘುವೀರ ನಿಘಂಟು ಕೆಲಮಟ್ಟಿಗೆ ಮಾರ್ಗದರ್ಶಿಯಾಗಿದೆ. ಆದರೆ ಅಲ್ಲಿ ಕೊಟ್ಟ ಪದಗಳು ಕನ್ನಡದಲ್ಲಿ ಹೆಚ್ಚಾಗಿ ರೂಢಿಯಲ್ಲಿಲ್ಲ. ಇಲ್ಲಿಯವು ಬೇರೆಯೇ ಇವೆ.

ಉದಾಹರಣೆಗೆ ಈ ಕೆಳಗಿನವುಗಳನ್ನು ಪರಾಮರ್ಶಿಸಬೇಕು :

	ಕನ್ನಡದ ರೂಢಿ	ರಘುವೀರ ನಿಘಂಟು
Nitrogen	ಸಾರಜನಕ	ಭೂಯಾತಿ
Pythagoras Theorem	—	ಚಿತಿ ಪ್ರಮೇಯ (ಈ ಶಬ್ದವು ಮೊಟ್ಟಮೊದಲು ವೇದದಲ್ಲಿ ಯಜ್ಞ ವೇದಿಕೆಯ ಸಂದರ್ಭದಲ್ಲಿ ಪ್ರಯೋಗಿಸಲ್ಪಟ್ಟದ್ದು ಪಾಯಥಾಗೋರಸನು ಭಾರತದಿಂದಲೇ ಈ ವಿಷಯವನ್ನು ತೆಗೆದುಕೊಂಡನಂತೆ)
Quadrangle	ಚೌಕೋನ, ಚೌಕಾಂಗಳ ಚತುರ್ಭುಜಾಕೃತಿ	ಚತುಷ್ಕೋನ
Quinine	ಕ್ವಿನೀನು	ವಿಜ್ವರೀ
Redium	ರೇಡಿಯಮ್ಮು	ತೇಜಾತು
Reflection	ಪ್ರತಿಬಿಂಬಿಸುವುದು ಮಾರ್ಪೊಳೆವುದು ಮಾರ್ಪೊಳವು	ಪರಾವರ್ತನ ಪ್ರತಿಫಲನ

	ಕನ್ನಡದ ರೂಢಿ	ರಘುವೀರ ನಿಘಂಟು
Strategy	ಸೇನಾವ್ಯವಸ್ಥೆ (ಮೈ) ವ್ಯೂಹನಿರ್ಮಾಣ ವಿವೇಕ (ಮೈ)	ಯೋಧನನೀ
Watt	ವಿದ್ಯುತ್ ಸಾಮರ್ಥ್ಯದ ಏಕಮಾನ (ಮೈ)	ದ್ಯುಶಕ್ತಿ
Microscope	ಸೂಕ್ಷ್ಮದರ್ಶಕ ಯಂತ್ರ	ಅಣ್ವೇಕ್ಷ

ಮೇಲೆ ಕೊಟ್ಟ ಪಾರಿಭಾಷಿಕಗಳಲ್ಲಿ ಅವಶ್ಯವೆನಿಸಿದಲ್ಲಿ ರಘುವೀರ ನಿಘಂಟುವಿನ ಕೆಲವು ಪ್ರಯೋಗಗಳನ್ನು ರೂಢಿಯಲ್ಲಿ ತರುವುದು ಉಚಿತ. ವಿಜ್ಞಾನ ವಿಷಯಕ ಪ್ರತಿಯೊಂದು ಶಬ್ದಕ್ಕೂ ಸಂಸ್ಕೃತ ಭಾಂಡಾರದಿಂದ ಪ್ರತಿಶಬ್ದವನ್ನು ಶೋಧಿಸಿಕೊಡುವ ಶ್ರೀ ರಘುವೀರರ ಸಾಹಸವು ಪ್ರಸಂಸಾರ್ಹವಾಗಿದೆ. ಅಲ್ಲದೆ ಅವರು ಈ ಶಬ್ದನಿರ್ಮಿತಿಯಲ್ಲಿ ಇಟ್ಟುಕೊಂಡ ವಿಧಾನಗಳು ಅಭ್ಯಸಿಸಲರ್ಹವಾಗಿವೆ. Pythagoras theoren ಎಂಬುದಕ್ಕೆ ರಘುವೀರರ ನಿಘಂಟುವಿನ 'ಚಿತಿಪ್ರಮೇಯ'ವನ್ನು ಬಳಕೆಯಲ್ಲಿ ತರಬಹುದೇ? ಹಾಗೆಯೇ ಕ್ವಿನೀನು, ರೇಡಿಯಮ್ಮುಗಳ ಪ್ರತಿಶಬ್ದಗಳನ್ನು ಆಂಗ್ಲ ಭಾಷೆಗಳೊಂದಿಗೆ ರೂಢಿಸಿ ನೋಡುವುದು ಪ್ರಯೋಜನಕಾರಿಯಾದ ವಿಧಾನ. Reflect, Reflection - ಶಬ್ದಗಳಿಗೆ ಮಾರ್ಪೊಳೆ, ಮಾರ್ಪೊಳಪು ಎಂಬ ಶಬ್ದಗಳು ಈ ಪ್ರಯತ್ನದಲ್ಲಿ ಹೊಸದಾರಿಯನ್ನು ಸೂಚಿಸುತ್ತಿವೆ. ಅಪಾರವಾಗಿರುವ ಹಳಗನ್ನಡವೂ ಇಲ್ಲಿ ಕಿಂಚಿತ್ತಾದರೂ ನೆರವು ನೀಡುವ ಸಾಧ್ಯತೆಯನ್ನು ಪರಾಮರ್ಶಿಸುವಂತಿದೆ.

ಆಂಗ್ಲರಿಂದ ಬಂದ ನೂತನ ನಾಗರಿಕತೆಯ ಈ ದಿನಗಳಲ್ಲಿ ವೈಜ್ಞಾನಿಕ ಶಬ್ದಗಳ ಕೊರತೆ ಅತಿಯಾದುದಕ್ಕೆ ಇಂದಿನ ನಮ್ಮ ನವ್ಯ ಕವಿಗಳ ಕೆಲ ಪದ್ಯ ಸಾಲುಗಳು ಒಳ್ಳೆಯ ನಿದರ್ಶನಗಳಾಗಿವೆ : ನವ್ಯ ಕವಿಗಳ ಕ್ಷಮೆ ಕೋರಿ ಈ ಪಂಕ್ತಿಗಳನ್ನು ಉದ್ಧರಿಸುವೆ :

೧. ಜೆಟ್ ವಿಮಾನು, ಹೆಲಿಕ್ಯಾಪ್ಟರ್, ಉಗಿಹಡಗ, ಬೋಟು, ಎಂ.ಎಸ್.ಎಂ. ರೈಲು, ಕಾರು, ಕೊನೆಗೆ ಎಸ್.ಟಿ. ಬಸ್ಸು (-ಕಣವಿ)
೨. ಬೇಡ ನಿನ್ನಯ ಸ್ಪಿಯರಿಂಗು ಚಿಂತೆ -
ಎಕ್ಸಲರೇಟರ್ ಪಾದ ಸಡಿಲಾಗದಂತೆ -(ಪಿ. ವೆಂಕಟರಮಣಾಚಾರ್ಯ)
೩. ಅದರೆಲ್ಲಾ ಅವಯವ ಹಾರ್ಡ್‌ಫ್ಯಾಕ್ಟುಗಳಿಂದಲೇ
ನೋಡಿದೆ ನೋಡಿದೆ ಮಾಯಕ್ರೋಸ್ಕೋಪಿಸಿ -(ಬಿ.ಎಚ್. ಶ್ರೀಧರ)

ಇತರರಿಗೆ ಮಾರ್ಗದರ್ಶನ ಮಾಡಬಲ್ಲ ಶಬ್ದ ಬ್ರಹ್ಮರೇ ಈ ಹಾದಿ ಹಿಡಿದರೆ ಇನ್ನಿತರ ಬಡಪಾಯಿಗಳ ಮಾತೇನು?

ಅಂತೂ ನವೀನ ನಾಗರಿಕತೆ ತಂದೊಟ್ಟುತ್ತಿರುವ ನೂತನ ವಸ್ತು, ವಿಚಾರ, ವಿಜ್ಞಾನ ವಿವರಗಳನ್ನು ಅಭ್ಯಸಿಸಿ, ಭವಿಸಿ, ಜೀರ್ಣಿಸಿಕೊಳ್ಳಲು ಯತ್ನಿಸಿದಲ್ಲಿ ಸರಿಯಾದ ದಾರಿ ದೊರೆಯದಿರದು. ಈ ದಿಶೆಯಲ್ಲಿ ಎಲ್ಲ ಕವಿಗಳು, ಪಂಡಿತರು, ವಿಜ್ಞಾನಿಗಳು, ಶಿಕ್ಷಣ ತಜ್ಞರು, ಪತ್ರಿಕೋದ್ಯಮಿಗಳು, ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸಾಹಿತ್ಯ ಪರಿಷತ್ತು ಮನಃಪೂರ್ವಕವಾಗಿ ದುಡಿಯದೆ ಗತ್ಯಂತರವಿಲ್ಲ.

ಕೊನೆಯ ಮಾತು : ಎರಡನೆಯ ಮಹಾಯುದ್ಧದ ನಂತರದ ಕಾಲಾವಧಿಯಲ್ಲಿ ಇಂಗ್ಲಿಷ್ ಶಬ್ದಭಂಡಾರಕ್ಕೆ ೧,೫೯,೦೦೦ ಹೊಸ ಪದ ಸೇರಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ. Indian words English ಎಂಬಂತಹ ನಿಘಂಟುಗಳೂ ಪ್ರಕಟವಾಗುತ್ತಿವೆ. ಆಂಗ್ಲ ಸತತೋದ್ಯೋಗಶೀಲತೆ ಮತ್ತು ಸಂಶೋಧನ ತಂತುಗಳು ನೂರರಲ್ಲೊಂದು ಪಾಲಾದರೂ ಕನ್ನಡದಲ್ಲಿ ಮಿಡಿದರೆ, ಕನ್ನಡ ನುಡಿ ಚಿನ್ನದ ನುಡಿಯಷ್ಟೇ ಅಲ್ಲ, ಕಿಡಿಯಾದೀತು, ಪ್ರಕಾಶವಾದೀತು, ಅಮೃತಬಿಂದುವಾದೀತು.

೧೦೧೧, ೧ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ೫೬೦ ೦೧೦

❑

೬

ಪಂಡಿತ ಮ.ಪ್ರ. ಪೂಜಾರ

ಬಿ.ಬಿ. ರಾಜಪುರೋಹಿತ

ಮಹಾದೇವ ಪ್ರಭಾಕರ ಪೂಜಾರ ಅವರು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ವ್ಯಾಕರಣದ ಪ್ರಕಾಂಡ ಪಂಡಿತರೆಂದು ಗಮನ ಸೆಳೆದ ಮಹತ್ತ್ವದ ವ್ಯಕ್ತಿ. ೬-೮-೧೮೮೪ರಂದು ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿ (ಈಗಿನ ಹಾವೇರಿ ಜಿಲ್ಲೆ) ಜನಿಸಿದ ಮಹಾದೇವ ಅವರು ಅಲ್ಲಿಯ ಈಶ್ವರ ದೇವಾಲಯದ ಪೂಜಾರರಾದ ಪ್ರಭಾಕರ ಶಾಸ್ತ್ರಿ ಅವರ ಮಗ. ಮನೆಯ ಆರ್ಥಿಕ ಪರಿಸ್ಥಿತಿ ಎಲ್ಲ ವೈದಿಕ ಬ್ರಾಹ್ಮಣರಂತೆ ಸಾಧಾರಣವಾಗಿಯೇ ಇತ್ತು. ಮಹಾದೇವ ಅವರು ಬಂಕಾಪುರ ಮತ್ತು ಗುಡಗೇರಿಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಧಾರವಾಡದ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ಮುಂದುವರಿಸಿದರು. ಪ್ರಾಥಮಿಕ ಶಾಲಾಶಿಕ್ಷಕರೆಂದು ನೇಮಕಗೊಂಡು ಶಿಕ್ಷಕ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿಗಾಗಿ ಬಂದಾಗ ಪೂಜಾರರ ವಿದ್ವತ್ತನ್ನೂ ವಿದ್ಯಾರ್ಜನಾಕಾಂಕ್ಷೆಯನ್ನೂ ಗಮನಿಸಿದ ಧಾರವಾಡದ ಹಿರಿಯರು ಆ ಗ ನ ಮೈಸೂರು ಸಂಸ್ಥಾನದ ಸರಕಾರ ನಡೆಸುತ್ತಿದ್ದ ಪಂಡಿತ ಪರೀಕ್ಷೆಗೆ ಅಭ್ಯಸಿಸಲು ಅವರನ್ನು ಮೈಸೂರಿಗೆ ಕಳಿಸಿದರು. ಪಂಡಿತ ಪರೀಕ್ಷೆಗಾಗಿ ಪಾಠಗಳು ಆಗ ನಾರ್ಮಲ್ ಸ್ಕೂಲಿನಲ್ಲಿ ನಡೆಯುತ್ತಿದ್ದವು. ಅಲ್ಲಿ ಖ್ಯಾತ ಸಂಸ್ಕೃತ ಮತ್ತು ಭಾರತೀಯ ತತ್ತ್ವಶಾಸ್ತ್ರ ಪಂಡಿತರಾದ ಎಂ. ಹಿರಿಯಣ್ಣ ಅವರು ಶಿಕ್ಷಕರಾಗಿದ್ದರು. (ಈ ವಿಷಯವನ್ನು ತಿಳಿಸಿದ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ ಅವರಿಗೆ ಕೃತಜ್ಞತೆಗಳು). ಅವರು ಪೂಜಾರರಿಗೂ ಶಿಕ್ಷಕರಾಗಿದ್ದರು. ಎಂ. ಹಿರಿಯಣ್ಣ ಅವರ ವಿದ್ವತ್ತನ್ನು ತುಂಬಾ ಗೌರವದಿಂದ ನೆನೆಯುತ್ತಿದ್ದು ಅವರ ಬಗ್ಗೆ ಗೌರವದಿಂದ ಹೇಳುವದನ್ನು ನಾನೇ ಪೂಜಾರ ಮಾಸ್ತರ ಬಾಯಿಂದ ಕೇಳಿದ್ದೇನೆ. ಅಲ್ಲಿಯೂ ಪೂಜಾರ ಅವರು ಪ್ರಥಮ ದರ್ಜೆಯಲ್ಲಿ ಪಂಡಿತ ಪರೀಕ್ಷೆಯನ್ನು ಪಾಸಾಗಿ ಉತ್ತರ ಕರ್ನಾಟಕಕ್ಕೆ ಕೀರ್ತಿಯನ್ನು ತಂದರು. ಮರಳಿ ಬಂದ ಮೇಲೂ ನಿಶ್ಚಿತವಾದ ಕೆಲಸವಿಲ್ಲದೇ ಅರೆಕಾಲ ಶಿಕ್ಷಕರಾಗಿ ಕೆಲಸ ಮಾಡಿ ಕೊನೆಗೆ ಧಾರವಾಡದ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಕನ್ನಡ ಪಂಡಿತರೆಂದು ನೇಮಕಗೊಂಡು ಅಲ್ಲಿ ಪೂರ್ಣಾವಧಿ ಸೇವೆ ಸಲ್ಲಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ನನ್ನ ತಂದೆಯವರಿಗೆ ಅದೇ ಸಂಸ್ಥೆಯಲ್ಲಿ ೧೯೩೦ರ ಸುಮಾರಿಗೆ ಅವರು ಅಧ್ಯಾಪಕರಾಗಿದ್ದರು. ಅವರು ಕಲಿಸಿದ ವ್ಯಾಕರಣ ಪಾಠಗಳಿಂದ ಪ್ರಭಾವಿತರಾದ ನನ್ನ ತಂದೆಯವರು ಅವರ ವ್ಯಾಕರಣ ವಿಚಾರಗಳನ್ನೆಲ್ಲ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ನನಗೆ ಧಾರೆಯೆರೆದರು. ಅದು ನನಗೆ ವ್ಯಾಕರಣದಲ್ಲಿ ಅಲುಗಾಡದಂಥ ಭದ್ರ ಬುನಾದಿಯನ್ನು ಹಾಕಿತು. ಕರ್ನಾಟಕ ಕಾಲೇಜಿನಲ್ಲಿ ಕನ್ನಡವನ್ನು ಪ್ರಧಾನ ವಿಷಯವಾಗಿ ಸಂಸ್ಕೃತವನ್ನು ಉಪಪ್ರಧಾನ ವಿಷಯವಾಗಿ ತೆಗೆದುಕೊಂಡು ಬಿ.ಎ. ಓದುತ್ತಿದ್ದಾಗ ಸ್ವಾಭಾವಿಕವಾಗಿ ಪೂಜಾರ ಮಾಸ್ತರರನ್ನು ಕಾಣಲು ಮತ್ತೆ ಮತ್ತೆ ಹೋಗುತ್ತಿದ್ದೆ. ಶಬ್ದಮಣಿದರ್ಪಣ ನಮಗೆ ಪಠ್ಯವಾಗಿದ್ದುದರಿಂದ ಅದರಲ್ಲಿಯ ಅನೇಕ ಸಂದೇಹಗಳನ್ನು ಅವರಿಂದ ನಿವಾರಿಸಿಕೊಳ್ಳುತ್ತಿದ್ದೆ. ೧೯೫೫ರಲ್ಲಿ ಪೂಜಾರ ಮಾಸ್ತರರೊಡನೆ ತೆಗೆಸಿಕೊಂಡ ಭಾವಚಿತ್ರವನ್ನು ಇಂದಿಗೂ ಜೋಪಾನವಾಗಿ ಇಟ್ಟುಕೊಂಡಿದ್ದೇನೆ.

ಪಂಡಿತ ಪೂಜಾರ ಅವರು ಕನ್ನಡ ಮತ್ತು ಸಂಸ್ಕೃತಗಳಲ್ಲಿ ಅಗಾಧ ಪಂಡಿತರು. ಅವರಿಗೆ ಇಂಗ್ಲೀಷೂ, ಬಂಗಾಲಿ ಮತ್ತು ಮರಾಠಿ ಭಾಷೆಗಳೂ ಗೊತ್ತಿದ್ದವು. ಅವರ ಪಾಂಡಿತ್ಯದ ಪ್ರಮುಖ ಲಕ್ಷಣವೆಂದರೆ, ಯಾವುದೇ ವಿಷಯವನ್ನು ಅಸಂದಿಗ್ಧ ರೀತಿಯಲ್ಲಿ ವಿವರಿಸುವದು. ತಮ್ಮ ವಿವರಣೆಗಳಿಗೆ ಆಧಾರವಾಗಿ ಅನೇಕ ಶಾಸ್ತ್ರಗಳನ್ನು ಉದ್ಧರಿಸಬಲ್ಲವರಾಗಿದ್ದರು. ಅದರಲ್ಲಿಯೂ ಕನ್ನಡದ ನಾಲ್ಕು ವ್ಯಾಕರಣಗಳಾದ ಶಬ್ದಸ್ಮೃತಿ, ಭಾಷಾಭೂಷಣ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನಗಳು ಅವರ ಅಂಗೈಯೊಳಗಿನ ನೆಲ್ಲಿಕಾಯಿಯಾಗಿದ್ದವು. ಅವರು ಅನೇಕ ಲೇಖನಗಳನ್ನೂ ಗ್ರಂಥಗಳನ್ನೂ ಬರೆದಿದ್ದಾರೆ. ಅವರ ನಿಖರವಾದ ಮತ್ತು ಅಸಂದಿಗ್ಧವಾದ ಬರವಣಿಗೆ ನನ್ನ ವ್ಯಾಕರಣ ವಿಚಾರದ ಮತ್ತು ಇತರ ಬರವಣಿಗೆಯ ಮೇಲೆ ಗಾಢವಾದ ಪ್ರಭಾವ ಬೀರಿದೆ.

೧೯೭೫ರ ಅಗಸ್ಟ ತಿಂಗಳ ಮೊದಲ ವಾರದಲ್ಲಿ ಡಾ. ಶ್ರೀನಿವಾಸ ಹಾವನೂರ ಅವರು ಕನ್ನಡ ಪ್ರಭ

ಪತ್ರಿಕೆಯಲ್ಲಿ 'ಹಿಂದಿನ ತಲೆಮಾರಿನ ಶ್ರೇಷ್ಠ ವಿದ್ವಾಂಸ: ಮ.ಪ್ರ. ಪೂಜಾರರು' ಎಂಬ ಒಂದು ಒಳ್ಳೆಯ ಲೇಖನ ಪ್ರಕಟಿಸಿದ್ದರು. ಪೂಜಾರರ ಎಲ್ಲ ಲೇಖನಗಳ ಮತ್ತು ಗ್ರಂಥಗಳ ಸೂಚಿಯನ್ನೂ ತಯಾರಿಸಿದ್ದರು. ನಂತರ ಇಸ್ವಿ ೨೦೦೦ದಲ್ಲಿ ಅವರೇ ಸಂಪಾದಿಸಿದ 'ಹಳಗನ್ನಡ ಕವಿ ಕಾವ್ಯ ಮಹೋನ್ನತಿ (ಪಂಡಿತ ಮ. ಪ್ರ. ಪೂಜಾರರ ಆಯ್ದ ಲೇಖನಗಳು) ಎಂಬ ಗ್ರಂಥವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿತು. ಅವರೆ ಕನ್ನಡ ನಾಡು ಪೂಜಾರರಂಥ ವಿದ್ವಾಂಸರಿಗೆ ಸಲ್ಲಿಸಿದ ಕೃತಜ್ಞತೆ. ಮನ್ನಣೆ ಏನೂ ಸಾಲದು ಎಂಬ ಕೊರಗು ಹಾವನೂರರಂತೆ ನಮ್ಮೆಲ್ಲರಿಗೂ ಇದೆ.

ಪೂಜಾರ ಮಾಸ್ತರ ಬರವಣಿಗೆಯಲ್ಲಿ ಮೂರು ಬಗೆಗಳನ್ನು ಗುರುತಿಸಬಹುದು: ೧. ವ್ಯಾಕರಣ ೨. ಶಾಸ್ತ್ರ ವಿಚಾರ ೩. ಸಾಹಿತ್ಯಿಕ.

ವ್ಯಾಕರಣದಲ್ಲಿ ಅವರ ನುಡಿಗನ್ನಡಿ ಭಾಗ: ೧. ೨. ೩ ಅನೇಕ ವರ್ಷಗಳ ಕಾಲ ಉತ್ತರ ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ ಪಠ್ಯ ಪುಸ್ತಕವಾಗಿತ್ತು. ಪ್ರಾರಂಭಿಕ ವರ್ಗಕ್ಕಾಗಿ ಭಾಗ ೧ ಮತ್ತು ೨ನ್ನು ರಚಿಸಿದರು. ೭ನೆಯ ವರ್ಗಕ್ಕಾಗಿ ಭಾಗ ೩ನ್ನು ರಚಿಸಿದ್ದರು. ಮುಂದೆ ಕನ್ನಡ ನುಡಿಗನ್ನಡಿ ಮತ್ತು ಛಂದೋ ಮಂಜರಿ ಸುಮಾರು ೧೯೫೪ರ ವರೆಗೂ ಪಠ್ಯಪುಸ್ತಕವಾಗಿತ್ತು. ಕೇಶಿರಾಜ, ಭಟ್ಟಾಕಳಂಕರು ಹೇಳಿದ ವ್ಯಾಕರಣ ವಿಚಾರಗಳನ್ನೇ ಆಧರಿಸಿ ಸುಲಭ ಕನ್ನಡದಲ್ಲಿ ವ್ಯಾಕರಣ ರಚಿಸಿದ್ದರು.

೧೯೫೨ರಲ್ಲಿ ಪ್ರಕಟವಾದ ಕೆಲವು ಕನ್ನಡ ವ್ಯಾಕರಣ ವಿಚಾರಗಳು ಎಂಬ ಗ್ರಂಥ ಧಾರವಾಡದ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್(ಈಗ ಇದು ಕರ್ನಾಟಕ ವಿಶ್ವವಿದ್ಯಾಲಯದ ಅಂಗ-ಸಂಸ್ಥೆ.)ನಲ್ಲಿ ಅವರು ಕೊಟ್ಟ ಭಾಷಣಗಳು. ಅದರಲ್ಲಿ ದರ್ಪಣ ಶಾಸನಗಳನ್ನು ಅಧಿಕರಿಸಿ ಅನೇಕ ವಿಷಯಗಳನ್ನು ವಿವರಿಸಿದ್ದಾರೆ. ಅಲ್ಲಿ ಕೇಶಿರಾಜ ಮತ್ತು ಭಟ್ಟಾಕಳಂಕರು ಮಾಡಿದ ತಪ್ಪುಗಳನ್ನೂ ಎತ್ತಿ ತೋರಿಸಿದ್ದಾರೆ. ಅಲ್ಲದೇ ಅನೇಕ ಹೊಸ ವಿಷಯಗಳತ್ತ ವಿದ್ವಾಂಸರ ಗಮನ ಸೆಳೆದಿದ್ದಾರೆ. ಉದಾಹರಣೆಗೆ, ಋಗ್ವೇದದ ಪ್ರಥಮ ಋಚೆಯಲ್ಲಿ ಟಿ ಕಾರವು (ಅಗ್ನಿಮೀಟೆ ಪುರೋಹಿತಂ) ಕಂಡುಬರುವಂತೆ ಋಗ್ವೇದ ಪ್ರಾತಿಶಾಖ್ಯದಲ್ಲಿ ಙ ಕಾರವಿತ್ತೆಂದು ಕೆಲವರು ಅನ್ನುತ್ತಾರೆಂದು ಹೇಳುತ್ತಾರೆ.

ಇಂದಿನ ಭಾಷಾಶಾಸ್ತ್ರಜ್ಞರು ಹೇಳುವಂತೆ ಅ ಕಾರದ ಎರಡು ಉಚ್ಚಾರಗಳನ್ನು ಪೂಜಾರರು ಗುರುತಿಸಿದ್ದಾರೆ. 'ಶಬ್ದಗಳ ಕೊನೆಯಲ್ಲಿ ಅ ಕಾರದ ಉಚ್ಚಾರ ವಿಸ್ತೃತವಾಗಿರುತ್ತದೆ; ಶಬ್ದಮಧ್ಯದಲ್ಲಿ ಅ ಕಾರದ ಉಚ್ಚರಣೆ ಸಂಕುಚಿತವಾಗಿರುತ್ತದೆ.' ಎಂದು ಹೇಳಿದ್ದಾರೆ. ಬಂದ, ಹೋದ ಶಬ್ದಗಳಲ್ಲಿಯ ಅಂತ್ಯ ಅ ಕಾರ ಇತರ ಕಡೆಗಳಲ್ಲಿ ಬರುವ ಅ ಕಾರಕ್ಕಿಂತ ವಿಸ್ತೃತವಾಗಿದೆ ಎಂದು ಉದಾಹರಿಸುತ್ತಾರೆ. ಹೀಗೆ ಕನ್ನಡದ ಉಚ್ಚಾರದಲ್ಲಿ ಅನೇಕ ಸಂಶೋಧನೆಗಳಾಗಬೇಕಿದೆ ಎಂದು ಅನೇಕ ವಿಷಯಗಳನ್ನು ಟಿಪ್ಪಣಿಸುತ್ತಾರೆ. ಗಮಕ ಸಮಾಸದ ಬಗ್ಗೆ, ಕೃದಂತ ವಿಶೇಷಣಗಳ ಬಗ್ಗೆ ವಿಶೇಷ ಬೆಳಕು ಚೆಲ್ಲುತ್ತಾರೆ. ಅಂಶಿ ಸಮಾಸದ ಬಗ್ಗೆ ಕೇಶಿರಾಜನ ತಪ್ಪು ತಿಳುವಳಿಕೆಯನ್ನು ಭಟ್ಟಾಕಳಂಕನು ಸರಿಪಡಿಸಿದುದನ್ನು ವಿವರಿಸುತ್ತಾರೆ. ಬಹುವ್ರೀಹಿ ಸಮಾಸವನ್ನು ಕನ್ನಡಕ್ಕೆ ಹೇಳುವದು ಬೇಕೇ? ಎಂದು ಪ್ರಶ್ನಿಸುತ್ತಾರೆ. ಬಹುವ್ರೀಹಿ ಸಮಾಸಗಳು ಬಹಳಷ್ಟು ಕಡೆಗಳಲ್ಲಿ ತದ್ಧಿತಾಂತಗಳಂತೆ ವರ್ತಿಸುತ್ತವೆಯಾದ್ದರಿಂದ ಬಹುವ್ರೀಹಿ ಸಮಾಸವನ್ನು ಬಿಟ್ಟರೂ ಕನ್ನಡಕ್ಕೆ ನಷ್ಟವಿಲ್ಲವೆನ್ನುತ್ತಾರೆ. ರಾಮನಂತೆ ಮೊದಲಾದ ತದ್ಧಿತಾಂತಾವ್ಯಯ ಪ್ರಯೋಗಗಳು ಒಂದೇ ಪದದಂತೆ ಪ್ರಯೋಗವಾಗುವದರಿಂದ ಇವುಗಳನ್ನು ಸಮಾಸದಂತೆ ಗ್ರಹಿಸಿ ಇವುಗಳಿಗೊಂದು ಹೊಸ ಸಮಾಸದ ಹೆಸರನ್ನು ರಚಿಸಬೇಕು ಎನ್ನುತ್ತಾರೆ. ಪ್ರಯೋಗಗಳಲ್ಲಿ ಕರ್ತರಿ ಮತ್ತು ಕರ್ಮಣಿ ಪ್ರಯೋಗಗಳ ಸೂಕ್ಷ್ಮ ಲಕ್ಷಣಗಳನ್ನು ವಿವರಿಸಿ 'ಎಲ್ಲರಿಗೂ ಈಸಲು ಬರಬೇಕು', 'ಕಾರ್ಯದರ್ಶಿಯಿಂದ ಮಂತ್ರಿಗಳ ಭಾಷಣವನ್ನು ಓದಲಾಯಿತು', 'ಇಲ್ಲಿ ರಾಮಾಯಣದ ಕಥೆಯನ್ನೇ ಸಂಕ್ಷೇಪವಾಗಿ ಕೊಟ್ಟಿದೆ.' ಮೊದಲಾದ ಹೊಸ ರೀತಿಯ ಕರ್ತರಿ ಪ್ರಯೋಗಗಳನ್ನು ಗುರುತಿಸಬೇಕು ಎನ್ನುತ್ತಾರೆ. ವ್ಯಾಕರಣದ ತಿಳುವಳಿಕೆಯಲ್ಲಿ ಹೊಸ ಸಂವೇದನೆಯನ್ನು ಹುಟ್ಟಿಸಬಲ್ಲ ಈ ಪುಟ್ಟ ಗ್ರಂಥದ ಮೇಲೆ ಆಧುನಿಕ ವೈಯಾಕರಣರು ಬೆಳಕು ಚೆಲ್ಲಬೇಕಾದ ಅವಶ್ಯಕತೆ ಇದೆ.

೧೯೪೧ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಶಬ್ದಾನುಶಾಸನ ಪ್ರಕಾಶಿಕೆಯ ಪ್ರಕಟನೆಯನ್ನು ಕೈಗೆತ್ತಿಕೊಂಡಾಗ ಕುಂಡಲಿಗಿರಿಯಾಚಾರ್ಯರು ಬರೆದ ಹಸ್ತಪ್ರತಿಯಲ್ಲಿ ಕೊನೆಯ ೧೯೯ ಸೂತ್ರಗಳ ವೃತ್ತಿ, ಟೀಕು ಮೊದಲಾದವುಗಳು ಖಿಲವಾಗಿ ಹೋಗಿದ್ದುದರಿಂದ ಅದನ್ನು ಬರೆದು ಪೂರೈಸಲು ಪೂಜಾರರನ್ನು ವಿನಂತಿಸಲಾಯಿತು. ಅವರು ಆ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಅದೊಂದೇ

ಕೃತಿ ಪೂಜಾರರ ವಿದ್ವತ್ತಿನ ಪರಿಚಯ ಮಾಡಿಕೊಡಲು ಸಮರ್ಥವಾಗಿದೆ. ಶಬ್ದಾನುಶಾಸನದ ಕೊನೆಯ ಭಾಗದ ಅಂದರೆ ೪೭೪ನೆಯ ಸೂತ್ರದಿಂದ ೫೯೨ನೆಯ ಸೂತ್ರದ ವರೆಗಿನ ಸೂತ್ರಗಳಿಗೆ ವೃತ್ತಿ ಬರೆದುದು ಕನ್ನಡ ವ್ಯಾಕರಣಕ್ಕೆ ಅವರ ಪ್ರಮುಖ ಕೊಡುಗೆ. ಕುಂಡಲಿಗಿರಿಯಾಚಾರ್ಯರ ಪಾಂಡಿತ್ಯ ಪೂರ್ಣವಾದ ವೃತ್ತಿಯ ರೀತಿಯಲ್ಲೇ ಬರೆದುದು ಕನ್ನಡಕ್ಕೊಂದು ಅಪೂರ್ವ ಕಾಣಿಕೆಯಾಗಿದೆ.

ಪೂಜಾರರ ಶಾಸ್ತ್ರವಿಚಾರದ ಬರಹಗಳಲ್ಲಿ ಜೈನ ಧರ್ಮ ಪರಿಭಾಷೆ, ಮತ್ತು ಜೈನ ಪದ್ಮಪುರಾಣ ಸಾರ ಎಂಬವು ಬಹಳ ಮಹತ್ತ್ವದ ಗ್ರಂಥಗಳು. ಜೈನ ಧರ್ಮದ ತಿರುಳನ್ನೇ ಸಂಗ್ರಹಿಸಿ ಕೊಡುವ ಮೊದಲಿನ ಗ್ರಂಥವು ಅವರಿಗೆ ಅಪಾರ ಗೌರವವನ್ನು ತಂದುಕೊಟ್ಟಿತು. ಶಾಸ್ತ್ರವಿಚಾರಗಳಲ್ಲದೇ ಭಾರತೀಯ ವಿದುಷಿಯರು, ಸತ್ಕಥಾಲಾಪ, ಸದ್ಗುಣಾದರ್ಶ, ಹಜರತ ಮಹಮ್ಮದ ಪೈಗಂಬರರು ಮೊದಲಾದ ೮-೧೦ ಲಘು ಓದಿನ ಆದರೆ ಸದ್ಭಾವದ ನೀತಿಬೋಧಕ ಪುಸ್ತಕಗಳನ್ನೂ ರಚಿಸಿದ್ದಾರೆ. ಹೀಗೆ ಒಟ್ಟು ೨೩ ಪುಸ್ತಕಗಳನ್ನು ರಚಿಸಿದ್ದರಲ್ಲದೇ ಅನೇಕ ಪತ್ರಿಕೆಗಳಲ್ಲಿ ೬೩ ಲೇಖನಗಳನ್ನು ಪ್ರಕಟಿಸಿದ್ದರು. ಸತತ ಬರಹ, ಚಿಂತನ, ಬೋಧನಗಳಲ್ಲಿ ತೊಡಗಿದ್ದ ಇಂಥ ಪ್ರಭಾವಶಾಲಿ ಲೇಖಕರ ವೈಯಕ್ತಿಕ ಜೀವನ ಮಾತ್ರ ಬಹು ದಾರುಣವಾಗಿತ್ತು.

'ಅಂತಃಪಟದಾಚೆ ವಿಧಿ ತಂದ ವಧು ನೀನು, ಮಾಲೆಯನು ಸಾವರಿಸಿ ನಿಂತಿದ್ದೀಯೆ!' ಎಂದು ಬೇಂದ್ರೆಯವರು ಸಖೀಗೀತದಲ್ಲಿ ಹಾಡಿದಂತೆ ಮದುವೆಯ ಅಕ್ಷತೆ ಬೀಳುವವರೆಗೆ ಕನ್ಯೆಯನ್ನು ನೋಡದೆ ಇರುವ ಆ ಕಾಲದ ವರನಂತೆ ಪೂಜಾರರೂ ಕನ್ಯೆಯನ್ನು ಮೊದಲು ನೋಡಿರಲಿಲ್ಲ. ಅಕ್ಷತೆ ಬಿದ್ದ ಮೇಲೆ ಕನ್ಯೆ ಹುಚ್ಚಿ ಎಂಬುದು ಗೊತ್ತಾಯಿತು. ಅವರ ಮಾವ ಬಂದು ಪೂಜಾರರ ಮುಂದೆ ಕೈಜೋಡಿಸಿ ನಿಂತು 'ನನ್ನ ಮಗಳು ಹುಚ್ಚಿ. ಅವಳನ್ನು ಮದುವೆಯಾಗಿ ಕನ್ಯಾ ಸೆರೆ ಬಿಡಿಸಿ ಪುಣ್ಯ ಕಟ್ಟಿಕೊಂಡಿದ್ದೀರಿ. ನಿಮಗೆ ಎಷ್ಟು ದಿನ ಸಂಸಾರ ಮಾಡಲು ಸಾಧ್ಯವಾಗುತ್ತದೆಯೋ ಅಷ್ಟು ದಿನ ಮಾಡಿ ಬೇಸರವಾದಾಗ ಆಕೆಯನ್ನು ತವರು ಮನೆಗೆ ಕಳಿಸಿ ಬಿಡಿರಿ.' ಎಂದರಂತೆ. ಅದಕ್ಕೆ ಪೂಜಾರರು 'ಆಕೆ ಹುಚ್ಚಿಯಲ್ಲ. ಮಂದಬುದ್ಧಿಯವಳು. ಏನೇ ಆಗಲಿ, ವಿಧ್ಯುಕ್ತವಾಗಿ ಕೈಹಿಡಿದಿದ್ದೇನೆ. ಪರಿತ್ಯಜಿಸಿದರೆ ಅನ್ಯಾಯವಾಗಿ ಒಂದು ಜೀವವನ್ನು ಹಾಳು ಮಾಡಿದಂತಾಗುತ್ತದೆ. ಆ ಪಾಪಕ್ಕೆ ನಾನು ಗುರಿಯಾಗಲಾರೆ.' ಎಂದು ಎಲ್ಲ ಕಷ್ಟಗಳನ್ನು ಎದುರಿಸಿಕೊಂಡು ನಡೆದರು. ನಾನು ಅವರ ಮನೆಗೆ ಹೋಗುತ್ತಿದ್ದಾಗ ಅವರ ಹಿರಿಯ ಮಗಳು ಹುಚ್ಚಿ ಎಂದು ಗಂಡನಿಂದ ತ್ಯಜಿಸಲ್ಪಟ್ಟಿದ್ದಳು. ಬಂಡಿ ಎಂಬ ಎರಡನೆಯ ಮಗನೂ ಹುಚ್ಚ. ಆಮೇಲಿನ ಹಣಮಂತ ಚೆನ್ನಾಗಿದ್ದ. ಆಗ ಅವನು ಜೆ.ಎಸ್.ಎಸ್. ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕನಾಗಿ ಅದೇ ತಾನೆ ಕೆಲಸಕ್ಕೆ ಸೇರಿದ್ದ. ಕೊನೆಯ ಮಗನೂ ಅರೆಹುಚ್ಚ. ಇತರರಿಗೆ ತೊಂದರೆ ಕೊಡಬಾರದೆಂದು ಮಾಸ್ತರು ಅವನನ್ನು ಯಾವಾಗಲೂ ಜೊತೆಗೆ ಕರೆದುಕೊಂಡು ಅಡ್ಡಾಡುತ್ತಿದ್ದರು. ಅವರೊಡನೆ ಅನೇಕ ಸಲ ನಾನೂ ಅಡ್ಡಾಡಲು ಹೋಗುತ್ತಿದ್ದೆ. ಒಮ್ಮೆ ಆ ಹುಡುಗ ನನ್ನ ಕೆನ್ನೆಗೆ ಜೋರಾಗಿ ಹೊಡೆದುದು ನೆನಪಿದೆ. ಮಾಸ್ತರು ಮೂಕವಾಗಿ ಒಳಗೇ ನೊಂದುಕೊಂಡರು.

ಜೀವನವನ್ನು ಎದುರಿಸುವ ಪೂಜಾರ ಮಾಸ್ತರ ಸ್ಥೈರ್ಯ ಅಸಾಧಾರಣವಾಗಿತ್ತು. ಅವರ ದಿನಚರಿಯೂ ಅದಕ್ಕನುಗುಣವಾಗಿಯೇ ಇತ್ತು. ದಿನಾಲು ನಸುಕಿನಲ್ಲಿ ಎದ್ದು ಚಹ ಮಾಡುವದು, ಸ್ನಾನಕ್ಕೆ ನೀರು ಕಾಯಿಸುವದರಿಂದ ಹಿಡಿದು ಅಡಿಗೆ ಮಾಡುವ ವರೆಗೆ ಎಲ್ಲ ಕೆಲಸವನ್ನು ಮುಗಿಸಿ ಎಲ್ಲರಿಗೂ ಊಟಕ್ಕೆ ಹಾಕಿ ತಾವೂ ಉಂಡು ೧೦-೩೦ ಘಂಟೆಗೆ ಕಾಲೇಜಿಗೆ ಹೋಗುತ್ತಿದ್ದರು. ಸಂಜೆ ೫-೩೦ ಗಂಟೆಗೆ ಮನೆಗೆ ಬಂದ ಮೇಲೆ ಮತ್ತೆ ಎಲ್ಲರ ಚಹ, ಅಲ್ಪೋಪಹಾರ ಮುಗಿಸಿ ನೀರಿನ ಕಾರ್ಯಕ್ರಮ ಪ್ರಾರಂಭ ಮಾಡುವರು. ಅವರ ಮನೆಯಲ್ಲಿ ಈಗಿನಂತೆ ನಲ್ಲಿ ಇರಲಿಲ್ಲ. ಹಿತ್ತಿಲಲ್ಲಿ ತಿರುಗಣಿ ರಾಟೆಯ ಭಾವಿ. ಹೆಂಡತಿ ಮಕ್ಕಳನ್ನೊಳಗೊಂಡು ಗಿಡಬಳ್ಳಿಗಳಿಗೆ ನೀರು ಹಾಕುವದು ಹಾಗೂ ಮನೆಗೆ ನೀರು ತುಂಬಿಸುವದು. ಸಂಜೆಗೆ ಮತ್ತೆ ಬೇಸರವಿಲ್ಲದೆ ಬಿಸಿ ಅಡಿಗೆ ಮಾಡಿ ಹಾಕುವದು. ಮಲಗುವಾಗ ರಾತ್ರಿ ಹತ್ತು ಗಂಟೆಯಾಗುತ್ತಿತ್ತು. ಹೆಂಡತಿ ಮಕ್ಕಳು ಹುಚ್ಚರೆಂದು ಬೈಯುವದು, ಸಿಟ್ಟಿಗೇಳುವದು ಎಂದೂ ಮಾಡುತ್ತಿರಲಿಲ್ಲ. ದಿನಾಲು ಅವರಿಗೆ ಬಿಸ್ಕೀಟು ಪೆಪ್ಪರಮಿಂಟು ಮುಂತಾದುವನ್ನು ತಿನ್ನಲು ತರುತ್ತಿದ್ದರು. ಇಷ್ಟೆಲ್ಲ ಕಷ್ಟಗಳ ನಡುವೆ ಓದು, ಬರಹ ಮಾಡುತ್ತಿದ್ದರು. ಜೀವನದ ಕಷ್ಟಗಳನ್ನು ಮರೆಯಲೆಂದೇ ಓದು ಬರಹದ ಬಲವಾದ ಹವ್ಯಾಸವನ್ನು ಇರಿಸಿಕೊಂಡಿದ್ದರೆಂದೆನಿಸುತ್ತದೆ. ಅವರ ಬರಹಗಳಲ್ಲಿ ಕಾಣುವ ಖಚಿತತೆ ಎಲ್ಲ ಆಕರ ಗ್ರಂಥಗಳ ಸಮಗ್ರ ಓದಿನಿಂದ ಬಂದಿತ್ತು.

ನಾನು ಧಾರವಾಡದ ಸಾಧನಕೇರಿಯಲ್ಲಿ ಮನೆ ಮಾಡಿಕೊಂಡಿದ್ದಾಗ ಒಂದು ದಿನ ಬೇಂದ್ರೆಯವರು ನಮ್ಮ ಮನೆಗೆ ಬಂದು 'ಮೊನ್ನೆ (ಅಂದರೆ ೫-೧-೧೯೬೭ರಂದು) ಮ. ಪ್ರ. ಪೂಜಾರರು ವಿಧಿವಶರಾದರಂತೆ' ಎಂದು ತಿಳಿಸಿದರು. ತುಂಬಾ ದುಃಖವಾಯಿತು. ಕೂಡಲೇ ಹಣಮಂತ ತಿಳಿಸಿದ್ದರೆ ಹೋಗಿ ಗುರುಗಳ ಶವದರ್ಶನವನ್ನಾದರೂ ಮಾಡಿಕೊಂಡು ಬರಬಹುದಾಗಿತ್ತು. ಆದರೆ ಅವನೊಡನೆ ಬಹುದಿನಗಳಲ್ಲಿ ಸಂಪರ್ಕವಿರಲಿಲ್ಲವಾದ್ದರಿಂದ ಅವನು ತಿಳಿಸಲಿಲ್ಲ. ಇದ್ದಲ್ಲಿಂದಲೇ ಕೈಮುಗಿದೆ.

೭೧೬, ೧೬ನೇ ಮುಖ್ಯರಸ್ತೆ, ಸರಸ್ವತಿಪುರ, ಮೈಸೂರು ೫೭೦ ೦೦೯

❑

೭

ಕುಡ್ಪಿಯವರ ಒಂದಾಣೆ ಮಾಲೆ

ಮುರಳೀಧರ ಉಪಾಧ್ಯ ಹಿರಿಯಡಕ

ಕುಡ್ಪಿ ವಾಸುದೇವ ಶೆಣೈ (೧೯೦೭-೧೯೭೭) ಅವರ ಶತಮಾನೋತ್ಸವ ಸಂದರ್ಭದಲ್ಲಿ ಅವರ 'ಒಂದಾಣೆ ಮಾಲೆ'ಯನ್ನು ನೆನಪಿಸಿಕೊಳ್ಳಬೇಕು. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಎಂ.ಎನ್. ಕಾಮತರ ಶಿಷ್ಯನಾಗಿದ್ದ ಕುಡ್ಪಿ, ಕಾಮತರಿಂದ ಹಾಸ್ಯ ಸಾಹಿತ್ಯ ರಚನೆಗೆ ಪ್ರೇರಣೆ ಪಡೆದರು. ಆರ್ಥಿಕ ಸಮಸ್ಯೆಯಿಂದಾಗಿ ವಿದ್ಯಾಭ್ಯಾಸ ಮುಂದುವರಿಸಲಾಗದೆ ಅವರು 'ರಾಷ್ಟ್ರಬಂಧು' 'ಸ್ವದೇಶಾಭಿಮಾನಿ'ಗಳಲ್ಲಿ ಉಪ-ಸಂಪಾದಕರಾಗಿ ಕೆಲಸ ಮಾಡಿದರು. ೧೯೩೫ರಲ್ಲಿ ತನ್ನ ಇಪ್ಪತ್ತೆಂಟರ ವಯಸ್ಸಿನಲ್ಲಿ 'ಪ್ರಭಾತ' ವಾರಪತ್ರಿಕೆಯನ್ನು ಆರಂಭಿಸಿ ನಾಲ್ಕು ದಶಕಗಳ ಕಾಲ ಅದನ್ನು ಮುನ್ನಡೆಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಅವರು ದ.ಕ. ಜಿಲ್ಲಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸಣ್ಣಕತೆ, ನಾಟಕ, ಮಕ್ಕಳ ಸಾಹಿತ್ಯ - ಹೀಗೆ ವಿವಿಧ ಪ್ರಕಾರಗಳಲ್ಲಿ ಕುಡ್ಪಿಯವರು ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ೧೯೬೦ರ ಮಣಿಪಾಲ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕುಡ್ಪಿಯವರು ಬರೆದು ನಿರ್ದೇಶಿಸಿದ ನಾಟಕ - 'ಸಂನ್ಯಾಸಿಯ ಗೊಂಗಡಿ'!

ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಇತ್ತೀಚೆಗೆ 'ಕರಾವಳಿಯ ಕತೆಗಳು' (ಸಂ. ಡಾ. ಸಬಿಹಾ ಭೂಮಿಗೌಡ), 'ಕರಾವಳಿಯ ಪ್ರಬಂಧಗಳು' (ಸಂ. ಡಾ. ಕೆ. ಚಿನ್ನಪ್ಪಗೌಡ, ಡಾ. ಬಿ. ಜನಾರ್ದನ ಭಟ್) ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದೆ. ಕುಡ್ಪಿಯವರ ಮೂರು ಕತೆಗಳು, ಎರಡು ಪ್ರಬಂಧಗಳು ಈ ಸಂಕಲನಗಳಲ್ಲಿ ಲಭ್ಯವಿವೆ.

ಕುಡ್ಪಿಯವರು ಒಂದಾಣೆ ಮಾಲೆ ಪುಸ್ತಕ ಪ್ರಕಾಶನವನ್ನು ೧೯೫೪ರಲ್ಲಿ ಆರಂಭಿಸಿ, ವಾರಕ್ಕೊಂದರಂತೆ ೩೪೮ ಪುಸ್ತಕಗಳನ್ನು ಪ್ರಕಟಿಸಿದರು. ಬೆಲೆ ಒಂದಾಣೆ ಅಥವಾ ಆರು ಪೈಸೆ ! ಕರಾವಳಿಯ ಎಲ್ಲ ಊರುಗಳ ಪತ್ರಿಕೆ ಮಾರುವ ಅಂಗಡಿಗಳಲ್ಲಿ ಈ ಪುಸ್ತಕಗಳು ಮಾರಾಟವಾಗುತ್ತಿದ್ದುವು..

ರಾಷ್ಟ್ರಕವಿ ಎಂ. ಗೋವಿಂದ ಪೈಗಳ 'ಭಕ್ತವಾಣಿ' ಎಂಬ ನುಡಿಮುತ್ತುಗಳ ಸಂಕಲನ ಒಂದಾಣೆ ಮಾಲೆಯಲ್ಲಿ ಪ್ರಕಟವಾಗಿದೆ. ಎಂ.ಎನ್. ಕಾಮತ್, ಬಿ. ದಾಮೋದರ ಬಾಳಿಗ, ರಸಿಕ ಪುತ್ತಿಗೆ, ಬಿ. ಪದ್ಮನಾಭ ಸೋಮಯಾಜಿ, ಕೆ.ಎಸ್. ಪದ್ಮನಾಭಾಚಾರ್ಯ, ವಿಚಿತ್ರ ಯೇತಡ್ಕ, 'ಅಂಬಾತನಯ', ಎಸ್. ತಿರುಮಲೇಶ್ವರಭಟ್, ಡಿ. ಮಹಾಲಿಂಗ ಭಟ್, ಕುಂಬಳೆ ಎಡನಾಡಿನ ಎಂ. ಗೋಪಾಲಕೃಷ್ಣಭಟ್, ಎ.ಪಿ. ಮಯ್ಯ, ತದ್ದಲಸೆ ವಿಘ್ನೇಶ್ವರ ಶರ್ಮ ಇವರ ನಾಟಕಗಳು ಒಂದಾಣೆ ಮಾಲೆಯಲ್ಲಿ ಪ್ರಕಟಗೊಂಡು ಹಳ್ಳಿಯ ಶಾಲೆಗಳನ್ನು ತಲುಪಿದುವು. ಹದಿನೆಂಟರ ತಾರುಣ್ಯದಲ್ಲಿ ತೀರಿಕೊಂಡ ಕುಡ್ಪಿ ಚಂದ್ರಕಾಂತ ಶೆಣೈ (ಕುಡ್ಪಿಯವರ ಹಿರಿಯ ಮಗ) ಅವರ 'ದೀಪಾವಳಿ' ಒಂದಾಣೆ ಮಾಲೆಯಲ್ಲಿದೆ.

ಎಂ.ಎನ್. ಕಾಮತರ 'ಬೀಡಿ ಸೇದಬೇಡಿ', 'ಆ ಮಗು', 'ಕರಿನಾಯಿ', 'ಮುಪ್ಪು' ಕತೆಗಳು, ವೈದ್ಯಗುರು

ಎಂ.ಆರ್. ಭಟ್ ಅವರ ಕತೆಗಳು, ಚಕ್ರವರ್ತಿ ರಾಜಗೋಪಾಲಾಚಾರಿ ಅವರ 'ನಿರಪರಾಧಿ' ಕತೆ, ಬಿ.ಎಸ್. ರತ್ನಮ್ಮನವರ 'ಕಾಲು ಬಳೆಯ ಕತೆ' ಒಂದಾಣೆ ಮಾಲೆಯಲ್ಲಿ ಗಮನ ಸೆಳೆಯುತ್ತವೆ.

'ಭಟ್ಕಳ ಅಪ್ಪಯ್ಯ ಸಮರ್ಥರ ಕೀರ್ತನೆಗಳು' ಒಂದಾಣೆ ಮಾಲೆಯಲ್ಲಿದೆ. ಈ ಮಾಲೆಯಲ್ಲಿ ಕಬೀರರ ವಚನಗಳು, ಸಂತ ಜ್ಞಾನೇಶ್ವರ, ಜ್ಞಾನೇಶ್ವರಿ - ಇಂಥ ಕೃತಿಗಳನ್ನು ಬರೆದ 'ಸಂತಶರಣ' ಯಾರು? ಜಯದೇವ, ಕಾಳಿದಾಸ, ಭರ್ತೃಹರಿ-ಇವರ ಸಂಸ್ಕೃತ ಕಾವ್ಯಗಳ ಗದ್ಯಾನುವಾದಗಳು, 'ತಿರುಕ್ಕುರಳ್' ಪರಿಚಯ ಹಾಗೂ ಹಲವು ಧಾರ್ಮಿಕ ಕೃತಿಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ.

ಜಿ.ಆರ್. ಪಾಂಡೇಶ್ವರ, ಅಡೂರು ಬಳಕು ವಿಷ್ಣಯ್ಯ, ಮೈರ್ಪಾಡಿ ವೆಂಕಟರಮಣಯ್ಯ, ಉಳ್ಳೂರು ತಮ್ಮಯ್ಯ, ಪಾಟಾಳಿ ಮತ್ತಿತರರ ಹಲವು ಯಕ್ಷಗಾನ ಪ್ರಸಂಗಗಳು ಒಂದಾಣೆ ಮಾಲೆಯಲ್ಲಿವೆ. ತದ್ದಲದೆ ವಿಘ್ನೇಶ್ವರ ಶರ್ಮರ 'ಯಕ್ಷಗಾನ ಕಲಾವಿದರು', ಕಡತೋಕ ಮಂಜುನಾಥ ಭಾಗವತರ 'ದ.ಕ. ಯಕ್ಷಗಾನ ಮಂಡಳಿಗಳು' - ಗಮನಾರ್ಹ ಕೃತಿಗಳು. ನಾರಾಯಣ ಶೆಟ್ಟಿ ಅವರ 'ಗೋವಾ ದುರಂತ', ಮಸಿಲ ಶಿವಶಂಕರ ಪುಣಚ ಅವರ 'ಜಾಪಾನಿ ಕೃಷಿ ವಿಜಯ' - ಇಂಥ ಹೊಸ ಯಕ್ಷಗಾನ ಪ್ರಸಂಗಗಳು ಅರುವತ್ತರ ದಶಕದಲ್ಲಿ ಪ್ರಕಟವಾದವು.

ಕೆ. ವೆಂಕಟರಾಯಾಚಾರ್ಯರ 'ಜಾನಪದ ಕಥೆಗಳು', ಪಡಾರು ಮಹಾಬಲೇಶ್ವರ ಭಟ್ಟರ 'ಹೆಣ್ಣು ಮಕ್ಕಳ ಹಾಡುಗಳು', ಎಮ್. ನಾರಾಯಣರ 'ತುಳು ಒಗಟುಗಳು' ಒಂದಾಣೆ ಮಾಲೆಯಲ್ಲಿ ಕಾಣಸಿಗುತ್ತವೆ. ಸತ್ಯಾಶ್ರಯ ಕಾಮತರ 'ಕಾರುಣ್ಯಮೂರ್ತಿ ಯೇಸು', ಆತ್ಮಾರಾಮ ಶಾಸ್ತ್ರಿಗಳ 'ಮಹಮ್ಮದ ಪೈಗಂಬರರು' ಹಾಗೂ 'ಇಸ್ಲಾಮ್' - ಇವು ಕುಡ್ವಿಯವರ ಉದಾರವಾದಿ ಧಾರ್ಮಿಕ ನಿಲುವಿಗೆ ರುಜುವಾತು ನೀಡುತ್ತವೆ.

ಟಿ. ರಮೇಶ್ ಪೈಗಳ 'ಸಚಿತ್ರ ಜಪಾನ್', ಕಾರ್ಕಳ ವೇಣೂರಿನ ಇತಿಹಾಸ, ಶ್ರೀ ಧರ್ಮಸ್ಥಳ ಕ್ಷೇತ್ರ ಪರಿಚಯ, 'ಇಂಗ್ಲಿಷ್-ಕನ್ನಡ ಅರ್ಥಕೋಶ', 'ಸಂಜ್ಞಾ ಜ್ಞಾನಕೋಶ', '೧೮೫೭ರ ಸಿಪಾಯಿದಂಗೆ', ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯನವರ 'ಜೀವನಚರಿತ್ರೆ', 'ನಿಸರ್ಗ ಚಿಕಿತ್ಸೆ ಮತ್ತು ಗಾಂಧೀಜಿ' - ಇಂಥ ವೈವಿಧ್ಯಪೂರ್ಣ ಕೃತಿಗಳನ್ನು ಒಂದಾಣೆ ಮಾಲೆ ಪ್ರಕಟಿಸಿದೆ.

ಒಂದಾಣೆ ಮಾಲೆ ವಿಷಯ ವೈವಿಧ್ಯ, ಸಾಮಾನ್ಯ ಓದುಗರ ಕೈಗೆ ನಿಲುಕುವ ಬೆಲೆ, ಸಂಗ್ರಹಯೋಗ್ಯವಾದ ಪುಸ್ತಕದ ಆಕಾರ – ಇವುಗಳಿಂದ ಜನಪ್ರಿಯವಾಯಿತು. ಈ ಮಾಲೆಯ ಶೈಕ್ಷಣಿಕ ಮಹತ್ವವನ್ನು ಗುರುತಿಸಬೇಕು. ಜನಪದ ಸಾಹಿತ್ಯ, ತುಳು ಸಾಹಿತ್ಯ, ಯಕ್ಷಗಾನ, ಮಕ್ಕಳ ಸಾಹಿತ್ಯ - ಯಾವುದನ್ನೂ ಒಂದಾಣೆ ಮಾಲೆ ಅಲಕ್ಷಿಸಲಿಲ್ಲ. ಇದೆಲ್ಲದರ ಹಿನ್ನಲೆಯಲ್ಲಿರುವುದು ಕುಡ್ವಿಯವರ ಪುಸ್ತಕ ಪ್ರೀತಿ, ಕನ್ನಡ ಪ್ರೇಮ. ಕುಡ್ವಿಯವರು ಯಾವ ಪ್ರಚಾರ ಪ್ರಶಸ್ತಿಯನ್ನೂ ಬಯಸದ ಸ್ವಾಭಿಮಾನಿ ಪತ್ರಕರ್ತರಾಗಿದ್ದರು. ಮಂಗಳೂರಿನ ರಥಬೀದಿ ಬಳಿಯ 'ಪ್ರಭಾತ' ಕಾರ್ಯಾಲಯದಲ್ಲಿ ಅವರು ನಾಲ್ಕು ದಶಕಗಳ ಕಾಲ ಮುನ್ನೋಟದಿಂದ ಕನ್ನಡದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದರು.

'ಸಬಿಗೀತ', ಎಂ.ಐ.ಜಿ.-೧ (ಎಚ್), ಹುಡ್ಕೊ I ಮೈನ್, ದೊಡ್ಡನಗುಡ್ಡೆ, ಉಡುಪಿ ೫೭೬ ೧೦೨

❑

೮

ಸಾಂಸ್ಕೃತಿಕ ಕಣಿವೆ ಕಂದರಗಳು

ಎಚ್.ಎಸ್. ರಾಘವೇಂದ್ರರಾವ್

'ಸತ್ಯ' ಮತ್ತು 'ಚರಿತ್ರೆ'ಗಳ ನಡುವಿನ ಅಂತರವನ್ನು ತಿಳಿಯಲು ಹರಿತವಾದ ಬುದ್ಧಿಶಕ್ತಿಯೇನೂ ಬೇಡ. ಚರಿತ್ರೆಯೆನ್ನುವುದು, ಅಂದಿನ ಮತ್ತು ಇಂದಿನ, ಅಧಿಕಾರ ಹಿಡಿದಿರುವವರು ಸೃಷ್ಟಿಸಿರುವ ಒಂದು 'ರಚನೆ' ಮಾತ್ರ. ಅವರುಗಳು, ತಮ್ಮ ಅಂದಂದಿನ ಅಗತ್ಯಗಳಿಗೆ ತಕ್ಕಂತೆ ಅದನ್ನು ಕಟ್ಟಿಕೊಡುತ್ತಾರೆ. ಈಗಾಗಲೇ ಇರುವ ರಚನೆಗಳಿಗೆ ಹೊಸ ಅರ್ಥಗಳನ್ನು ಕೊಡುತ್ತಾರೆ. ಇದು ಸಹಜ ಮತ್ತು ಅನಿವಾರ್ಯ. ಆದರೆ,

ಎಲ್ಲ ಕಾಲದಲ್ಲಿಯೂ ಇವುಗಳಿಗೆ ಸಮಾನಾಂತರವಾಗಿ, ಬೇರೆ ಬಗೆಯ ಇತಿಹಾಸಗಳೂ ಭಯದ ನೆರಳಿನಲ್ಲಿಯೇ ಬೆಳೆದಿರುತ್ತವೆ. ಸೂಕ್ತ ಸಮಯಕ್ಕಾಗಿ ಕಾಯುತ್ತಿರುತ್ತವೆ. ನೆಲ, ಗಾಳಿ, ಬೆಳಕುಗಳು ಹದವಾದಾಗ ಅವು ಬಹಿರಂಗದಲ್ಲಿ ಮೈದಳೆಯುತ್ತವೆ. ಇಂದಿನ ಸನ್ನಿವೇಶದಲ್ಲಿಯೇ ಅಂತಹ ಹಲವು ಹೊಸ ಗಿಡಗಳನ್ನು ಗುರುತಿಸಬಹುದು. 'ಅಲಕ್ಷಿತರ ಚರಿತ್ರೆ', 'ಸ್ತ್ರೀಕಥನ' ಮತ್ತು 'ಸ್ಥಳೀಯ ಚರಿತ್ರೆ'ಗಳು ಈ ಮಾತಿಗೆ ಉದಾಹರಣೆಗಳು.

ಈ ಮಾತುಗಳು ಕೇವಲ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ್ದಲ್ಲ. ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ವ್ಯಕ್ತಿಚರಿತ್ರೆಗಳೂ ಈ ನಿಯಮಕ್ಕೆ ಒಳಪಟ್ಟವೇ. ಬಹಳ ಕಾಲದಿಂದ, ಜೋರುದನಿಯಲ್ಲಿ ಹೇಳಿದ ಸುಳ್ಳುಗಳು ನಿಜವೆಂದೇ ಒಪ್ಪಿತವಾಗುವುದು, ಈ ಕ್ಷೇತ್ರಗಳಲ್ಲಿಯೂ ನಮ್ಮ ಕಣ್ಣೆದುರಿಗೆ ನಡೆಯುತ್ತಿರುವ ಸಂಗತಿಯೇ. ಇದಕ್ಕೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ಇಲ್ಲಿ ಗಮನಿಸಲಾಗಿದೆ:

೧. ಆತ್ಮಚರಿತ್ರೆ ಮತ್ತು ಜೀವನಚರಿತ್ರೆ: ಅರ್ಧಸತ್ಯದ ಅಪರಾವತಾರಗಳು

ಇವುಗಳನ್ನು ನಾವು ಸಂಸ್ಕೃತಿಯ ಇತಿಹಾಸವನ್ನು ಕಟ್ಟುವ ಆಕರಗಳ ಸಾಲಿಗೆ ಸೇರಿಸುತ್ತೇವೆ. 'ಮಹಾಪುರುಷರ ಜೀವನವು ಉಳಿದವರಿಗೆ ಮಾದರಿಯಾಗಬೇಕು, ಆಗುತ್ತದೆ' ಎಂಬ ತಿಳಿವಳಿಕೆಯಿಂದ ಅವರ ಬದುಕಿನ ಒಳ್ಳೆಯ ಅಂಶಗಳನ್ನು ಮಾತ್ರ ದಾಖಲೆಮಾಡಿ ಉಳಿದುದನ್ನು ಬಿಟ್ಟುಬಿಡುವ ಅಭ್ಯಾಸವನ್ನು ನಾವು ಬಹುಪಾಲು ಜೀವನಚರಿತ್ರೆಗಳಲ್ಲಿ ನೋಡಬಹುದು. 'ಎಲ್ಲರ ಜೀವನದಲ್ಲಿಯೂ ಕೆಟ್ಟದ್ದು ಇದ್ದೇ ಇರುತ್ತದೆ. ಅದನ್ನು ಹೇಳಬೇಕಾಗಿಲ್ಲ.' ಎಂಬ ಈ ನಿಲುವು, ನಮ್ಮ ಕಿರಿಯರಿಗೆ, ಅವರು ಅನುಸರಿಸಲಾಗದ, ಅನುಕರಿಸಲಾಗದ ಹುಸಿಮಾದರಿಗಳನ್ನು ಒದಗಿಸಿಬಿಡುತ್ತದೆ. "ಅಣ್ಣ ಮಾಸ್ತಿ", "ಕನ್ನಡ ಸಂಸ್ಕೃತಿಯನ್ನು ಕಟ್ಟಿದ ಅ.ನ.ಕೃ.", 'ಕಾವ್ಯರ್ಷಿ ಕುವೆಂಪು", "ಅನುಭಾವಿ ಮಧುರಚೆನ್ನ" ಮುಂತಾದ ಲೇಬಲ್‌ಗಳನ್ನು ಮರು ಪರಿಶೀಲನೆಗೆ ಒಳಪಡಿಸುವ ಗೊಡವೆಗೆ ನಾವು ಹೋಗುವುದೇ ಇಲ್ಲ. ಒಂದು ವೇಳೆ ಅಂತಹ ಕೆಲಸವನ್ನು ಯಾರಾದರೂ ಮಾಡಹೊರಟರೆ, ಅದಕ್ಕೆ ನಿರ್ಲಕ್ಷ್ಯದ ಮನ್ನಣೆ ದೊರಕುತ್ತದೆ. ಉದಾಹರಣೆಗೆ ಗೆಳೆಯರ ಗುಂಪಿನ ಹಲವು ಒಡಕುಗಳನ್ನು ಕುರಿತು ದಾಖಲೆಮಾಡಿದ ಶೇ.ಗೋ.ಕುಲಕರ್ಣಿಯವರ 'ನಾನು ಕಂಡ ಗೆಳೆಯರ ಗುಂಪು' ಎಂಬ ಪುಸ್ತಕವು ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಗೊಡವೆಗೆ, ಯಾರೂ ಹೋಗಲೇ ಇಲ್ಲ. ಮಧುರಚೆನ್ನರ ಬಗ್ಗೆ ಅಪಾರ ಪ್ರೀತಿ, ಗೌರವಗಳನ್ನು ಹೊಂದಿಯೂ ವಾಸ್ತವಕ್ಕೆ ಸಮೀಪವಾದ ಚಿತ್ರವನ್ನು ನೀಡುವ ಸಿಂಪಿ ಲಿಂಗಣ್ಣನವರ ಬರವಣಿಗೆಯ ಮಾತೂ ಹಾಗೆಯೇ. ಇತ್ತೀಚೆಗೆ 'ಮಯೂರ'ದಲ್ಲಿ ಪ್ರೊ. ಜಿ.ಎಚ್. ನಾಯಕರು ಅನಾವರಣ ಮಾಡಿದ ಹತ್ತು ಹಲವು ಕಟುಸತ್ಯಗಳ ಮಾತೂ ಹಾಗೆಯೇ. ಉತ್ತರ ಕೊಡಲು ಸಾಧ್ಯವಿಲ್ಲದಾಗ ಸುಮ್ಮನಿದ್ದುಬಿಡುವುದು ಸೂಕ್ತವಾದ ಜಾಣತನವಾಗುತ್ತದೆ. ಸ್ವಲ್ಪ ದಿನಗಳ ನಂತರ, ಎಲ್ಲರೂ ಎಲ್ಲವನ್ನೂ ಮರೆಯುತ್ತಾರೆ. ಆದ್ದರಿಂದಲೇ, ಕಳ್ಳತನ ಮಾಡಲಿಕ್ಕೆ ಎಲ್ಲ ಸಮಯವೂ ಒಳ್ಳೇ ಸಮಯವೇ ಎಂದು ತಿಳಿಯುವ ಕಾಲ ಈಗ ಬಂದಿದೆ ಅಥವಾ ಯಾರಿಗೆ ಗೊತ್ತು, ಎಂದಿನಿಂದಲೂ ಇದೆ.

ಅಲ್ಲದೆ, ಯಾರ ಬಗ್ಗೆಯಾದರೂ ಒಳ್ಳೆಯದನ್ನು ಹೇಳಬೇಕಾದರೆ, ದಾಖಲೆಗಳ, ಪುರಾವೆಗಳ ಅಗತ್ಯವಿಲ್ಲ. ಆದರೆ, ಕೆಟ್ಟದರ, ಆಕ್ಷೇಪಣೆಗಳ ಮಾತು ಹಾಗಲ್ಲ. ಮಾನಹೀನರಿಗೂ ಮಾನಹಾನಿ ಮೊಕದ್ದಮೆ ಹಾಕುವ ಹಕ್ಕು ಇರುತ್ತದೆ. ತೆರೆಮರೆಯ ಸಂಧಾನಗಳೇ, ಅನೇಕ ಸಾರ್ವಜನಿಕ ಆಗುಹೋಗುಗಳನ್ನು ನಿರ್ಧರಿಸಿಬಿಡುವುದರಿಂದ, ನಮಗೆ ಗೊತ್ತಿರುವ ಕಟುಸತ್ಯವನ್ನು ಕೂಡ ಬಹಿರಂಗವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಆ ಹುನ್ನಾರಗಳಿಗೆ ಕಪ್ಪು ಬಿಳಿಯ ಅಕ್ಷರಗಳಲ್ಲಿ ಸಾಕ್ಷಿ-ಪುರಾವೆಗಳನ್ನು ಒದಗಿಸಲು ಸಾಧ್ಯವಿಲ್ಲ. ಹೇಳಿದರೂ, ಅದರಿಂದ ನುಣುಚಿಕೊಳ್ಳುವುದು ಬಹಳ ಸುಲಭ.

ನಾವು ಹೇಳಿದ ಒಳ್ಳೆಯ ಸಂಗತಿಗಳು, ನಿಜವೇ ಆದರೂ ಅರ್ಧಸತ್ಯಗಳಾಗಿರುತ್ತವೆ. ಉದಾಹರಣೆಗೆ, ನವೋದಯ ಸನ್ನಿವೇಶದ ಸಾಹಿತಿ-ವಿದ್ವಾಂಸರುಗಳು ಮತ್ತು ಅವರ ಶಿಷ್ಯವರ್ಗಕ್ಕೆ ಸೇರಿದ ಇಂದಿನ ಹಿರಿಯರು ಮಾಡಿಕೊಳ್ಳುತ್ತಿರುವ ಪರಸ್ಪರ ಪ್ರಶಂಸೆಯ ಮಳೆಯನ್ನು ನೋಡಿದರೆ, ಅವರೆಲ್ಲರೂ ದೇವಲೋಕದಿಂದ ಉದುರಿದ ಸಜ್ಜನ ಬೃಹಸ್ಪತಿಗಳೆಂಬ ಮತ್ತು ನಮ್ಮ ಕಾಲದ ವಿದ್ವಾಂಸರೆಲ್ಲರೂ ದುಷ್ಟರೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ನಮ್ಮ ಕಾಲದಲ್ಲಿಯೂ ಇಂತಹ "ಐಕಾನ್"ಗಳ ನಿರ್ಮಾಣವಾಗುತ್ತಿರುವುದನ್ನು ನಾವೆಲ್ಲರೂ ಬಲ್ಲೆವು. ಸಮಾಜವಾದ, ಪ್ರಜಾಪ್ರಭುತ್ವ ಮುಂತಾದ ಮೌಲ್ಯಗಳು ಪ್ರತಿಪಾದಿಸುವ ನಂಬಿಕೆಗಳಿಗೂ ಈ ರೀತಿಯ 'ನಾಯಕಪೂಜೆ'ಗೂ ತಾಳಮೇಳವೇ ಇಲ್ಲ.

ನಮ್ಮ ಸಾಂಸ್ಕೃತಿಕ ನಾಯಕರು, ಅವರ ಕುಟುಂಬವರ್ಗ, ಅವರ ಉತ್ತರಾಧಿಕಾರಿಗಳು, ಹಿಂಬಾಲಕರು ಎಲ್ಲರೂ 'ಹೀರೋ'ಗಳಾಗಿಬಿಡುವ ಈ ಪ್ರಕ್ರಿಯೆಯಲ್ಲಿ, ಓಲೈಸುವವರನ್ನು ವೈಭವೀಕರಿಸುವ ಅಥವಾ ಸುದ್ದಿಯಲ್ಲಿರುವವರು ನೀಡುವ ಹುಸಿ ರೋಮಾಂಚನಗಳಿಗಾಗಿ ಹಾತೊರೆಯುವ ಮಾಧ್ಯಮಗಳ ಪಾತ್ರವೂ ಸಾಕಷ್ಟು ಹಿರಿದು. ಇದು ಇಡೀ ಸಂಸ್ಕೃತಿಯು, ನೆನ್ನೆಯೇ ನಡೆದ ಸಂಗತಿಗಳನ್ನು ಮರೆಯುವ ವಿಸ್ಮೃತಿಯ ಫಲವಾದ ದುರಂತ. ನೆನ್ನೆ ಲಾಭ ತಂದ ಮಾತು ನೆನ್ನೆಗಾಯಿತು, ಇಂದು ಲಾಭ ತರುವ ಮಾತು ಇಂದಿಗೆ ಬೇಕು. ಹೀಗಾದಾಗ ಉತ್ತರವಾದಿತ್ವವು ಯಾರಿಗೂ ಯಾರಿಗೂ ಇರುವುದಿಲ್ಲ. ಮುಜುಗರ ತರುವ ಮಾತುಗಳನ್ನು ಎತ್ತದಿದ್ದರೆ ಸರಿ. ಸತ್ತವರ ಹೆಸರುಗಳೂ ಬದುಕಿರುವವರಿಗೆ 'ಇನ್‌ವೆಸ್ಟ್‌ಮೆಂಟ್' ಆಗಿ ಬಿಡುತ್ತವೆ. ನಾವು ನೆನ್ನೆಯ ಖಳನಾಯಕರೆಂದು ಒಪ್ಪಿಕೊಳ್ಳುವವರೂ ಕೂಡ, ಇಂದು ಸುಧಾರಕರಾಗುವುದು ಬಹಳ ಸುಲಭ. ಜೀವನಚರಿತ್ರೆಗಳನ್ನು ಬರೆಯುವವರಿಗೂ ಅವುಗಳ ನಾಯಕರಿಗೂ ಆತ್ಮೀಯವಾದ ನೆಂಟತನದ ಅಥವಾ ಶಿಷ್ಯತ್ವದ ಸಂಬಂಧಗಳಿರುವಾಗ, ವಸ್ತುನಿಷ್ಠವಾದ ಬರವಣಿಗೆಯನ್ನು ನಿರೀಕ್ಷಿಸುವುದಾದರೂ ಹೇಗೆ ಸಾಧ್ಯ ಕನ್ನಡದಲ್ಲಿ, ಸಾಹಿತ್ಯ ಅಕಾಡೆಮಿಗಳು ಮತ್ತು ಖಾಸಗೀ ಪ್ರಕಾಶನಗಳು ಪ್ರಕಟಿಸಿರುವ ಬಹುಪಾಲು ಜೀವನಚರಿತ್ರೆಗಳಿಗೆ ಈ ಮಾತು ಅನ್ವಯಿಸುತ್ತದೆ. ಇನ್ನು ಅಭಿನಂದನ ಗ್ರಂಥಗಳ ಮಾತನ್ನು ವಿವರಿಸುವ ಅಗತ್ಯವೇ ಇಲ್ಲ. ಅವುಗಳಲ್ಲಿರುವುದು ನೂರಕ್ಕೆ ತೊಂಬತ್ತರಷ್ಟು ಸ್ಯಾಖರೀನ್ ಸವರಿದ ಸಕ್ಕರೆ ಗುಳಿಗೆಗಳು. ನಿರೀಕ್ಷಿತ ವ್ಯಕ್ತಿಗಳಿಂದ, ನಿರೀಕ್ಷಿತ ವ್ಯಕ್ತಿಗಳ ಬಗ್ಗೆ, ನಿರೀಕ್ಷಿತ ಶ್ರೋತೃಗಳ ಸಮ್ಮುಖದಲ್ಲಿ ನಡೆಯುವ ಸೆಮಿನಾರುಗಳು, ರಿಚುಯಲ್‌ಗಳ ರೂಪತಳೆದು ದಶಕಗಳೇ ಕಳೆದವು. ಇಂತಹ ಸನ್ನಿವೇಶದಲ್ಲಿ, ಸಂಕೀರ್ಣವೋ, ಪಾರಿಭಾಷಿಕವೋ, ಪಾಂಡಿತ್ಯಪೂರ್ಣವೋ ಆದ ಬರವಣಿಗೆಯು, ಸಂವಹನವಾಗಲು ಬಯಸದ, ಜಿಗುಟು 'ಲೋಕವಿರೋಧಿ' ಕಗ್ಗವೆಂದು ಬಹುಬೇಗ ಕರೆಸಿಕೊಳ್ಳುತ್ತದೆ. ಅವುಗಳನ್ನು ಬರೆದವರು ಖ್ಯಾತ ವಿಮರ್ಶಕ, ಚಿಂತಕ ಮುಂತಾದ ಬೇಗಡೆ ಬಿರುದುಗಳನ್ನು ಪಡೆದರೂ, ಅವರು ಬರೆದುದನ್ನು ಓದುವವರು ಬೆರಳೆಣಿಕೆಯಷ್ಟು ಮಂದಿಯೇ.

ಆತ್ಮಕಥೆಗಳಲ್ಲಿ ಸ್ವಸಮರ್ಥನೆಯ ಧಾಟಿಯೇ ಸ್ಥಾಯಿಯಾಗಿರುತ್ತದೆ. ಬೇಂದ್ರೆ, ಕಾರಂತ, ಕುವೆಂಪು ಮಾಸ್ತಿಯರ ಆತ್ಮಕಥೆಗಳೂ ಈ ಮಾತಿಗೆ ಅಪವಾದವಲ್ಲ. ಸಾಲುಗಳ ನಡುವೆ ಓದಿ ಬಚ್ಚಿಟ್ಟ ಗುಟ್ಟುಗಳನ್ನು ಹೊರತೆಗೆಯುವ ಸಾಮರ್ಥ್ಯವಿಲ್ಲದ ಓದುಗರಂತೂ ಆರಾಧನೆಯ ಹೊಳೆಯಲ್ಲಿ ತೇಲಿಹೋಗುತ್ತಾರೆ. ಈ ವಿಷಯದ ಮೇಲೆ, ಶ್ರೀ ಎಂ.ಜಿ.ಕೃಷ್ಣಮೂರ್ತಿಯವರ ಲೇಖನವು ಸಾಕಷ್ಟು ಬೆಳಕು ಚೆಲ್ಲುತ್ತದೆ

೨. ಮಾತು ಮತ್ತು ಬರವಣಿಗೆ ಎಂಬ ಸುಳ್ಳುಗಳ

ಕಳೆದ ದಿನಗಳಲ್ಲಿ, ನಮ್ಮ ಆದರ್ಶಗಳು ನಮ್ಮ ಊರಿನಲ್ಲಿಯೇ ನಮ್ಮ ಹಳ್ಳಿಯಲ್ಲಿಯೇ ಇರುತ್ತಿದ್ದರು. ಅವರಿಗೆ, ಸಾಮಾಜಿಕವಾಗಿ ಮುಕ್ತವಾದ ಜನಪರತೆ ಮತ್ತು ವೈಯಕ್ತಿಕವಾದ ನೈತಿಕತೆಗಳೆರಡೂ ಇರಬೇಕೆಂದು ನಾವು ನಿರೀಕ್ಷಿಸುತ್ತಿದ್ದೆವು. ಅವು ಇದೆಯೋ ಇಲ್ಲವೋ ಎನ್ನುವುದು ಕಣ್ಣೆದುರಿಗೇ ಕಾಣುತ್ತಿತ್ತು. ಆದರೆ ಇಂದಿನವರು 'ರಿಮೋಟ್ ಕಂಟ್ರೋಲ್ ಹೀರೋ'ಗಳು. ಅವರು ಉದುರಿಸುವ ಮಾತಿನ ಮುತ್ತುಗಳಿಗೂ ಹಗಲಿರುಳೂ ತೊಡಗಿರುವ ಕೃಷ್ಣಕಾರಾಸ್ಥಾನಗಳಿಗೂ ಯಾವುದೇ ಸಂಬಂಧ ಇರಬೇಕಾಗಿಲ್ಲ. ಒಟ್ಟು ಸಮಾಜ ಹಾಗೂ ಸಂಸ್ಕೃತಿಗೆ ಸೃಜನಶೀಲತೆಯ ಅಗತ್ಯವಿದೆಯೇ ವಿನಾ ಇಂಟೆಗ್ರಿಟಿಯದಲ್ಲ ಎಂಬ ನಿಲುವನ್ನು ಎಲ್ಲರೂ ತಳೆಯಬೇಕಾಗುತ್ತದೆ. ಹೀಗಾದಾಗ 'ಪ್ರತಿಭೆ'ಯ ಕೈ ಮೇಲಾಗಿ ಪ್ರಾಮಾಣಿಕತೆಯು ಗೌಣವಾಗುತ್ತದೆ. ಅಷ್ಟೇ ಅಲ್ಲ, ಪ್ರತಿಭೆಯು ಯಾವುದು ಎಂದು ಗುರುತಿಸುವ ಕೆಲಸವನ್ನು ಕೂಡ ಆ ಮಹನೀಯರೇ ವಹಿಸಿಕೊಳ್ಳುತ್ತಾರೆ. ಸಾಮಾಜಿಕ ನ್ಯಾಯದ ಹಂಚಿಕೆಯಲ್ಲಿಯೂ ಇದೇ ಅಚಾತುರ್ಯವು ನಡೆಯುತ್ತದೆ. ಕೊನೆಗೂ ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು ನೈತಿಕವಾಗಿ ಪರಿಪೂರ್ಣವಾಗಿರಬೇಕೆಂಬ ಹುಸಿಮಾತನ್ನು ನಾನು ಹೇಳುತ್ತಿಲ್ಲ. ಆದರೆ, ಸಮಾಜದ ಒಳಿತು ಮತ್ತು ಪರಿವರ್ತನೆಗೆಂದು ಉಳಿದ ಅನೇಕರಿಗಿಂತ ಹೆಚ್ಚಿನ ಮಹತ್ವವನ್ನು ಕೊಡುವುದು ಅನಗತ್ಯವೆಂದು ನನಗೆ ತೋರುತ್ತದೆ. ಉಳಿದ ಕ್ಷೇತ್ರಗಳ ಪ್ರತಿಭಾವಂತರ ಮೌನ, ಅಲಕ್ಷ್ಯ ಮತ್ತು ದಡ್ಡತನಗಳೂ ಇದಕ್ಕೆ ಕಾರಣ. ನಮ್ಮ ಶಿಕ್ಷಣಕ್ರಮವು ನೂರೆಂಟು ಕ್ಷೇತ್ರಗಳಲ್ಲಿ ಪರಿಣತರಾದವರ ಸೃಷ್ಟಿಯಲ್ಲಿ ತೋರಿಸುವ ಆಸಕ್ತಿಯನ್ನು ಸಾಮಾಜಿಕವಾದ ತಿಳಿವಳಿಕೆಯನ್ನು ಬೆಳೆಸುವುದರಲ್ಲಿ ತೋರಿಸುವುದಿಲ್ಲ. ಏಕೆಂದರೆ, ಅದು ಪ್ರತಿಷ್ಠಿತ ಶಕ್ತಿಗಳ ಹಿತಾಸಕ್ತಿಗೆ ಅಡ್ಡಿಯಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಬುದ್ಧಿಜೀವಿಗಳಲ್ಲಿ ಬಹು ಪಾಲು ಒಂದೇ ನೆಲೆಯಿಂದ ಬಂದವರಾಗುತ್ತಾರೆ. ಅದೂ ಅಲ್ಲದೆ, ವಿಷಯಗಳಲ್ಲಿ ಪರಿಣತರಾದವರಿಗೆ, ಪ್ರಾದೇಶಿಕ ಭಾಷೆಗಳಲ್ಲಿ

ಅಭಿವ್ಯಕ್ತಿಸಾಮರ್ಥ್ಯವು ಸಾಕಷ್ಟು ಇಲ್ಲದಿರುವುದು ಕೂಡ ಹುಸಿನಿಲುವುಗಳ ಬೆಳವಣಿಗೆಗೆ ಕಾರಣವಾಗುತ್ತದೆ. ಒಟ್ಟಿನಲ್ಲಿ 'ಹಲವು ಲೋಕಗಳ ಮೌನ ಮತ್ತು ಕೆಲವು ವ್ಯಕ್ತಿಗಳ ಅಭಿವ್ಯಕ್ತಿ' ಎಂಬ ಸನ್ನಿವೇಶವು ಸೃಷ್ಟಿಯಾಗುತ್ತದೆ.

ಸಾಹಿತ್ಯಕೃತಿಗಳ ಸ್ವರೂಪದ ಬಗ್ಗೆಯೂ ನಮಗೆ ಕೆಲವು ಭ್ರಮೆಗಳಿವೆ. ಅತ್ಯಂತ ಮುಕ್ತ ಹಾಗೂ ವಸ್ತುನಿಷ್ಠವೆಂದು ಹೇಳಲಾದ ಕೃತಿಗಳ ಲೇಖಕರಿಗೂ ಅವರದೇ ಆದ ಅಜೆಂಡಾಗಳು ಇರುತ್ತವೆ. ಅವು ಮಂಡಿಸುವ ವಾಸ್ತವಗಳು ಕೂಡ ಲೇಖಕನ ನಿಲುವುಗಳಿಂದ ರೂಪಿತವಾದ 'ರಚನೆ'ಗಳೇ ಹೊರತು ಸಮಗ್ರ ಸತ್ಯಗಳಲ್ಲ. ಲೇಖಕರಾದ ಶ್ರೀ ವಸಂತ ದಿವಾಣಜಿಯವರು ಹೇಳುವಂತೆ, 'ಫ್ರಾಗ್‌ಮೆಂಟೆಡ್' ಆದ ವ್ಯಕ್ತಿಗಳನ್ನು ಮತ್ತು ಸನ್ನಿವೇಶಗಳನ್ನು ಅವು ಮಾತ್ರ ಸಮಗ್ರವೇನೋ ಎಂಬಂತೆ ಚಿತ್ರಿಸುವ ಯಾವ ಕೃತಿಯೂ ನಂಬಲರ್ಹವಲ್ಲ. ಎ.ಎನ್.ಮೂರ್ತಿರಾವ್, ಪು.ತಿ.ನ., ಕೆ.ಎಸ್.ನ., ಎಚ್.ಎಲ್. ನಾಗೇಗೌಡ, ತ್ರಿವೇಣಿ, ರಾಮಚಂದ್ರಶರ್ಮ, ಬೆಸಗರಹಳ್ಳಿ ರಾಮಣ್ಣ, ಕೆ.ಸತ್ಯನಾರಾಯಣ, ಮೊಗಳ್ಳಿ ಗಣೇಶ ಎಲ್ಲರೂ ಮಂಡ್ಯ ಜಿಲ್ಲೆಯಿಂದಲೇ ಬಂದ ಲೇಖಕರು. ಇವರೆಲ್ಲರು ನೀಡಿರುವ ಚಿತ್ರಗಳೂ ನಿಜವೇ ಆದರೂ ಅವುಗಳಲ್ಲಿ ಯಾವುದೂ ಸಮಗ್ರವಲ್ಲ. ಇದು ಸರ್ವಂಕಷವೆಂದು 'ಹೇಳಲಾದ' ಸಾಹಿತ್ಯದ ಲಕ್ಷಣವೇ ಹೊರತು ಆಯಾ ಲೇಖಕರ/ಅವರ ಕೃತಿಗಳ ಮಿತಿಯಲ್ಲ. ಚರಿತ್ರೆ ಹೇಳುವ ಸತ್ಯಗಳಂತೆಯೇ ಸಾಹಿತ್ಯವು ಹೇಳುವ ಸತ್ಯಗಳಿಗೂ ತನ್ನದೇ ಆದ ಮಿತಿಗಳಿವೆ. ಹೀಗಿರುವಾಗ ಇವರನ್ನು ಒಟ್ಟು ಸಮಾಜದ, ಸಮುದಾಯಗಳ ವಕ್ತಾರರೆಂದು ತಿಳಿಯುವುದು ಒಂದು 'ಮಿಥ್' ಅಲ್ಲದೆ ಬೇರೇನೂ ಅಲ್ಲ. ಟಾಲ್‌ಸ್ಟಾಯರಂತಹ ಮಹಾನ್ ಲೇಖಕರು ತಮ್ಮ ಶ್ರೇಷ್ಠ ಕಾದಂಬರಿಗಳನ್ನು ಕೂಡ, ನಿರಾಕರಿಸಿ ಕೆಲವೇ ಕೆಲವು ನೀತಿಕಥೆಗಳನ್ನು ಒಪ್ಪಿಕೊಂಡಿದ್ದು ಈ ಕಾರಣದಿಂದಲೇ ಇರಬೇಕು. ಈ ಎಲ್ಲ ಕೃತಿಗಳೂ ನಮ್ಮ ಅನುಭವಲೋಕವನ್ನು, ತಿಳಿವಳಿಕೆಯನ್ನು ಅಪಾರವಾಗಿ ಹೆಚ್ಚಿಸುವುದು ನಿಜವಾದರೂ ಅವು ನೀಡುವ 'ಸತ್ಯದರ್ಶನ'ಗಳನ್ನು ಒಂದು ಚಿಟಿಕೆ ಉಪ್ಪಿನೊಂದಿಗೆ ತೆಗೆದುಕೊಳ್ಳುವುದು ಅತ್ಯಗತ್ಯ.

೩. ಮಾಧ್ಯಮಗಳ ಮಾಯಾಜಾಲ

ಮಾಧ್ಯಮಗಳು ಮತ್ತು ಅವುಗಳನ್ನು ನಿಯಂತ್ರಿಸುವ ಆರ್ಥಿಕ/ರಾಜಕೀಯ ಶಕ್ತಿಗಳು ನಿಷ್ಪಕ್ಷಪಾತವಾದ ನಿಲುವನ್ನು ತಳೆಯಬಲ್ಲವು ಎಂಬ ನಿರೀಕ್ಷೆಯೇ ಹುಸಿಯಾದುದು. ಇದು ಅಂದಿಗೂ ಹೀಗೆಯೇ, ಇಂದಿಗೂ ಹೀಗೆಯೇ. ರಾಜರು ನಿಲ್ಲಿಸಿದ ಶಾಸನಗಳು ಕೂಡ ಜನಪರವಾಗಿರುವುದಿಲ್ಲ. ಸಾಂಸ್ಕೃತಿಕವಾದ ಆಸಕ್ತಹಿತಗಳು ತಮ್ಮನ್ನು ಪೋಷಿಸಿಕೊಳ್ಳಲೆಂದೇ ಮಾಧ್ಯಮಗಳನ್ನು ಓಲೈಸುತ್ತವೆ. ಪತ್ರಿಕಾಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ ಮುಂತಾದ ಮಾತುಗಳು ಎಷ್ಟೊಂದು ಹುಸಿಯೆಂದು ಪತ್ರಿಕೆಗಳಲ್ಲಿ ಕೆಲಸ ಮಾಡುವವರೂ ಬಲ್ಲರು, ಓದುವ ನಾವೂ ಬಲ್ಲೆವು. 'ಒಂದು ಸುಳ್ಳನ್ನು ಸಾವಿರ ಸಲ ಹೇಳಿದರೆ, ಅದನ್ನೇ ಜನರು ನಿಜವೆಂದು ನಂಬುತ್ತಾರೆ' ಎನ್ನುವ ಗೊಬೆಲ್ಸನ ಮಾತಿನಲ್ಲಿ ಒಂದಿನಿತೂ ಉತ್ಪ್ರೇಕ್ಷೆಯಿಲ್ಲ. ಇಂದಿನ ಸನ್ನಿವೇಶವು ಬಹಳ ಜಟಿಲವಾಗಿದೆ. ಮಾಧ್ಯಮಗಳನ್ನು ಆಶ್ರಯಿಸಿದವರಾಗಲಿ, ಅವುಗಳಿಂದ ದೂರ ಉಳಿದವರಾಗಲಿ, ಜನರನ್ನು ತಲುಪುವರೆಂಬ ಯಾವ ನಂಬಿಕೆಯೂ ಇಲ್ಲ. ಕಲಾವಿದರಿಗೆ ಬೇಕಾಗಿರುವುದು 'ವಿಸಿಬಿಲಿಟಿ'ಯೇ ವಿನಾ ಜನರು ಓದಲೆಂಬ ತೀವ್ರ ಅಪೇಕ್ಷೆಯಲ್ಲ. ವರದಿಗಾರರಿಗಿಂತ ಫೋಟೋ ತೆಗೆಯುವವರೇ ಮುಖ್ಯವಾದಾಗ ಯಾರನ್ನು ನಿಂದಿಸುವುದು, ಯಾರನ್ನು ವಂದಿಸುವುದು? ಛಾಯಾಗ್ರಾಹಕರ ಅನುಕೂಲಕ್ಕಾಗಿ, ಒಮ್ಮೆ ಬಿಡುಗಡೆ ಮಾಡಿದ ಪುಸ್ತಕವನ್ನೇ ಮತ್ತೊಮ್ಮೆ ಹಿಡಿದುಕೊಂಡು ಹಲ್ಲುಗಿಂಜುವ ಕಾಮಿಡಿಗಳು ದಿನಕ್ಕೆ ಎರಡು ಬಾರಿ ಜರುಗುತ್ತವೆ. ಪುಸ್ತಕವಿಮರ್ಶೆಯು, ಪುಸ್ತಕಪರಿಚಯವಾಗಿ, 'ಪುಸ್ತಕ ಪ್ರೊಮೋಷನ್' ಆಗಿ, ಕೊನೆಗೆ ಸಿಕ್ಕಿದವರಿಗೆ ಸೀರುಂಡೆಯೆನಿಸಿರುವ ಈ ದಿನಗಳಲ್ಲಿ ಮಾಧ್ಯಮದ ಮತ್ತು ಅವುಗಳಿಂದ ಪೋಷಿತರಾಗಿರುವ 'ಕ್ರೆಡಿಬಿಲಿಟಿ' ಯಾವ ಬಗೆಯದು? ಪುಂಖಾನುಪುಂಖವಾಗಿ, ಪ್ರತಿಯೊಂದು ಪತ್ರಿಕೆಯೂ ಹೊರತರುತ್ತಿರುವ ಅವರಿವರನ್ನು ಕುರಿತ ವಿಶೇಷ ಸಂಚಿಕೆಗಳ ಸರಕು, ಹೊಗಳಿಕೆಯ ಹೊಸ ದಾರಿಯಾಗಿ ರೂಪಿತವಾಗಿಲ್ಲವೇ? ಇದರ ನಡುವೆ ಪ್ರಾಮಾಣಿಕವಾಗಿ ಪ್ರಜಾಪ್ರಭುತ್ವಾತ್ಮಕವಾದ ನಿಲುವನ್ನು ತಳೆದು ತಮ್ಮ ಮಿತಿಯಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವ ಪತ್ರಿಕೆಗಳ ಹೆಸರಾದರೂ ಎಷ್ಟು ಜನರಿಗೆ ತಿಳಿಯುವಂತಿದೆ? ಈ ಸಂದರ್ಭದಲ್ಲಿ ಶ್ರೀ ಜಿ.ರಾಜಶೇಖರ ಅವರು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಹೇಳಿದ ಮಾತುಗಳನ್ನು ನೆನಪು ಮಾಡಿಕೊಳ್ಳಬಹುದು: " ಸಮೂಹ ಸಂಸ್ಕೃತಿಯ ಮಾಧ್ಯಮಗಳು ಈ ವ್ಯವಸ್ಥೆಯ ಒಂದು ಭಾಗವಾಗಿವೆ. ಈ ಮಾಧ್ಯಮಗಳ ಒಡೆತನ ಬಂಡವಾಳಶಾಹಿಗಳ ಕೈಯಲ್ಲಿದ್ದು ಸಮೂಹಸಂಸ್ಕೃತಿ ಒಂದು ಲಾಭತರುವ ಉದ್ಯಮವೂ ಆಗಿದೆ. ಈ ಉದ್ಯಮಕ್ಕೆ ಜನಸಮೂಹವು ಕೊಟ್ಟದ್ದನ್ನು ಪಡೆಯಲು ಮಾತ್ರ ಇರುವ ಗಿರಾಕಿಗಳ ಸಮೂಹ. ಆಕರ್ಷಕವಾದ ಕಾಗದದಲ್ಲಿ ಸುತ್ತಿದರೆ ಹೇಲು ಸಮೇತ ಮಾರಬಹುದು ಎನ್ನುವುದು ಇದರ

ನೈತಿಕತೆ. ಜನತೆಯನ್ನು ಮಾರುಕಟ್ಟೆ ಎಂದು ಭಾವಿಸಿರುವ ಈ ಸಂಸ್ಕೃತಿ ಎಂದಾದರೂ ಅದರ ಸ್ವಾತಂತ್ರ್ಯವನ್ನು ಬಯಸೀತೇ?'' (ಶೂದ್ರ, ಸೆಪ್ಟೆಂಬರ್, ೧೯೮೮) ಇಂದಿನ ವಾಸ್ತವವನ್ನು ಇದಕ್ಕಿಂತ ಕಟುವಾಗಿ ಹೇಳಲು ಸಾಧ್ಯವಿಲ್ಲ. ದುರಂತವೆಂದರೆ, ಸಂವೇದನಶೀಲರೆಂದು ಹೇಳಲಾದ ಸಾಹಿತಿ–ಕಲಾವಿದರು ಈ ಅಪರಾಧಗಳ ಭಾಗವಾಗಿರುವುದು.

ಈ ಪಟ್ಟಿಗೆ ಇನ್ನಷ್ಟು ಅಂಶಗಳನ್ನು ನಾನೂ ಸೇರಿಸಬಹುದು, ಓದುತ್ತಿರುವ ನೀವೂ ಸೇರಿಸಬಹುದು. ಇವು ಕಹಿಯಾದ ಮನಸ್ಸಿನಿಂದ ಬರೆಯುತ್ತಿರುವ ಹತಾಶ ನುಡಿಗಳೇನೂ ಅಲ್ಲ. 'ನಾನು ಮಾತ್ರ ಸರಿ, ಉಳಿದವರು ಅಯೋಗ್ಯರು' ಎಂಬ ಉದ್ಧಟ ನೈತಿಕತೆಯೂ ನನ್ನದಲ್ಲ. ಕೇವಲ ಸಾಹಿತ್ಯಕೃತಿಗಳಿಂದಲೇ (ಲೇಖಕರ ಬದುಕು ಹೇಗಾದರೂ ಇರಲಿ) ಓದುಗನ ಮೇಲೆ ತೀವ್ರ ಪರಿಣಾಮ ಆಗಬಹುದೆಂದು ನಾನು ಬಲ್ಲೆ. ಇದೆಲ್ಲ ನಿಜವಾದರೂ ನಾನು ಎತ್ತಿರುವ ಕೆಲವು ಪ್ರಶ್ನೆಗಳು ಪರಿಶೀಲನೆಗೆ ಅರ್ಹವೆಂದು ಭಾವಿಸಿದ್ದೇನೆ. ಪರಿಶೀಲನೆಯು ಪರಿಹಾರವಲ್ಲ. ಯಾರೊಬ್ಬರೂ ಹಾಗೆ ಧಿಡೀರ್ ಪರಿಹಾರವನ್ನು ಸೂಚಿಲು ಸಾಧ್ಯವಿಲ್ಲ. ಇದು, ನಮ್ಮ ಸಾಂಸ್ಕೃತಿಕ ಬದುಕು ಹಾದುಹೋಗುತ್ತಿರುವ ಕಣಿವೆ ಕಂದರಗಳನ್ನು ಕಾಣುವ ವಿನಯಶೀಲ ಪ್ರಯತ್ನ ಮಾತ್ರ

೭, ಶ್ರೀಮಾತಾ, ೧೫ನೇ ಕ್ರಾಸ್, ೫ನೇ ಫೇಸ್, ಜೆ.ಪಿ. ನಗರ, ಬೆಂಗಳೂರು ೫೬೦ ೦೭೮

❑

೬

ಸ್ವಾತಂತ್ರ್ಯೋತ್ತರ ಕರ್ನಾಟಕದ ಶಿಕ್ಷಣಕ್ಷೇತ್ರ

ಸಿ.ಎನ್. ರಾಮಚಂದ್ರನ್

ಏಕೀಕೃತ ಕರ್ನಾಟಕದ ಸ್ಥಾಪನೆಯಾಗಿ ೫೦ ವರ್ಷಗಳು ತುಂಬಲಿವೆ; ಈ 'ಸುವರ್ಣ' ವರ್ಷವನ್ನು ಅತ್ಯಂತ ವೈಭವದಿಂದ ಆಚರಿಸಲು ಈಗಾಗಲೇ ಸಿದ್ಧತೆಗಳು ಆಗುತ್ತಿವೆ. ಈ ಸಂದರ್ಭದಲ್ಲಿ ಹಿಂತಿರುಗಿ ನೋಡಿದಾಗ, ಕರ್ನಾಟಕ ರಾಜ್ಯ ಸ್ಥಾಪನೆಯಾದನಂತರ ಸಾಕಷ್ಟು ಜನಪರ ಯೋಜನೆಗಳು ಕಾರ್ಯಗತಗೊಳಿಸಲ್ಪಟ್ಟಿವೆ; ಹೆಚ್ಚಿನ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂಬುದು ಸ್ಪಷ್ಟ. ಆದರೆ, ಅತ್ಯಂತ ಖೇದದ ಮಾತೆಂದರೆ, ಯಾವ ಪಕ್ಷವೇ ಅಧಿಕಾರದಲ್ಲಿರಲಿ, ಕಳೆದ ೫೦ ವರ್ಷಗಳಲ್ಲಿ ವ್ಯವಸ್ಥಿತವಾಗಿ ಎಲ್ಲಾ ಸರಕಾರಗಳೂ ಅತೀವ ನಿರ್ಲಕ್ಷ್ಯದಿಂದ ಕಂಡಿರುವ ಒಂದು ಕ್ಷೇತ್ರವೆಂದರೆ 'ಶಿಕ್ಷಣ' ಕ್ಷೇತ್ರ; ಅಲಕ್ಷ್ಯಕ್ಕೊಳಗಾದ ಒಂದು ಸಮುದಾಯವೆಮದರೆ 'ಶಿಕ್ಷಕ' ಸಮುದಾಯ. ಆದ್ದರಿಂದ, ಈ ಕಿರು ಲೇಖನದಲ್ಲಿ ನಾನು ನನ್ನ ಚರ್ಚೆಯನ್ನು ಶಿಕ್ಷನ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿಕೊಂಡು, ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಈ ಕ್ಷೇತ್ರದಲ್ಲಿ ಬೇರೂರಿರುವ ಸಮಸ್ಯೆಗಳನ್ನು ಓದುಗರ ಗಮನಕ್ಕೆ ತರಲು ಪ್ರಯತ್ನಿಸಿದ್ದೇನೆ.

ಶಿಕ್ಷಣ:

ಅ) ಉಚ್ಚ ಶಿಕ್ಷಣ:

೧) ಶಿಕ್ಷಕರು: ಕಳೆದ ಹನ್ನೆರಡು ವರ್ಷಗಳಿಂದ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ/ಕಾಲೇಜುಗಳಲ್ಲಿ (ಬ್ಯಾಕ್‌ಲಾಗ್ ಹೊರತುಪಡಿಸಿ) ಶಿಕ್ಷಕರ ನೇಮಕಾತಿಯನ್ನು ಸರಕಾರ ಸಂಪೂರ್ಣವಾಗಿ ನಿಷೇಧಿಸಿದೆ. ಇದರ ಪರಿಣಾಮವಾಗಿ ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ, ಇಂದು ಕರ್ನಾಟಕದ ಒಂದು ವಿವಿಯಲ್ಲಿ ಆರು ಜನ ಶಿಕ್ಷಕರಿರಬೇಕಾದ ಒಂದು ವಿಭಾಗದಲ್ಲಿ ಒಬ್ಬರು ಮಾತ್ರ ಇದ್ದಾರೆ. ಇದೂ ಸೇರಿದಂತೆ ಹೆಚ್ಚಿನ ವಿವಿಗಳ ಅನೇಕ ವಿಭಾಗಗಳಲ್ಲಿ ಇಬ್ಬರು ಅಥವಾ ಮುವರು ಶಿಕ್ಷಕರು ಇದ್ದಾರೆ. ಈ ಪರಿಸ್ಥಿತಿಯಲ್ಲಿ ಎಂ.ಎ./ಎಂ.ಎಸ್.ಸಿ. ತರಗತಿಗಳಲ್ಲಿ ಎಂಟು ಅಥವಾ ಹತ್ತು ಕೋರ್ಸುಗಳ ಬೋಧನೆ ನಡೆಯುವುದಾದರೂ ಹೇಗೆ?

ಇದಕ್ಕೆ ಸರಕಾರದ ಉತ್ತರವೆಂದರೆ 'ಅತಿಥಿ ಶಿಕ್ಷಕ'ರನ್ನು (Guest Faculty) ನೇಮಿಸಿಕೊಳ್ಳ

ಕಾಲೇಜುಗಳಲ್ಲಿ. ಪೂರ್ಣಾವಧಿಯ ಈ ಅತಿಥಿ ಶಿಕ್ಷಕರಿಗೆ ಸರಕಾರವು ಕೊಡುವ ಗೌರವ ಧನ ತಿಂಗಳಿಗೆ ೨೦೦೦ (ಅಹುದು: ಎರಡು ಸಾವಿರ ಮಾತ್ರ). ಇನ್ನೂ ಮೋಜಿನ ಸಂಗತಿಯೆಂದರೆ, ಕಳೆದ ವರ್ಷದ ಈ 'ಸಂಭಾವನೆ'ಯನ್ನು ಇನ್ನೂ ಅವರಿಗೆ ಕೊಟ್ಟಿಲ್ಲ. ಇಷ್ಟು ಸಣ್ಣ ಮೊತ್ತಕ್ಕೆ ಅರ್ಹತೆಯಿರುವ ಯಾವ ಶಿಕ್ಷಕನು ಸಿಗುತ್ತಾನೆ? ಹೀಗಿದ್ದರೂ ಸೆಪ್ಟೆಂಬರ್ ೫ ರಂದು ಮಾತ್ರ ಎಲ್ಲರೂ ಶಿಕ್ಷಕನ ಮಹತ್ತರ ಸೇವೆಯನ್ನು ಕೊಂಡಾಡುವವರೆ!

೨) **ಪ್ರವೇಶ:** ಕಳೆದ ವರ್ಷ, ನಮ್ಮ ಘನ ಸರಕಾರ ಒಂದು ಭಯಂಕರ ಕ್ರಾಂತಿಕಾರಕ ನೀತಿಯನ್ನು ರೂಪಿಸಿತು: ಕರ್ನಾಟಕದಲ್ಲಿರುವ ಒಂಬತ್ತು ವಿ.ವಿ.ಗಳಲ್ಲಿಯೂ ಆಯಾಯ ವಿ.ವಿ.ಗಳ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಶಿಕ್ಷಣಕ್ಕಾಗಿ ನಿಗದಿಯಾಗಿರುವ ಸ್ಥಾನಗಳಲ್ಲಿ ಶೇಕಡಾ ೫೦ ಮಾತ್ರ ಲಭ್ಯ; ಉಳಿದ ಸ್ಥಾನಗಳಲ್ಲಿ ೪೦% ಕರ್ನಾಟಕದ ಇತರ ವಿ.ವಿ.ಗಳ ವಿದ್ಯಾರ್ಥಿಗಳಿಗಾಗಿ, ಮತ್ತು ೧೦% ಕರ್ನಾಟಕೇತರ ವಿದ್ಯಾರ್ಥಿಗಳಿಗಾಗಿ. ಈ ವರ್ಷವೇ ಜಾರಿಯಾಗಬೇಕಿದ್ದ ಈ ಆದೇಶ ಈಗ ಒಂದು ವರ್ಷ ಮುಂದೂಡಲ್ಪಟ್ಟಿದೆ.

ಈ ಶಾಸನವನ್ನು ರೂಪಿಸಿದವರಿಗೆ ವಿ.ವಿ.ಗಳ ಮೂಲಭೂತ ಕರ್ತವ್ಯಗಳ ಪ್ರಾಥಮಿಕ ಜ್ಞಾನವೂ ಇಲ್ಲ ಎಂಬುದು ಸ್ಪಷ್ಟ. ಒಂದು ಪ್ರದೇಶದಲ್ಲಿ ವಿ.ವಿ.ಯ ಸ್ಥಾಪನೆಗೆ ಕೊಡುವ ಮೊದಲ ಕಾರಣ ಹಾಗೂ ಸಮರ್ಥನೆಯೆಂದರೆ ಆ ಪ್ರದೇಶದ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣದ ಅವಶ್ಯಕತೆಯನ್ನು ಪೂರೈಸುವುದು. ಈ ಹೊಸ ನೀತಿಯಿಂದಾಗಿ, (ನಿದರ್ಶನಕ್ಕಾಗಿ) ಈ ವರೆಗೆ ಗುಲಬರ್ಗಾ ವಿ.ವಿ.ಯಲ್ಲಿಯೇ ಪ್ರವೇಶ ಪಡೆಯಬಹುದಾಗಿದ್ದ ಬೀದರ್-ಗುಲಬರ್ಗಾ ಪ್ರದೇಶದ ವಿದ್ಯಾರ್ಥಿಗಳು ಇನ್ನು ಮುಂದೆ ಮಂಗಳೂರು-ಬೆಂಗಳೂರು ವಿವಿ.ಗಳನ್ನು ಸೇರಬೇಕಾಗುತ್ತದೆ. ಇಷ್ಟು ದೂರ ಎಷ್ಟು ವಿದ್ಯಾರ್ಥಿಗಳು (ಹೆಚ್ಚಾಗಿ ವಿದ್ಯಾರ್ಥಿನಿಯರು) ಬಂದು ತಮ್ಮ ಶಿಕ್ಷಣವನ್ನು ಮುಂದುವರೆಸಲು ಇಚ್ಛಿಸುತ್ತಾರೆ? ಎಷ್ಟು ಜನ ಪೋಷಕರಿಗೆ ಕಾಲೇಜು ಹಾಸ್ಟೆಲ್‌ಗಳ ಫೀಸು ಕೊಡುವಷ್ಟು ಆರ್ಥಿಕ ಸಾಮರ್ಥ್ಯವಿರುತ್ತದೆ?

ಪ್ರಾಯಃ, ಉಚ್ಚ ಶಿಕ್ಷಣದ ಹಕ್ಕು ಕೇವಲ ಶ್ರೀಮಂತರ ಮಕ್ಕಳಿಗೆ ಮಾತ್ರ ಎಂಬುದು ಸರಕಾರದ ನಿಲುವಾಗಿರಬಹುದು.

೩) **ಶೈಕ್ಷಣಿಕ ಮಂಡಳಿ (Academic Council)** : ಒಂದು ವಿ.ವಿ.ಯಲ್ಲಿ, ಎಲ್ಲಾ ಬಗೆಯ ಶೈಕ್ಷಣಿಕ ವಿಷಯಗಳಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವಿರುವುದು ಆಯಾಯಾ ವಿ.ವಿ.ಗಳ 'ಶೈಕ್ಷಣಿಕ ಮಂಡಳಿ'ಗಳಿಗೆ. ಪ್ರತಿಯೊಂದು ವಿಷಯದ ಸಿಲಬಸ್, ಪತ್ರಗಳು, ಪರೀಕ್ಷಾ ವಿಧಾನ, ಪ್ರವೇಶ ನೀತಿ, ಇತ್ಯಾದಿಗಳೆಲ್ಲವೂ ದೀರ್ಘ ಚರ್ಚೆಗೆ ಒಳಗಾಗುವುದು ಈ ಸಭೆಯಲ್ಲಿಯೇ. ಕಾರಣ, ವಿ.ವಿಯ ಎಲ್ಲಾ ವಿಭಾಗಗಳ ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು ಮತ್ತು ಶಿಕ್ಷಕರಿಂದಲೇ ಚುನಾಯಿಸಲ್ಪಟ್ಟ ಶಿಕ್ಷಕರು ಈ ಸಭೆಯ ಸದಸ್ಯರಾಗಿರುತ್ತಾರೆ (ಅಥವಾ ಆಗಿರುತ್ತಿದ್ದರು).

ಆದರೆ, ಐದು ವರ್ಷಗಳ ಹಿಂದೆ (೨೦೦೦) ಕರ್ನಾಟಕ ವಿಶ್ವವಿದ್ಯಾನಿಲಯಗಳ ಶಾಸನಕ್ಕೆ ಆಗಿನ ಸರಕಾರವು ತಂದ ತಿದ್ದುಪಡಿಗಳಿಂದಾಗಿ, ವಿ.ವಿ.ಯ ಮೂರು ಅಂಗಗಳಲ್ಲಿ ಒಂದಾದ ಸೆನೆಟ್ ರದ್ದಾಯಿತು; ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಯಲ್ಲಿ ಚುನಾವಣೆಗಳೇ ರದ್ದಾಗಿ ಕೇವಲ ನಾಮಕರಣಗೊಂಡ ಸದಸ್ಯರು ಬರುವಂತಾಯಿತು; ಮತ್ತು ವಿ.ವಿ.ಯ ಪ್ರಾಧ್ಯಾಪಕ/ವಿಭಾಗ ಮುಖ್ಯಸ್ಥರ ಸಂಖ್ಯೆ ಗಣನೀಯವಾಗಿ ಕಮ್ಮಿಯಾಯಿತು. ಎಲ್ಲಾ ವಿಭಾಗಗಳೂ ಸೇರಿದಂತೆ ಕೇವಲ ಐವರು ಪ್ರಾಧ್ಯಾಪಕರು/ವಿಭಾಗ ಮುಖ್ಯಸ್ಥರು ಸಭೆಯಲ್ಲಿ ಸರದಿ ಪ್ರಕಾರ ಸದಸ್ಯತ್ವವನ್ನು ಪಡೆಯುವಂತಾಯಿತು; ಇತರ ಸದಸ್ಯರೆಲ್ಲರೂ ಶಾಸಕರು, ಅಧಿಕಾರಿಗಳು, ಮತ್ತು ಸರಕಾರದಿಂದ ನಾಮಕರಣಗೊಂಡವರು.

ಪರಿಣಾಮತಃ, ಇಂದು ಯಾವ ಶೈಕ್ಷಣಿಕ ಮಂಡಳಿಯಲ್ಲಿಯೂ ದೀರ್ಘ ಚರ್ಚೆಗಳು ನಡೆಯುವ ಸಾಧ್ಯತೆಯೇ ಇಲ್ಲ. ಸಭೆಯಲ್ಲಿ ಇರುವ ಐದು ಜನ ಶಿಕ್ಷಕರಿಗೆ ತಮ್ಮದಲ್ಲದ ಇತರ ವಿಷಯಗಳ ಸಿಲಬಸ್, ಪತ್ರಗಳು, ಇತ್ಯಾದಿಗಳ ಬಗ್ಗೆ ಅಧಿಕಾರಯುತವಾಗಿ ಚರ್ಚೆ ಮಾಡುವ ಪರಿಣತಿ ಇರುವುದಿಲ್ಲ ಸಾಧ್ಯವಿಲ್ಲ. (ಎಲ್ಲರಿಗೂ ತಿಳಿದಿರುವಂತೆ ಒಂದು ವಿವಿಯಲ್ಲಿ ಕನಿಷ್ಠ ಪಕ್ಷ ೨೦ ರಿಂದ ೩೫-೪೦ ವಿಷಯ - ವಿಭಾಗಗಳಿರುತ್ತವೆ). ಆದ್ದರಿಂದ, ಎಲ್ಲಾ ಸಭೆಗಳೂ ಯಾಂತ್ರಿಕವಾಗಿ 'ಅಸ್ತು' ಎನ್ನುವಲ್ಲಿಗೆ ಮುಗಿಯುತ್ತವೆ.

ಚುನಾವಣೆಗಳ ರದ್ದತಿ, ಹೆಚ್ಚಿನ ಪ್ರಾಧ್ಯಾಪಕರ ಸದಸ್ಯತ್ವ ಕಡಿತ, ನಾಮಕರಣಗೊಂಡ ಸದಸ್ಯತ್ವ - ಇವೆಲ್ಲವುಗಳ ಹಿಂದೆ ಇರುವ ಸರಕಾರದ ಉದ್ದೇಶ ಸ್ಪಷ್ಟ: ತಾತ್ತ್ವಿಕ ನೆಲೆಯಲ್ಲಿ ಸ್ವಯಮಾಡಳಿತ ಅಧಿಕಾರವನ್ನು

ಹೊಂದಿರುವ ವಿವಿಗಳ ಎಲ್ಲಾ ಸಂಸ್ಥೆಗಳ ಮೇಲೆ ತನ್ನ ಸಂಪೂರ್ಣ ಒಡೆತನವನ್ನು ಸ್ಥಾಪಿಸುವುದು: ಮತ್ತು ಅವುಗಳನ್ನು ಇತರ ಕ್ಷೇತ್ರಗಳ ಮಂಡಳಿ–ನಿಗಮಗಳಂತೆ ಅತೃಪ್ತ ಶಾಸಕರಿಗೆ ಯಾವುದಾದರೂ ಸ್ಥಾನ ಕಲ್ಪಿಸುವ ಸ್ಥಳಗಳಂತೆ ಪರಿವರ್ತಿಸುವುದು. ಸರಕಾರದ ಈ ನೀತಿ ಎಷ್ಟು ಸ್ಫೋಟಕವಾಗಬಲ್ಲದು ಎಂಬುದಕ್ಕೆ ಒಂದು ನಿದರ್ಶನವೆಂದರೆ, ಸರಕಾರವು ಬೆಂಗಳೂರು ವಿವಿಯ ಸಿಂಡಿಕೇಟ್ ಸದಸ್ಯರಾಗಿ ನಾಮಕರಣ ಮಾಡಿದವರನ್ನು ಸದಸ್ಯರನ್ನಾಗಿ ಒಪ್ಪಿಕೊಳ್ಳಲು ಹಿಂದಿನ ಕುಲಪತಿಗಳು ನಿರಾಕರಿಸಿದುದು; ಮತ್ತು ಆ ಕಾರಣದಿಂದ ಶಾಸನವನ್ನು ಮತ್ತೆ ತಿದ್ದುಪಡಿ ಮಾಡಲು ಸರಕಾರ ಪ್ರಯತ್ನಿಸಿದುದು.

೪) ಸಂಪನ್ಮೂಲಗಳು: ಕಳೆದ ಒಂದು ದಶಕದಿಂದ ಸರಕಾರವು ಕಾಲೇಜು–ವಿ.ವಿ.ಗಳಿಗೆ ನೀಡುತ್ತಿರುವ ಅನುದಾನವನ್ನು ಆದಷ್ಟೂ ಕಡಿಮೆ ಮಾಡುತ್ತಾ, 'ನಿಮ್ಮ ಸಂಪನ್ಮೂಲಗಳನ್ನು ನೀವೇ ರೂಢಿಸಿಕೊಳ್ಳಿ' ಎಂದು ಅವುಗಳಿಗೆ ಉಪದೇಶ ನೀಡುತ್ತಿದೆ; ಮತ್ತು 'ಆರ್ಥಿಕ–ಸ್ವಾಯತ್ತತೆಯುಳ್ಳ' (Self-financing) ವಿಷಯ ವಿಭಾಗಗಳಿಗೆ ಉತ್ತೇಜನ ನೀಡುತ್ತಿದೆ. ಈ ನೀತಿಯಿಂದಾಗುತ್ತಿರುವ ಪರಿಣಾಮಗಳೇನು?

ಈ ನೀತಿಯಿಂದ ಮೊದಲು ಪೆಟ್ಟು ಬೀಳುವುದು ಭಾಷಾ ವಿಭಾಗಗಳಿಗೆ ಮತ್ತು ಅನಂತರ ಇಡಿಯಾಗಿ ಅಮಾನವಿಕ ವಿಭಾಗಗಳಿಗೆ; ಮತ್ತು ಇದು ಎರಡು ನೆಲೆಗಳಲ್ಲಿ ಆಗುತ್ತದೆ: ಕಾಲೇಜುಗಳ ನೆಲೆಯಲ್ಲಿ ಹೆಚ್ಚಿನ ಫೀಸ್ ಕೊಟ್ಟು ವಿದ್ಯಾರ್ಥಿಗಳು ಸೇರುವುದಾದರೆ ಅದು ಕಂಪ್ಯೂಟರ್ ತರಬೇತಿಯಂತಹ 'ವೃತ್ತಿಪರ' ವಿಭಾಗಗಳಿಗೆ. ಆದ್ದರಿಂದ, ವಿದ್ಯಾರ್ಥಿಗಳನ್ನು ತಮ್ಮ ವಿಭಾಗಗಳಿಗೆ ಆಕರ್ಷಿಸಲು ಭಾಷಾ ವಿಭಾಗಗಳು 'ಭಾಷೆ–ಸಾಹಿತ್ಯ'ಗಳ ವ್ಯಾಸಂಗಕ್ಕೆ ಬದಲು 'ವ್ಯಾವಹಾರಿಕ ಭಾಷೆ' 'ಸಂವಹನ ಮಾಧ್ಯಮವಾಗಿ ಭಾಷೆ', (Business English/Kannada/Hindi...; Communicative English/Kannada/Hindi,...) ಇತ್ಯಾದಿಗಳನ್ನು ಪ್ರಾರಂಭಿಸುತ್ತದೆ. ಈಗಾಗಲೇ, ಐಚ್ಛಿಕ ಕನ್ನಡ/ಇಂಗ್ಲೀಷ್/ಇತಿಹಾಸ/ತತ್ವಜ್ಞಾನ/ಸಮಾಜಶಾಸ್ತ್ರ/ಭಾಷಾ ಶಾಸ್ತ್ರ ಇತ್ಯಾದಿ ವಿಷಯಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಗಮನೀಯವಾಗಿ ಕಮ್ಮಿಯಾಗಿದೆ. ಕಾಲೇಜುಗಳಲ್ಲಿ ಐಚ್ಛಿಕ ಕನ್ನಡ, ಐಚ್ಛಿಕ ಇಂಗ್ಲೀಷ್, ಐಚ್ಛಿಕ ಇತಿಹಾಸ, ಇವುಗಳನ್ನು ವ್ಯಾಸಂಗ ಮಾಡುವವರ ಸಂಖ್ಯೆ ಕಮ್ಮಿಯಾದ ಹಾಗೆ, ವಿ.ವಿ.ಗಳ ಈ ವಿಭಾಗಗಳಲ್ಲಿಯೂ ಎಂ.ಎ. ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳು ಇನ್ನೂ ಕಮ್ಮಿಯಾಗುತ್ತಾರೆ. ಇದೇ ಪರಿಸ್ಥಿತಿ ಮುಂದುವರೆದರೆ, ಮುಂದಿನ ಎರಡು ದಶಕಗಳಲ್ಲಿ ಎಲ್ಲಾ ವಿ.ವಿ.ಗಳಲ್ಲಿಯೂ ಭಾಷಾ ವಿಭಾಗಗಳು ಮತ್ತು ಅನೇಕ ಮಾನವಿಕ ವಿಭಾಗಗಳು ಮುಚ್ಚಲ್ಪಡುತ್ತವೆ. ಇನ್ನು, ಉನ್ನತ ಮಟ್ಟದ ಸಂಶೋಧನೆ–ಅಧ್ಯಯನಗಳು ನಡೆಯುವುದಾದರೂ ಎಲ್ಲಿ?

ಪ್ರಾಥಮಿಕ ಶಿಕ್ಷಣ:

೧) ಶಿಕ್ಷಕರು: ಮೊನ್ನೆ ಮೊನ್ನೆ (ಪತ್ರಿಕೆಗಳಲ್ಲಿ ವರದಿಯಾದಂತೆ) ನಮ್ಮ ಮಾನ್ಯ ವಿದ್ಯಾಮಂತ್ರಿಗಳು ನಮ್ಮ ಶಾಲೆಗಳಲ್ಲಿ ೧೩೦೦೦ ಶಿಕ್ಷಕರ ಕೊರತೆ ಇದೆಯೆಂದು ಮತ್ತು ಆದಷ್ಟು ಬೇಗ ಈ ಕೊರತೆಯನ್ನು ತುಂಬಲು ತಾವು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿಯೂ ಘೋಷಿಸಿದರು. ಇದೇ ಆಶ್ವಾಸನೆಯನ್ನು (ಮತ್ತು ಇದೇ ಸಂಖ್ಯೆಯನ್ನು) ನಾವು ಕಳೆದ ಹತ್ತು ವರ್ಷಗಳಿಂದಲು ಕೇಳುತ್ತಿದ್ದೇವೆ – ಹೇಳಿಕೆ ಕೊಡುವ ಮಂತ್ರಿಗಳು ಬೇರೆ ಬೇರೆ, ಅಷ್ಟೇ. ಈ ಪರಿಸ್ಥಿತಿಗೆ ಕಾರಣ ಅರ್ಹ ವ್ಯಕ್ತಿಗಳಿಲ್ಲ ಎಂಬುದಲ್ಲ – ಈಗಲೂ ಈ ಸ್ಥಾನಕ್ಕಾಗಿ ಅರ್ಜಿ ಗುಜರಾಯಿಸಿ, ಪರೀಕ್ಷೆಗಳನ್ನು ಎದುರಿಸಿ, ಕಾಯುತ್ತಿರುವ ಸಾವಿರಾರು ತರುಣ–ತರುಣಿಯರಿದ್ದಾರೆ. ಮಂತ್ರಿಗಳು/ಅಧಿಕಾರಿಗಳು ಕೊಡುವ ಕಾರಣವೆಂದರೆ 'ಸರಕಾರದ ಬಳಿ ಹಣವಿಲ್ಲ'.

ಇದೊಂದು ವಿಚಿತ್ರ ಹಾಗೂ ಅರ್ಥವಾಗದ ಪರಿಸ್ಥಿತಿ. ಶಾಸಕರು ಪತ್ನಿ/ಪತಿ – ಪುತ್ರ/ಪುತ್ರಿ ಸಮೇತರಾಗಿ ಪ್ರವಾಸ ಕೈಗೊಳ್ಳಲು ಇದೇ ಸರಕಾರ ವಿಮಾನಯಾನದ ಸೌಲಭ್ಯವನ್ನೂ ಕಲ್ಪಿಸಿಕೊಡುತ್ತದೆ; ಸಿ.ಇ.ಟಿ. ಸಂದರ್ಭದಲ್ಲಿ ಹೆಚ್ಚಿನ ಫೀಸಿನ ಒಂದು ಭಾಗವನ್ನು ಸರಕಾರವೇ ವಹಿಸಲು ಮುಂದಾದಾಗ, (ಪತ್ರಿಕೆಗಳಲ್ಲಿ ವರದಿಯಾದಂತೆ) ವಿತ್ತ ಮಂತ್ರಿಗಳು ಹೀಗೆ ಘೋಷಿಸುತ್ತಾರೆ: 'ವಾರ್ಷಿಕ ೫೨೦೦ ಕೋಟಿಗಳ ಬಜೆಟ್ಟಿನಲ್ಲಿ ಈ ಕಾರಣಕ್ಕಾಗಿ ೧೭೦ ಕೋಟಿ ಖರ್ಚು ಮಾಡುವುದು ಸರಕಾರಕ್ಕೇನೂ ಕಷ್ಟವಲ್ಲ'. ಇದರರ್ಥ, ಶಾಲಾ ಕಾಲೇಜು – ವಿವಿಗಳ ಶಿಕ್ಷಕರ ಸ್ಥಾನವನ್ನು ತುಂಬಲು ಮಾತ್ರ ಸರಕಾರದಲ್ಲಿ ಆರ್ಥಿಕ ಕೊರತೆಯಿದೆ.

ಈ ಬಗೆಯ ಅಗಾಧ ಶಿಕ್ಷಕರ ಕೊರತೆಗೆ ಪೂರಕವೆಂಬಂತೆ ಪ್ರಾಥಮಿಕ ಶಿಕ್ಷಣದ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯೂ ಎದ್ದು ಕಾಣುತ್ತದೆ. ಶೇಕಡಾ ೫೦ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ; ತರಗತಿಗಳು ದೇವಸ್ಥಾನಗಳಲ್ಲಿ, ಛತ್ರಗಳಲ್ಲಿ, ಬೇಸಿಗೆ ಕಾಲದಲ್ಲಿ ಮರಗಳ ನೆರಳಿನಲ್ಲಿ

ನಡೆಯುತ್ತವೆ (ಒಮ್ಮೆ ಟಿ.ವಿ.ಯಲ್ಲಿ ನೋಡಿದ ಹೃದಯವಿದ್ರಾವಕ ದೃಶ್ಯವೆಂದರೆ ತರಗತಿಯೊಬ್ಬಳು ಶೌಚಾಲಯದಲ್ಲಿ ಮಕ್ಕಳ ತರಗತಿಯನ್ನು ನಡೆಸುತ್ತಿದ್ದುದು: ಕಾರಣ, ಆ ಶಾಲೆಗೆ ಬೇರೆ ಕಟ್ಟಡವಿಲ್ಲ) ಹಾಗೆಯೇ, ಕಪ್ಪು ಹಲಗೆಗಳಿಲ್ಲದ, ಶೌಚಾಲಯ–ಗ್ರಂಥಾಲಯಗಳಿಲ್ಲದ, ಮತ್ತು ಒಬ್ಬರೇ ಶಿಕ್ಷಕ/ಶಿಕ್ಷಕಿ ಇರುವ ನೂರಾರು ಸರಕಾರಿ ಶಾಲೆಗಳು ಕರ್ನಾಟಕದಲ್ಲಿ ಇವೆ. ಇಂತಹ ಪರಿಸ್ಥಿತಿಯಲ್ಲಿ, ಮಂತ್ರಿ–ಅಧಿಕಾರಿಗಳು ಇಂಗ್ಲೀಷ್ ಮೋಹವನ್ನು ಟೀಕಿಸುತ್ತಾ ಭಾಷಾಭಿಮಾನವನ್ನು ಬೋಧಿಸುವುದು, ಮತ್ತು ಬುದ್ಧಿಜೀವಿಗಳು ಅಮೇರಿಕಾದ ನವ ವಸಾಹತುಶಾಹಿಯಿಂದ ನಮ್ಮ ಮಹಾನ್ ಸಂಸ್ಕೃತಿಗೆ ಆಗುತ್ತಿರುವ ನಷ್ಟದ ಬಗ್ಗೆ ಭಾವುಕ ಭಾಷಣಗಳನ್ನು ಕೊಡುವುದು ಸಂಪೂರ್ಣ ಹೃದಯಹೀನತೆ ಎನಿಸಿಕೊಳ್ಳುತ್ತದೆ.

೨) ಇಂಗ್ಲೀಷ್ ಭಾಷೆಯ ಕಲಿಕೆ: ಇಂದು ನಮ್ಮ ರಾಜ್ಯದಲ್ಲಿ/ದೇಶದಲ್ಲಿ ಇಂಗ್ಲೀಷ್ ಭಾಷೆಗೆ ಇರಬೇಕಾದ ಸ್ಥಾನ–ಮಾನಗಳ ಬಗ್ಗೆ ಚಿಂತನೆ ನಡೆಯುತ್ತಿರುವುದು ಕರ್ನಾಟಕದಲ್ಲಿ ಮಾತ್ರ ಅಲ್ಲ: ಮೊದಲನೆಯ ತರಗತಿಯಿಂದಲೇ ಇಂಗ್ಲೀಷ್ ಭಾಷೆಯನ್ನು ಕಲಿಸಲು ಈಗಾಗಲೇ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕೇರಳ, ಮುಂತಾದ ರಾಜ್ಯಗಳು ತೀರ್ಮಾನಿಸಿವೆ. (ಇಂಗ್ಲೆಂಡ್‌ನೊಡನೆ ಅನೇಕ ದಶಕಗಳ ಕಾಲ ಯುದ್ಧ ಮಾಡಿದ ಮತ್ತು ಉಗ್ರ ಭಾಷಾಭಿಮಾನಿಯಾದ ಜರ್ಮನಿಯೂ ಕಳೆದೆರಡು ವರ್ಷಗಳಿಂದ ಇಂಗ್ಲೀಷ್ ಕಲಿಕೆಯನ್ನು ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಮಾಡಿದೆ.) ಕರ್ನಾಟಕ ಸರಕಾರ ಮಾತ್ರ ಈ ವಿಷಯದ ಬಗ್ಗೆ ತನ್ನ ನಿಲುವನ್ನು ಮತ್ತೆ ಮತ್ತೆ ಬದಲಾಯಿಸುತ್ತಲೇ ಇದೆ.

ಇಂಗ್ಲೀಷ್ ಕಲಿಕೆಯನ್ನು ಸಮರ್ಥಿಸುವವರು ಮತ್ತು ವಿರೋಧಿಸುವವರು ಇಬ್ಬರೂ ಹೇಳುವಂತೆ, ಇಂದು ಇಂಗ್ಲೀಷ್ ನಿಜವಾಗಿಯೂ 'ಪ್ರಭುತ್ವದ ಭಾಷೆ'ಯೇ ಆಗಿದ್ದರೆ, ಆ 'ಪ್ರಭುತ್ವ'ದ ಅವಕಾಶವನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನವಾಗಿ ನೀಡುವುದು ಸರಕಾರದ ಕರ್ತವ್ಯ. ಎಂಟು ವರ್ಷದೊಳಗಿನ ಮಕ್ಕಳಿಗೆ ಒಂದಲ್ಲ, ಮೂರು ಭಾಷೆಗಳನ್ನು ಏಕಕಾಲದಲ್ಲಿ ಕಲಿಯುವ ಅಗಾಧ ಭಾಷಾ ಸಾಮರ್ಥ್ಯ (linguistic competence) ಇದೆಯೆಂದು ಮನೋ–ಭಾಷಾ ವಿಜ್ಞಾನಿಗಳು ಹೇಳುತ್ತಾರೆ. ಆದರೆ,

ಅ) ಇಂಗ್ಲೀಷ್ ಭಾಷೆಯನ್ನು ಪ್ರಾಥಮಿಕ ಹಂತದಿಂದಲೇ ಕಲಿಸುವುದೆಂದರೆ, ಕನ್ನಡದ ಬದಲಿಗೆ ಅಲ್ಲ; ಕನ್ನಡದ ಜೊತೆಗೆ; ಆ) ಇಂಗ್ಲೀಷ್ ಅನ್ನು ಭಾಷೆಯಾಗಿ ಕಲಿಸುವುದೆಂದರೆ ಇಂಗ್ಲೀಷ್ ವ್ಯಾಕರಣ, ಲೇಖನ, ಅನುವಾದ ಇವುಗಳನ್ನು ಕಲಿಸುವುದಲ್ಲ; ಕೇವಲ ಓದುವ ಮತ್ತು ಸಂಭಾಷಣೆಯ ಕೌಶಲ್ಯಗಳನ್ನು ಕಲಿಸುವುದು; ಮತ್ತು, ಇ) ಅತಿ ಮುಖ್ಯವಾಗಿ, ಈ ದಿಕ್ಕಿನಲ್ಲಿ ವ್ಯಾಪಕ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು.

ಈಗಾಗಲೇ, ಮಂತ್ರಿ–ಅಧಿಕಾರಿಗಳೇ ಒಪ್ಪುವಂತೆ, ಸಾವಿರಾರು ಶಿಕ್ಷಕರ ಕೊರತೆಯಿರುವಾಗ, ಇನ್ನೂ ಒಂದು ವಿಷಯವನ್ನು (ಇಂಗ್ಲೀಷ್ ಭಾಷೆಯನ್ನು) ಪ್ರಾಥಮಿಕ ಶಿಕ್ಷಣದಲ್ಲಿ ಸೇರಿಸಿದರೆ, ಅದನ್ನು ಕಲಿಸುವವರು ಯಾರು? ಅವರಿಗಿರಬೇಕಾದ ಶೈಕ್ಷಣಿಕ ಅರ್ಹತೆಯೇನು? ಪಠ್ಯಕ್ರಮದಲ್ಲಿ ಅದಕ್ಕೆ ಎಷ್ಟು ಆದ್ಯತೆ ಕೊಡಬೇಕು? – ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡು ಕೊಳ್ಳದೆ, ಸುಮ್ಮನೆ ಒಂದು ದಿನ 'ಅಧಿಕೃತ ಆದೇಶ'ವನ್ನು ಹೊರಡಿಸಿದರೆ, ಅದಕ್ಕಿಂತ ಹೆಚ್ಚಿನ ದುರಂತ ಇನ್ನೊಂದಿಲ್ಲ.

ಪ್ರಾಥಮಿಕ ಹಂತದಿಂದಲೇ ಒಂದು ಭಾಷೆಯಂತೆ (ಮಾಧ್ಯಮದಂತಲ್ಲ) ಇಂಗ್ಲೀಷ್ ಕಲಿಕೆ ಪ್ರಾರಂಭವಾಗಬೇಕು. – ಸಂಪೂರ್ಣ ಪೂರ್ವ ಸಿದ್ಧತೆಯಾದ ನಂತರ, ಮೊದಲಿಗೆ, ಪ್ರಯೋಗದಂತೆ, ಒಂದೆರಡು ಜಿಲ್ಲೆಗಳಲ್ಲಿ ಪ್ರಾರಂಭಿಸಿ, ಅನಂತರ ಅಲ್ಲಿ ಪಡೆದ ಅನುಭವವನ್ನಾಧರಿಸಿ, ಇತರ ಜಿಲ್ಲೆಗಳಿಗೆ ಆ ಯೋಜನೆಯನ್ನು ವಿಸ್ತರಿಸಬಹುದು.

೩) ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ: ಸ್ವಾತಂತ್ರ್ಯಾನಂತರ (೧೯೫೨ರಲ್ಲಿ ಮತ್ತು ಅಂದಿನ ರಾಷ್ಟ್ರಪತಿಗಳಾಗಿದ್ದ ರಾಜೇಂದ್ರ ಪ್ರಸಾದ್ ಅವರ ಆಸಕ್ತಿಯ ಕಾರಣದಿಂದ ಎಂದು ಒಂದು ಕಡೆ ಓದಿದ ನೆನಪು), ಆಧುನಿಕ ಕಾಲದಲ್ಲಿ 'ಮೃತ ಭಾಷೆ'ಗಳಂತಾಗಿದ್ದ ಸಂಸ್ಕೃತ, ಪಾಲಿ ಮತ್ತು ಪರ್ಶಿಯನ್ ಭಾಷೆಗಳನ್ನು ಉಳಿಸಲು ಭಾರತ ಸರಕಾರ ಅವುಗಳನ್ನು 'ಕ್ಲಾಸಿಕಲ್ ಲಾಂಗ್ವೇಜಸ್' ಎಂದು ಘೋಷಿಸಿ, ಅವುಗಳ ಅಧ್ಯಯನ ಮತ್ತು ಸಂಶೋಧನೆ ಇವುಗಳಿಗೆ ವಿಶೇಷ ಆರ್ಥಿಕ ನೆರವು ನೀಡುವ ನೀತಿಯನ್ನು ಅಳವಡಿಸಿಕೊಂಡಿತು. ಅಂದಿನಿಂದಲೂ ತಮಿಳು ಭಾಷಿಕರು ತಮ್ಮ ಭಾಷೆಗೂ ಆ ಸ್ಥಾನವನ್ನು ಕೊಡಬೇಕೆಂದು ಒತ್ತಾಯಿಸುತ್ತಿದ್ದರು. ೨೦೦೨ ನೆಯ ವರ್ಷದಲ್ಲಿ ಕ್ಯಾಲಿಫೋರ್ನಿಯಾ ವಿ.ವಿ.ಯಲ್ಲಿ ತಮಿಳು ಪೀಠದ ಪ್ರಾಧ್ಯಾಪಕರಾಗಿರುವ ಜಾರ್ಜ್ ಎಲ್. ಹಾರ್ಟ್ ಎಂಬುವವರಿಂದ ತಮಿಳಿಗೆ 'ಕ್ಲಾಸಿಕಲ್' ಭಾಷೆಯ ಸ್ಥಾನ ನೀಡುವಂತೆ ಅಂದಿನ ರಾಷ್ಟ್ರಪತಿಗಳಿಗೆ ಒಂದು ದೀರ್ಘ ಪತ್ರವನ್ನೂ ಬರೆಯಿಸಿದರು. ಆದರೆ, ಈ ಕೋರಿಕೆಗೆ

ನಿರ್ಣಾಯಕ ಘಟ್ಟ ಬಂದದ್ದು ಕೇಂದ್ರದಲ್ಲಿ ಯು.ಪಿ.ಎ. ಸರಕಾರಕ್ಕೆ ಡಿ.ಎಂ.ಕೆ. ಪಕ್ಷದ ನೆರವು ಅನಿವಾರ್ಯವಾದದ್ದರಿಂದ. ಒತ್ತಡಕ್ಕೆ ಮಣಿದು ೧೭-೦೯-೨೦೦೪ ರಲ್ಲಿ ಕೇಂದ್ರ ಸರಕಾರ ತಮಿಳನ್ನು 'ಕ್ಲಾಸಿಕಲ್ ಭಾಷೆ' ಎಂದು ಘೋಷಿಸಿತು. ಈ ಘೋಷಣೆಯ ಫಲವಾಗಿ ತಮಿಳಿಗೆ ಆಗುವ ಲಾಭವೆಂದರೆ ಕೇಂದ್ರ ಸರಕಾರವು ಸ್ಥಾಪಿಸುವ 'ವಿಶೇಷ ಅಧ್ಯಯನ ಕೇಂದ್ರ', ತಮಿಳು ವಿದ್ವಾಂಸರಿಗೆ ಸಿಗುವ ವಾರ್ಷಿಕ ಪ್ರಶಸ್ತಿ, ಮತ್ತು ವಿ.ವಿ.ಗಳಲ್ಲಿ 'ತಮಿಳು ಪೀಠ' ಸ್ಥಾಪನೆಗೆ ಅನುದಾನ. ಇಷ್ಟರಿಂದಲೇ, ಯುನೆಸ್ಕೋ ಇತ್ಯಾದಿ ಅಂತರಾಷ್ಟ್ರೀಯ ಸಂಸ್ಥೆಗಳೂ ತಮಿಳನ್ನು ಅಧಿಕೃತ ಭಾಷೆಯಂತೆ ಮಾನ್ಯತೆ ಕೊಡಬೇಕೆಂದೇನೂ ಇಲ್ಲ (ಇಷ್ಟಕ್ಕೂ ಯುನೆಸ್ಕೋ ಇತ್ಯಾದಿ ಸಂಸ್ಥೆಗಳ 'ಅಧಿಕೃತ' ಭಾಷೆಗಳಿಗೂ ಮತ್ತು ಭಾಷೆಗಳ 'ಕ್ಲಾಸಿಕಲ್' ಸ್ಥಾನಕ್ಕೂ ಯಾವ ಸಂಬಂಧವೂ ಇಲ್ಲ; ಅತ್ಯಂತ ಆಧುನಿಕ ಭಾಷೆಯಾದ ಫ್ರೆಂಚ್ ಯುನೆಸ್ಕೋ ಮಾನ್ಯ ಮಾಡಿರುವ ಭಾಷೆಗಳಲ್ಲಿ ಒಂದು).

ನಿಜ: ತಮಿಳನ್ನು 'ಕ್ಲಾಸಿಕಲ್' ಭಾಷೆ ಎಂದು ಘೋಷಿಸಲು ಯಾವ ಕಾರಣವೂ ಇಲ್ಲ; ಇಂದಿಗೂ ತಮಿಳು ಏಳು ಕೋಟಿಗಿಂತ ಹೆಚ್ಚಿನ ಜನರು ಉಪಯೋಗಿಸುವ ಜೀವಂತ ಭಾಷೆ. ಆದರೆ, ಇದರಿಂದಾಗಿ ಕನ್ನಡಕ್ಕೆ ಅನ್ಯಾಯವಾಗಿದೆ; ಇದು ಕನ್ನಡಿಗರ ಸ್ವಾಭಿಮಾನದ ಪ್ರಶ್ನೆ ಎಂದೇನೂ ನಾವು ಭಾವಿಸಬೇಕಾದ್ದಿಲ್ಲ. ಕನ್ನಡಕ್ಕೂ 'ಕ್ಲಾಸಿಕಲ್' ಭಾಷೆಯ ಸ್ಥಾನ ದೊರಕಿದರೆ ಸಂತೋಷ; ಇಲ್ಲದಿದ್ದರೆ. ಏನೂ ತುಂಬಲಾರದ ನಷ್ಟವಾಗುವುದಿಲ್ಲ.

ಈ ಲೇಖನವನ್ನು ಮುಗಿಸುವ ಮೊದಲು ಮೊದಲು ಒಂದು ಮಾತನ್ನು ಮತ್ತೆ ಹೇಳಬೇಕೆಂದೆನಿಸುತ್ತದೆ. ಪ್ರಜೆಗಳ ಶಿಕ್ಷಣ ಮತ್ತು ಸ್ವಾಸ್ಥ್ಯ ಇವುಗಳನ್ನು ತನ್ನ ಜವಾಬ್ದಾರಿಯೆಂದು ಪರಿಗಣಿಸದ, ಅವುಗಳಿಗೆ ಪ್ರಥಮ ಆದ್ಯತೆ ಕೊಡದ ಯಾವ ದೇಶವೂ/ಸಮಾಜವೂ ಅರ್ಥಪೂರ್ಣ ಪ್ರಗತಿ ಸಾಧಿಸುವುದು ಅಸಾಧ್ಯ ಮತ್ತು ಬಹು ಬೇಗ ಅಂತಹ ರಾಷ್ಟ್ರ ಇತರ ಶ್ರೀಮಂತ ರಾಷ್ಟ್ರಗಳ ಕೈಗೊಂಬೆಯಾಗಿ ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತದೆ. ಮುಂಡಕೋಪನಿಷತ್ತಿನಲ್ಲಿ ಬರುವ ಈ ಶ್ಲೋಕ ಈ ಸಂದರ್ಭದಲ್ಲಿ ಅರ್ಥಪೂರ್ಣವೆಂದು ತೋರುತ್ತದೆ: "ಅವಿದ್ಯಾಯಾಮಂತರೇ ವರ್ತಮಾನಾಃ । ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ ॥ ಜಘನ್ಯಮಾನಾಃ ಪರಿಯಾಂತಿ ಮೂಢಾಃ । ಅಂಧೇನೈವ ನೀಯಮಾನಾ ಯಥಾಂಧಾಃ ॥" ('ಅವಿದ್ಯೆಯ ಆಳದಲ್ಲಿ ಮುಳುಗಿರುವ ಅಜ್ಞಾನಿಗಳು ತಮ್ಮನ್ನು ಸ್ವತಃ ಬುದ್ಧಿವಂತರೆಂದು, ವಿದ್ವಾಂಸರೆಂದು ಭಾವಿಸುತ್ತಾರೆ. ಅಂತಹವರು ಅಂಧರಿಗೆ ದಾರಿ ತೋರುವ ಇತರ ಅಂಧರಂತೆ".

---

೮೯. ೩ನೇ ಮುಖ್ಯರಸ್ತೆ, ಡಾಲರ್ ಕಾಲೊನಿ, ಜೆ.ಪಿ. ನಗರ ೪ನೇ ಹಂತ, ಬೆಂಗಳೂರು ೫೬೦ ೦೭೮

❑

೧೦

ಕರ್ನಾಟಕದ ವಿದ್ಯಾರ್ಥಿಗಳು ಮತ್ತು ವಿದ್ಯಾವಂತ ಪದವೀಧರರು ದಡ್ಡರೇ?

ಬಿ.ವಿ. ಶ್ರೀನಾಥಶಾಸ್ತ್ರಿ

ಕರ್ನಾಟಕದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ರಾಜ್ಯದ ಬಹುಮಟ್ಟಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ನ್ಯಾಯ ದೊರಕುತ್ತಿಲ್ಲ ಎಂಬ ಸಮಸ್ಯೆಯು ವರ್ಷದಿಂದ ವರ್ಷಕ್ಕೆ ತೀವ್ರವಾಗುತ್ತಿದೆ. ಕರ್ನಾಟಕದಲ್ಲಿರುವ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಅನೇಕಾನೇಕ ಹೊರರಾಜ್ಯದ ವಿದ್ಯಾರ್ಥಿಗಳು ವಿಜೃಂಭಿಸುತ್ತಿದ್ದಾರೆ ಎಂಬುದು ಎಲ್ಲರ ಅನುಭವವಾಗಿದೆ. ಹಾಗಾದರೆ ನಮ್ಮ ವಿದ್ಯಾರ್ಥಿಗಳ ಗತಿ ಏನು? ಕರ್ನಾಟಕದಲ್ಲಿ ಹುಟ್ಟಿ ಬೆಳೆದ, ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕನ್ನಡಿಗ ವಿದ್ಯಾರ್ಥಿಗಳು, ಬಹುಮುಖ್ಯವಾಗಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಬೇರೆ ರಾಜ್ಯದ ವಿದ್ಯಾರ್ಥಿಗಳಿಗಿಂತ ದಡ್ಡರೇ? ಇಲ್ಲಿನ ಕಾಲೇಜುಗಳಿಗೆ ಪ್ರವೇಶ ವಿಧಾನದ ಔದಾರ್ಯ, ಅವುಗಳಲ್ಲಿನ ಅತ್ಯುತ್ತಮ ವಿದ್ಯಾಭ್ಯಾಸ

ಮುಂತಾದವುಗಳು ಇತರ ರಾಜ್ಯಗಳ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಮುಗಿಬೀಳಲು ಕಾರಣವಾಗಿವೆ. ಇಂತಹ ಪರಿಸ್ಥಿತಿಯು ಇತರ ರಾಜ್ಯಗಳಲ್ಲಿವೆಯೇ? ತಮಿಳುನಾಡು, ಕೇರಳ ಮುಂತಾಗಿ ಇತರ ರಾಜ್ಯಗಳಲ್ಲಿರುವ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಬೇರೆ ರಾಜ್ಯದ ವಿದ್ಯಾರ್ಥಿಗಳಿಗೆ ಇಲ್ಲಿನಷ್ಟು ಮುಕ್ತವಾಗಿ ಪ್ರವೇಶಾವಕಾಶ ನೀಡಲಾಗುತ್ತಿದೆಯೇ? ಖಂಡಿತವಾಗಿಯೂ ಇಲ್ಲ ಎಂಬುದೇ ಉತ್ತರವಾಗಿದೆ. ಇಲ್ಲಿನ ಕಾಲೇಜುಗಳಲ್ಲಿನ ಅತ್ಯುತ್ತಮ ವಿದ್ಯಾಭ್ಯಾಸ, ಸೌಕರ್ಯಗಳಿಗೆ ಗೌರವ ನೀಡಿ ಕರ್ನಾಟಕ ಸರ್ಕಾರವು ನಡೆಸುವ ಸಿ.ಇ.ಟಿ.ಗೆ ಇತರ ರಾಜ್ಯಗಳ ವಿದ್ಯಾರ್ಥಿಗಳು ಏಕೆ ಹಾಜರಾಗಬಾರದು? ಇಲ್ಲಿನ ಕಾಲೇಜುಗಳು ಏಕೆ ಪ್ರತ್ಯೇಕವಾಗಿ ಪ್ರವೇಶ ಪರೀಕ್ಷೆಗಳನ್ನು ನಡೆಸಬೇಕು? ನಡೆಸಿದರೂ ಅದನ್ನು ಕರ್ನಾಟಕದವರಿಗೇ ಏಕೆ ಸೀಮಿತಗೊಳಿಸಬಾರದು? ಇತರ ರಾಜ್ಯದವರಿಗೇಕೆ ಮಣೆ ಹಾಕಿ ಕರೆಯಬೇಕು? ಇಂತಹ ಕಾಲೇಜುಗಳ ಆಡಳಿತ ವರ್ಗ ಹಾಗೂ ಪ್ರಾಧ್ಯಾಪಕ ವರ್ಗಗಳಲ್ಲಿ ಕನ್ನಡವನ್ನೂ, ಕನ್ನಡಿಗರನ್ನೂ ಗಣನೆಗೆ ತೆಗೆದುಕೊಳ್ಳದ ವ್ಯಕ್ತಿಗಳು ಮತ್ತು ಅನ್ಯಭಾಷೀಯ, ಅನ್ಯರಾಜ್ಯದ ವ್ಯಕ್ತಿಗಳು ತುಂಬಿಕೊಂಡಿದ್ದಾರೆಯೇ? ಇವುಗಳನ್ನು ಪ್ರಶ್ನಿಸದಿರುವ ಉದಾರತೆಯೇ ಕನ್ನಡಿಗರಿಗೆ ಮುಳುವಾಗುತ್ತಿದೆ.

ಮುಂದುವರೆದು, ಅತ್ಯುತ್ತಮ ಮಟ್ಟದ, ದೇಶದ ಎಲ್ಲೆಡೆಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುವ ಕರ್ನಾಟಕದ ಕಾಲೇಜುಗಳಲ್ಲಿ ಉತ್ತೀರ್ಣರಾದ, ಕರ್ನಾಟಕದಲ್ಲೇ ಹುಟ್ಟಿ ಬೆಳೆದ ಕನ್ನಡಿಗರಾದ ಪದವೀಧರರಿಗೆ ಕರ್ನಾಟಕದಲ್ಲೇ ಉದ್ಯೋಗಾವಕಾಶಗಳು ಏಕೆ ದೊರೆಯುತ್ತಿಲ್ಲ? ಇಲ್ಲಿನ ಅತ್ಯುತ್ತಮ ಮಟ್ಟದ ಕಾಲೇಜುಗಳಲ್ಲಿ ಓದಿ ಉತ್ತೀರ್ಣರಾದ ಕರ್ನಾಟಕದ ಪದವೀಧರರಿಗೆ ಇಲ್ಲಿನ ಐಟಿ, ಬಿಟಿ, ಕಂಪನಿಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿ ಹೆಚ್ಚಿನ ಕೆಲಸಗಳು ಏಕೆ ಸಿಗುತ್ತಿಲ್ಲ? ಇಸ್ರೋ, ಎಚ್.ಪಿ., ವಿಪ್ರೋ, ಬಿ.ಇ.ಎಲ್. ಎಚ್.ಎ.ಎಲ್., ಎನ್.ಎ.ಎಲ್., ಎ.ಡಿ.ಎ., ಎ.ಡಿ.ಇ. ಮುಂತಾದ ಸಂಸ್ಥೆಗಳು, ಡಿ.ಆರ್.ಡಿ.ಓ. ಸಂಸ್ಥೆಗಳು, ಭಾರತೀಯ ವಿಜ್ಞಾನ ಸಂಸ್ಥೆ ಮುಂತಾದ ವೈಜ್ಞಾನಿಕ ಸಂಸ್ಥೆಗಳು, ಬ್ಯಾಂಕುಗಳು, ಹೀಗೆ ಕರ್ನಾಟಕದ ಎಲ್ಲ ಕೇಂದ್ರಾಡಳಿತ, ರಾಜ್ಯಾಡಳಿತ ಮತ್ತು ಖಾಸಗಿ ಔದ್ಯೋಗಿಕ ಸಂಸ್ಥೆಗಳಲ್ಲಿ ಇತರ ರಾಜ್ಯಗಳಿಂದ ಬಂದವರು ಧಾರಾಳವಾಗಿ ಕೆಲಸಗಳನ್ನು ಪಡೆಯುತ್ತಿದ್ದಾರೆ; ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿನ ಪ್ರತಿಭಾವಂತರಿಗೆ, ಅಷ್ಟೇಕೆ ಕರ್ನಾಟಕದ ಯಾವುದೇ ಪ್ರತಿಭಾವಂತ ಯುವ ಪದವೀಧರರಿಗೆ ಉದ್ಯೋಗಕ್ಷೇತ್ರದಲ್ಲಿ ಸರಿಯಾದ ಅವಕಾಶಗಳೇ ದೊರಕುತ್ತಿಲ್ಲ. ಚಿತ್ರದುರ್ಗ, ಚಿಕ್ಕಮಗಳೂರು, ಬಳ್ಳಾರಿ, ಧಾರವಾಡ, ಶಿವಮೊಗ್ಗಾ ಮುಂತಾದ ಕಡೆಗಳಲ್ಲಿ ಇರುವ, ಒಟ್ಟಿನಲ್ಲಿ ಕರ್ನಾಟಕದ ಎಲ್ಲ ಕಡೆ ಇರುವ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗಮಾಡಿ, ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಪದವೀಧರರಾಗಿ ಬರುವ ಕರ್ನಾಟಕದ ಪದವೀಧರರಿಗೆ ಕರ್ನಾಟಕದಲ್ಲಿರುವ, ಬಹುಮುಖ್ಯವಾಗಿ ಬೆಂಗಳೂರಿನಲ್ಲಿ ಇರುವ ಖಾಸಗಿ/ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ಸ್ವಾಮ್ಯತೆಯ ಸಂಸ್ಥೆಗಳಲ್ಲಿ ಕೆಲಸವೇ ಇಲ್ಲದಂತಾಗಿದೆ ಎಂಬ ಸತ್ಯ ಕಂಡುಬರುತ್ತಿವೆ.

ಒಟ್ಟಿನಲ್ಲಿ ಇತರ ರಾಜ್ಯಗಳವರಿಗೆ ಇಲ್ಲಿನ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಬೇಕು; ಅದರಿಂದಾಗಿ ಪ್ರತಿವರ್ಷವೂ ಕರ್ನಾಟಕದ ಗ್ರಾಮೀಣ ಪ್ರದೇಶಗಳ ಸಹಸ್ರಾರು (ಪ್ರತಿವರ್ಷ ಸುಮಾರು ೮ ರಿಂದ ೧೦ ಸಾವಿರ) ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಲ್ಲಿನ ವೃತ್ತಿಶಿಕ್ಷಣ ಮತ್ತು ಇತರ ಪ್ರಮುಖ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶಾವಕಾಶಗಳು ಇಲ್ಲವಾಗುತ್ತಿವೆ. ಇಲ್ಲೇ ಹುಟ್ಟಿ ಬೆಳೆದ ಗ್ರಾಮಾಂತರದ ಬಹುಮುಖ್ಯವಾಗಿ ಹಿಂದುಳಿದ ವರ್ಗದ ಪ್ರತಿಭಾವಂತ ಪದವೀಧರರಿಗೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿ ಪ್ರವೇಶವಿಲ್ಲ ಎಂಬ ಈ ಎಲ್ಲ ವಾಸ್ತವ ಸಂಗತಿಗಳಿಗೆ ಪರಿಹಾರವೇನು? ನಿಜವಾಗಿ ಕರ್ನಾಟಕದ ವಿದ್ಯಾರ್ಥಿಗಳು ಮತ್ತು ಪದವೀಧರರು ಇತರ ರಾಜ್ಯಗಳ ವಿದ್ಯಾರ್ಥಿಗಳು ಮತ್ತು ಪದವೀಧರರಿಗಿಂತ ಬುದ್ಧಿವಂತಿಕೆಯಲ್ಲಿ ಹಿಂದುಳಿದಿದ್ದಾರೆಯೇ ಎಂಬ ಪ್ರಶ್ನೆಗಳು ಎಲ್ಲರನ್ನೂ ಕಾಡಿಸುತ್ತಿವೆ.

ತಮಿಳುನಾಡು ಮುಂತಾಗಿ ಇತರ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ವ್ಯಾಪ್ತಿಯ ಸಂಸ್ಥೆಗಳಲ್ಲಿ, ಆಯಾ ರಾಜ್ಯ ಸರ್ಕಾರಗಳ ಆಡಳಿತಕ್ಕೊಳಪಟ್ಟ ಸಂಸ್ಥೆಗಳಲ್ಲಿ, ಹೈದರಾಬಾದ್ ಮೂಲದ ಸತ್ಯಂ ಕಂಪ್ಯೂಟರ್ಸ್, ಕರ್ನಾಟಕದ ಇನ್‌ಫೋಸಿಸ್, ವಿಪ್ರೋ ಮುಂತಾದ ಎಲ್ಲ ರೀತಿಯ ಎಲ್ಲ ಸಂಸ್ಥೆಗಳ ವಿವಿಧ ರಾಜ್ಯಗಳ ಶಾಖೆಗಳಲ್ಲಿ (ಕರ್ನಾಟಕವನ್ನು ಬಿಟ್ಟು) ಸಹಜವಾಗಿಯೇ ಅಲ್ಲಿನವರೇ ಹೆಚ್ಚು ಅವಕಾಶಗಳನ್ನು ಪಡೆಯುತ್ತಿದ್ದಾರೆ ಎಂಬುದನ್ನು ನಾವು ಗಮನಿಸಬೇಕು. ಈ ವ್ಯವಸ್ಥೆ ಕರ್ನಾಟಕದಲ್ಲಿ ಮಾತ್ರ ಇಲ್ಲ. ಇಲ್ಲಿನ ಈ ಎಲ್ಲಾ ಸಂಸ್ಥೆಗಳಲ್ಲಿ ಪರರಾಜ್ಯದ ಪದವೀಧರರೇ ವಿಜೃಂಭಿಸುತ್ತಿದ್ದಾರೆ. ಕರ್ನಾಟಕದ ವಿದ್ಯಾವಂತ ಹಾಗೂ ಪ್ರತಿಭಾವಂತ ಪದವೀಧರರಿಗೆ ಇಂತಹ ಅವಕಾಶಗಳು ಏಕೆ ದೊರೆಯುತ್ತಿಲ್ಲ.

ಇದು ಕರ್ನಾಟಕದ ಪದವೀಧರರಿಗೆ ದ್ರೋಹಬಗೆದಂತಲ್ಲವೇ? ಇವೆಲ್ಲವೂ ಯಕ್ಷಪ್ರಶ್ನೆಯಾಗಿ ಕುಳಿತಿವೆ. ಈ ವಿಷಯವನ್ನು ಕುರಿತು ವಿವಿಧ ಸಂಸ್ಥೆಗಳಲ್ಲಿರುವ ಕನ್ನಡ ಸಂಘ ಸಂಸ್ಥೆಗಳು, ಕನ್ನಡ ಹೋರಾಟಗಾರರು ಪದೇ ಪದೇ ತಮ್ಮ ನೋವನ್ನು ತೋಡಿಕೊಳ್ಳುತ್ತಿದ್ದಾರೆ. ಇವುಗಳನ್ನು ಗಮನಿಸಿಯೇ ಕರ್ನಾಟಕಾದ್ಯಂತ ವಿವಿಧ ಸಂಘ ಸಂಸ್ಥೆಗಳು, ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗದವರು ಹಾಗೂ ಕನ್ನಡ ಮತ್ತು ಕರ್ನಾಟಕದ ಹಿತಾಸಕ್ತಿಯನ್ನು ಉದ್ದೇಶವಾಗಿ ಇಟ್ಟುಕೊಂಡಿರುವ ವಿವಿಧ ಸಂಘಟನೆಗಳು ನ್ಯಾಯವಾದ ಪ್ರತಿಭಟನೆ ಮಾಡುತ್ತಿದ್ದಾರೆ. ಆದರೆ ಇದಕ್ಕೆಲ್ಲಾ ಉತ್ತರವಾಗಿ ಇವೆಲ್ಲಾ ಅಪಸ್ವರಗಳು, ಅತಿರೇಕದ ಮಾತುಗಳು; ಏಕೆಂದರೆ ಕೆಲಸವು ಯಾರದೇ ಸ್ವತ್ತಲ್ಲ. ಯಾವುದೇ ಸಂಸ್ಥೆಯಾದರೂ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಹಾಗೂ ಮುಂದುವರೆಯಬೇಕಾದರೆ ಬಹುಮುಖ್ಯವಾಗಿ ಪದವಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳಿಸಿದ ಹಾಗೂ ಸಂಸ್ಥೆಯವರೇ ಏರ್ಪಡಿಸುವ ಲಿಖಿತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ, ಇಂಟರ್‌ವ್ಯೂಗಳಲ್ಲಿ ಚೆನ್ನಾಗಿ ಉತ್ತರಿಸುವ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಅಂತಹ ಸಂಸ್ಥೆಗಳ ಮುಖ್ಯಸ್ಥರು ಸ್ಪಷ್ಟವಾಗಿ ಹೇಳಿಯೂ ಇದ್ದಾರೆ. ಈ ಮಾತುಗಳನ್ನು ಯಾರು ಅಲ್ಲಗಳೆಯುವ ಹಾಗಿಲ್ಲ. ಅಂದರೆ ಕರ್ನಾಟಕದ ಯುವ ಪದವೀಧರರು, ಇಲ್ಲಿನ ಹಿಂದುಳಿದ ವರ್ಗದವರು ದೇಶದ ಉಳಿದೆಲ್ಲ ವಿದ್ಯಾವಂತರಿಗಿಂತ ದಡ್ಡರೇ? ಅವರು ಬುದ್ಧಿವಂತಿಕೆಯಲ್ಲಿ ಹಿಂದುಳಿದಿದ್ದಾರೆಯೇ? ಅವರ ಆಲೋಚನಾ ಶಕ್ತಿ ಕುಂಠಿತವೇ ಎಂಬ ಪ್ರಶ್ನೆಗಳು ಸಹಜವಾಗಿಯೇ ಮೂಡುತ್ತವೆ. ಇಲ್ಲವೆಂದರೆ ಅವರು ಎಲ್ಲ ರೀತಿಯಲ್ಲೂ ಅರ್ಹರಾಗಿದ್ದರೂ ಕೆಲಸ ಸಿಕ್ಕುವ ಅವಕಾಶಗಳಿಂದ ಏಕೆ ವಂಚಿತರಾಗುತ್ತಿದ್ದಾರೆ? ಇದು ಒಂದು ಬಗೆಯ ಸಂಶೋಧನಾತ್ಮಕವಾದ ಅತಿ ತೀಕ್ಷ್ಣವಾದ ಆಲೋಚನೆಗಳಿಗೆ ಈಡು ಮಾಡುವ ವಿಚಾರವಾಗಿದೆ.

ಇದೇ ರೀತಿ ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ (ಐ.ಎ.ಎಸ್., ಐ.ಪಿ.ಎಸ್., ಐಎಫ್.ಎಸ್. ಮುಂತಾಗಿ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದ ಪರೀಕ್ಷೆಗಳು) ಕರ್ನಾಟಕದ ಅಭ್ಯರ್ಥಿಗಳ ಸಂಖ್ಯೆ, ಉತ್ತೀರ್ಣರಾಗುವವರ ಸಂಖ್ಯೆ ಇತ್ಯಾದಿಗಳು ಬಹಳ ಕಡಿಮೆ ಎಂಬುದೂ ತಿಳಿದ ವಿಷಯವಾಗಿದೆ.

ಈ ಎಲ್ಲ ಸಂಗತಿಗಳಿಗೆ ಹಲವಾರು ಕಾರಣಗಳನ್ನು ಮುಂದಿಡಲಾಗುತ್ತಿದೆ.

೧. ಎಲ್ಲ ರೀತಿಯ ಸಂಸ್ಥೆಗಳ ಆಡಳಿತ ಮುಖ್ಯ ಹಂತಗಳಲ್ಲಿ, ನೀತಿ ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನಗಳಲ್ಲಿ ಕನ್ನಡಿಗರಿಲ್ಲದೆ ಅವರು ತಮ್ಮ ತಮ್ಮ ಮಾತೃಭಾಷೆ, ಮಾತೃರಾಜ್ಯ ಮುಂತಾದವುಗಳಿಂದ ಬರುವವರ ಕಡೆಗೇ ಹೆಚ್ಚು ಗಮನ, ಅವಕಾಶಗಳನ್ನು ನೀಡುತ್ತಾರೆ.
೨. ನಮ್ಮ ರಾಜ್ಯದ, ನಮ್ಮ ಭಾಷೆಯ ಅಧಿಕಾರಿಗಳು ಇದ್ದರೂ ನಮ್ಮ ರಾಜ್ಯದವರಿಗೆ ಪ್ರೋತ್ಸಾಹ ನೀಡುವ ಬಗ್ಗೆ ಚಿಂತಿಸುವುದಿಲ್ಲ.
೩. ಜಾತಿ, ವರ್ಗ ಮುಂತಾದ ಪರಿಗಣನೆಗಳು.
೪. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೋಗಲು ಕನ್ನಡಿಗರು ಉತ್ಸಾಹವನ್ನೇ ತೋರುವುದಿಲ್ಲ.

ಮೂರು ಮತ್ತು ನಾಲ್ಕನೆಯ ಕಾರಣಗಳು ನಿಜ ಎಂತಲೂ, ಅವು ಅತ್ಯಂತ ತೀವ್ರವಾಗಿಲ್ಲ, ಬಹುಮಟ್ಟಿಗೆ ಊಹಾತ್ಮಕ, ಪರಿಗಣನೆಗೆ ಯೋಗ್ಯವಲ್ಲ ಎಂತಲೂ ಎರಡು ಬಗೆಯ ವಾದಗಳು ನಡೆಯುತ್ತಿರುತ್ತವೆ. ಆದರೆ ಮೊದಲ ಎರಡು ಕಾರಣಗಳಂತೂ ಬಹುಮಟ್ಟಿಗೆ ಎಲ್ಲರ ಅನುಭವಕ್ಕೆ ಬರುತ್ತವೆ. ಮತ್ತೊಂದು ದುರದೃಷ್ಟಕರ ಸಂಗತಿ ಎಂದರೆ ವಿವಿಧ ಕಂಪನಿಗಳ (ಮುಖ್ಯವಾಗಿ ಐಟಿ, ಬಿಟಿ ಕಂಪನಿಗಳ) ಅಧಿಕಾರಿಗಳು ವೃತ್ತಿಶಿಕ್ಷಣ ಕಾಲೇಜುಗಳಿಗೆ ಹೋಗಿ ಅಲ್ಲಿನ ವಿದ್ಯಾರ್ಥಿಗಳಿಗೆ ಸಂದರ್ಶನಗಳನ್ನು ಏರ್ಪಡಿಸಿ (ಕ್ಯಾಂಪಸ್ ಇಂಟರ್‌ವ್ಯೂ) ತಮ್ಮ ಕಂಪನಿಗಳಿಗೆ ನೇಮಕ ಮಾಡಿಕೊಳ್ಳುತ್ತಾರೆ. ಸಹಜವಾಗಿಯೇ ಈ ಅಧಿಕಾರಿಗಳು ತಮ್ಮ ತಮ್ಮ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ. ಈ ಸಂದರ್ಶನ, ಆಯ್ಕೆ ಮುಂತಾದ ಪ್ರಕ್ರಿಯೆಗಳಲ್ಲಿ ಕನ್ನಡಿಗರಿರುತ್ತಾರೆಯೇ? ಇದ್ದರೂ ಅವರ ಗಮನ ಕರ್ನಾಟಕದ ವಿದ್ಯಾರ್ಥಿಗಳ ಕಡೆ ಇರುತ್ತದೆಯೇ? ಇವೆರಡೂ ಇಲ್ಲವೇ ಇಲ್ಲ ಎನ್ನಬಹುದು. ಆದರೂ ಕೇವಲ ಕಣ್ಣೊರೆಸುವ, ಅಲ್ಲೊಮ್ಮೆ ಇಲ್ಲೊಮ್ಮೆ ಅನಿವಾರ್ಯವಾದ ಆಯ್ಕೆಯಲ್ಲಿ ಕನ್ನಡಿಗ ಪದವೀಧರರು ಇರಬಹುದು. ಒಟ್ಟಿನಲ್ಲಿ ನಮ್ಮ ರಾಜ್ಯದ ಮಕ್ಕಳಿಗೆ ವಿದ್ಯಾಭ್ಯಾಸ ಕ್ಷೇತ್ರದ ಪ್ರವೇಶಾವಕಾಶಗಳಲ್ಲಿ, ನಮ್ಮ ರಾಜ್ಯದ ಪದವೀಧರರಿಗೆ ಕೆಲಸ ದೊರಕುವಲ್ಲಿ ಅನ್ಯಾಯಗಳಾಗುತ್ತಿವೆ ಎಂಬುದಂತೂ ನಿಶ್ಚಯ. ಈ ಅನ್ಯಾಯಗಳನ್ನು ನಿವಾರಿಸಲು ಬೇಡಿಕೆಗಳನ್ನು ಮಂಡಿಸಿ ಹೋರಾಟಗಳನ್ನು ನಡೆಸುವವರಿಗೆ ಸಿಗುವ ಉತ್ತರಗಳೆಂದರೆ :

೧. ಪಿ.ಯು.ಸಿ.ಯಿಂದ ಮುಂದೆ ಯಾವುದೇ ಹಂತದಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೂ ಆಯಾ ತರಗತಿಗೆ ಪ್ರವೇಶ ದೊರಕಲು ಅರ್ಹತಾ ಪರೀಕ್ಷೆಯಲ್ಲಿ ಅವರು ಗಳಿಸಿರುವ ಅಂಕಗಳೇ ಬಹುಮುಖ್ಯ ಮಾನದಂಡ, ಆಧಾರ.

೨. ಇದೇ ರೀತಿ ರಾಜ್ಯಮಟ್ಟದ/ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೋಗಬೇಕಾದರೂ ನಿರ್ದಿಷ್ಟ ಪಡಿಸಿದ ತರಗತಿಯಲ್ಲಿ ಅವರು ಗಳಿಸಿರುವ ಅಂಕಗಳೇ ಬಹುಮುಖ್ಯ ಮಾನದಂಡ, ಆಧಾರ.

೩. ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ, ಬಹುಮಟ್ಟಿನ ಖಾಸಗಿ ಕ್ಷೇತ್ರದ ಸಂಶೋಧನೆ, ಅಭಿವೃದ್ಧಿ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿನ ನೇಮಕಾತಿಗಳಿಗೂ ಇದೇ ಮಾನದಂಡವನ್ನು ಅನ್ವಯಿಸಲಾಗುತ್ತಿದೆ. ಪ್ರತಿಯೊಂದು ಉದ್ಯೋಗಕ್ಕೂ ಇಂಟರ್‌ವ್ಯೂಗೆ ಅಭ್ಯರ್ಥಿಗಳನ್ನು ಕರೆಯಬೇಕಾದರೆ ಆಯಾ ಉದ್ಯೋಗಕ್ಕೆ ಗೊತ್ತುಪಡಿಸಿದ ಪದವಿಗಳಲ್ಲಿ ಉತ್ತೀರ್ಣರಾದ ಅತಿ ಹೆಚ್ಚು ಅಂಕಗಳಿಸಿರುವ ನಿರ್ದಿಷ್ಟ ಸಂಖ್ಯೆಯ (೩೦ ಅಥವಾ ೪೦ ಮಂದಿ) ಅರ್ಜಿದಾರರನ್ನು ಕರೆದು ಅವರಿಗೆ ಸಂದರ್ಶನ ಏರ್ಪಡಿಸಲಾಗುತ್ತದೆ.

ಈ ಮೂರು ಉತ್ತರಗಳೂ ಹೋರಾಟಗಾರರೇ ಆಗಲಿ, ಕನ್ನಡಿಗ ವಿದ್ಯಾರ್ಥಿಗಳೇ ಆಗಲಿ, ಪದವೀಧರರೇ ಆಗಲಿ ಸಹಜವಾಗಿಯೇ ಅವರನ್ನು ಮೂಕರಾಗಿಸುತ್ತವೆ. ಆದರೆ ಎಲ್ಲರೂ ಅಚ್ಚರಿಪಡಲೇಬೇಕಾದ ಅಂಶವೆಂದರೆ ಈ ಎಲ್ಲ ಸಂದರ್ಭಗಳಲ್ಲೂ ಕನ್ನಡಿಗರು ಹಿಂದಿರುತ್ತಾರೆ! ಎಲ್ಲಕ್ಕೂ ಆಧಾರವಾದ ಅಂಕಗಳಿಕೆಯಲ್ಲಿ ಕರ್ನಾಟಕದವರು ಯಾವಾಗಲೂ ಹಿಂದು ಎಂದು ಇದರ ಅರ್ಥವೇ? ಇದು ಹೇಗೆ ಸಾಧ್ಯ? ಯಾವುದೇ ಕೆಲಸಕ್ಕೆ ಯಾವುದೇ ರಾಜ್ಯದವರೂ ಅರ್ಜಿಹಾಕುವ ಅವಕಾಶವಿರುವುದರಿಂದಲೂ, ಅಂತರಜಾಲದ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾದ್ದರಿಂದಲೂ ಪ್ರತಿಯೊಂದು ಸಂಸ್ಥೆಯ ಪ್ರತಿಯೊಂದು ಕೆಲಸಕ್ಕೂ ದೇಶದ ಎಲ್ಲ ಕಡೆಗಳಿಂದಲೂ ಸಹಸ್ರಾರು ಅರ್ಜಿಗಳು ಬಂದಿರುತ್ತವೆ. ಇವುಗಳನ್ನು ಪರಿಶೀಲಿಸಿದಾಗ ಅಂಕಗಳ ದೃಷ್ಟಿಯಿಂದ ಮೊದಲ ನೂರಾರು, ಕೆಲವೊಮ್ಮೆ ಸಹಸ್ರಾರು ಅರ್ಜಿಗಳು ಬೇರೆ ರಾಜ್ಯದ ಪದವೀಧರರುಗಳದ್ದೇ ಆಗಿರುತ್ತವೆ. ಇದು ಎಚ್.ಎ.ಎಲ್., ಎ.ಡಿ.ಎ., ಎ.ಡಿ.ಇ., ಇಸ್ರೋ, ಇನ್‌ಫೋಸಿಸ್, ವಿಪ್ರೋ ಮುಂತಾದ ಎಲ್ಲ ಕಡೆಯ ಅನುಭವ. ಅಲ್ಲಿನ ಬಹುತೇಕ ಹುದ್ದೆಗಳು ಇತರೆ ರಾಜ್ಯಗಳವರಿಗೇ ದಕ್ಕಿರುವುದಕ್ಕೆ ಇದೂ ಒಂದು ಕಾರಣ ಎನ್ನಬಹುದು. ಇದನ್ನೇ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಷ್ಟೋ ಜನ ಕನ್ನಡಿಗರು ಆತಂಕದಿಂದ ಖಾಸಗಿಯಾಗಿ ಹೇಳಿಕೊಳ್ಳುತ್ತಾರೆ. ಹಾಗಿದ್ದರೆ ಕನ್ನಡಿಗರಿಗೇಕೆ ಕಡಿಮೆ ಅಂಕಗಳು? ಇತರ ರಾಜ್ಯಗಳವರಿಗೆ, ಮುಖ್ಯವಾಗಿ ತಮಿಳುನಾಡು ಮತ್ತು ಉತ್ತರದ ಕೆಲವು ರಾಜ್ಯಗಳಿಂದ ಬರುವವರಿಗೇಕೆ ಅತಿ ಹೆಚ್ಚಿನ ಅಂಕಗಳು ಲಭಿಸಿರುತ್ತವೆ? ಇದು ನಾನು ಎನ್.ಎ.ಎಲ್.ನಲ್ಲಿ ವಿಜ್ಞಾನಿಯಾದಾಗಿದ್ದಾಗ ನನ್ನ ಪರಿಯೋಜನೆಗಳಿಗೆ ತಾತ್ಕಾಲಿಕ ಇಂಜಿನಿಯರುಗಳನ್ನು ತೆಗೆದುಕೊಳ್ಳುವಾಗಿನ ಸ್ವಂತ ಅನುಭವ. ಹೀಗೆ ಅತಿಹೆಚ್ಚಿನ ಅಂಕ ಗಳಿಸಿದವರು ಕರ್ನಾಟಕದ ಪದವೀಧರರಿಗಿಂತ ಹೆಚ್ಚಿನ ಬುದ್ಧಿವಂತರೇನಲ್ಲ. ನಾನು ಉದ್ದೇಶಪೂರ್ವಕವಾಗಿ ಚಿತ್ರದುರ್ಗ, ಚಿಕ್ಕಮಗಳೂರು ಮುಂತಾದ ಕಡೆಗಳಿಂದ ಬಂದ, ಪ್ರೌಢಶಾಲೆ ವಿದ್ಯಾಭ್ಯಾಸ ಮುಗಿಯುವವರೆಗೆ ಕನ್ನಡ ಮಾಧ್ಯಮದಲ್ಲೇ ಓದಿದ, ಹಿಂದುಳಿದ ವರ್ಗದ ಇಂಜಿನಿಯರಿಂಗ್ ಪದವೀಧರರನ್ನು ನನ್ನ ಪರಿಯೋಜನೆಗಳಿಗೆ ತೆಗೆದುಕೊಳ್ಳುತ್ತಿದ್ದೆ. ಇವರುಗಳು ಉಳಿದವರಿಗಿಂತ ತುಂಬಾ ಚೆನ್ನಾಗಿ ಕೆಲಸಮಾಡಿ ಈಗ ಬೇರೆ ಬೇರೆ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಒಟ್ಟಿನಲ್ಲಿ, ಎಲ್ಲ ರೀತಿಯ ಸಂಸ್ಥೆಗಳ ಆಡಳಿತದ ಮುಖ್ಯ ಹಂತಗಳಲ್ಲಿ, ನೀತಿ ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನಗಳಲ್ಲಿ ಕನ್ನಡಿಗರಿಲ್ಲದೆ ಅವರು ತಮ್ಮ ತಮ್ಮ ಮಾತೃಭಾಷೆ, ಮಾತೃರಾಜ್ಯ ಮುಂತಾದವುಗಳಿಂದ ಬರುವವರ ಕಡೆಗೇ ಹೆಚ್ಚು ಗಮನ, ಅವಕಾಶಗಳನ್ನು ನೀಡುತ್ತಾರೆ ಎಂಬ ಬಹುತೇಕ ವಾಸ್ತವ ಸಂಗತಿಗಳಿದ್ದರೂ, ವಿತಂಡವಾದ ಹಾಗೂ ತೋರಿಕೆಯ ಅಮಾಯಕತನಗಳಿಂದ ಅವನ್ನು ತಪ್ಪು ಎಂದು ವಾದಿಸಿ, ಅತಿ ಹೆಚ್ಚಿನ ಅಂಕಗಳನ್ನು ಪಡೆದಿರುವವರಿಗೆ ಮಾತ್ರ ಪ್ರಾಧಾನ್ಯ ನೀಡುತ್ತಿದ್ದೇವೆ ಎಂಬ ಸಮರ್ಥನೆಗಳು ಕಂಡು ಬರುತ್ತವೆ. ನಮ್ಮ ರಾಜ್ಯದ ಪದವೀಧರರು ಇತರ ರಾಜ್ಯಗಳಿಂದ ಬರುವವರಿಗಿಂತ ದಡ್ಡರಲ್ಲ, ಅನೇಕ ವೇಳೆ ಅವರಿಗಿಂತ ಬುದ್ಧಿವಂತರು ಎಂಬುದು ಸಾಬೀತಾಗಿರುವಾಗ ಈ ಸಮರ್ಥನೆಗಳನ್ನು, ಈ ಪರಿಸ್ಥಿತಿಗಳನ್ನು ಹೆಚ್ಚು ಎಚ್ಚರದಿಂದಲೂ, ವೈಜ್ಞಾನಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ ಆಳವಾಗಿ ಪರಿಶೀಲಿಸಬೇಕಾಗುತ್ತದೆ.

ಬಹುಮುಖ್ಯವಾಗಿ, ವಿದ್ಯಾರ್ಥಿಗಳಾಗಲೀ, ಪದವೀಧರರಾಗಲೀ ಗಳಿಸಿರುವ ಅಂಕಗಳನ್ನು ಹಾಗೆಯೇ ಒಪ್ಪಲಾಗದು. ಏಕೆಂದರೆ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಮುಂದೆ ಎಲ್ಲ ರೀತಿಯ ಪರೀಕ್ಷೆಗಳಲ್ಲೂ

ಅಂಕಗಳನ್ನು ನೀಡುವಾಗ ವಿವಿಧ ರಾಜ್ಯಗಳಲ್ಲಿ ವಿವಿಧ ಮಾನದಂಡಗಳನ್ನು ಅನುಸರಿಸಲಾಗುತ್ತಿರುವುದೇ ಈ ಅನ್ಯಾಯಗಳಿಗೆ ಕಾರಣವಾಗಿರುತ್ತದೆ ಎನ್ನಬಹುದು. ಈ ಮಾನದಂಡಗಳು ಯಾವುವು ಎಂಬುದು ಯಕ್ಷಪ್ರಶ್ನೆಯಾಗಿಯೇ ಇರುತ್ತವೆ. ಅಲ್ಲದೆ ಆ ರಾಜ್ಯಗಳಲ್ಲಿನ ವ್ಯವಸ್ಥೆಗಳು ನೀಡಬಹುದಾದ ಪ್ರೋತ್ಸಾಹಾಂಕಗಳು ಇಂತಹ ಪರಿಸ್ಥಿತಿಗಳಿಗೆ ಕಾರಣವಾಗಿರುತ್ತವೆ ಎನ್ನಬಹುದು. ಆದ್ದರಿಂದ ಈ ಅನ್ಯಾಯಗಳಿಗೆ ವೈಜ್ಞಾನಿಕ ಪರಿಹಾರವೊಂದನ್ನು ಕಂಡುಹಿಡಿದುಕೊಳ್ಳುವುದೇ ಈಗಿರುವ ಮಾರ್ಗ. ಅಂತಹ ಒಂದು ಪರಿಹಾರದ ಸ್ಥೂಲ ನಿರೂಪಣೆ ಹೀಗಿರಬಹುದಾಗಿದೆ :

- ನಿರ್ದಿಷ್ಟ ಪರೀಕ್ಷೆಯಲ್ಲಿ ಮತ್ತೊಂದು ರಾಜ್ಯದಲ್ಲಿ (ಉದಾ: ತಮಿಳುನಾಡು) ಮೊದಲ ಒಂದುಸಾವಿರ ಉತ್ತೀರ್ಣರಾದವರ ಅಂಕಗಳನ್ನು ಕೂಡಿ ಸರಾಸರಿ ಅಂಕವನ್ನು ಪಡೆಯಬೇಕು.
- ಇದೇ ಪರೀಕ್ಷೆಯಲ್ಲಿ ಕರ್ನಾಟಕದ ಮೊದಲ ಒಂದುಸಾವಿರ ಉತ್ತೀರ್ಣರಾದವರ ಅಂಕಗಳನ್ನು ಕೂಡಿ ಸರಾಸರಿ ಅಂಕವನ್ನು ಪಡೆಯಬೇಕು.
- ಈ ಎರಡು ಸರಾಸರಿ ಅಂಕಗಳ ವ್ಯತ್ಯಾಸವನ್ನು ಆ ರಾಜ್ಯದ ಪ್ರತಿಯೊಬ್ಬ ಅಭ್ಯರ್ಥಿಯು ಗಳಿಸಿರುವ ಅಂಕಗಳಿಂದ ಕಳೆಯಬೇಕು ಅಥವಾ ಕರ್ನಾಟಕದ ಅಭ್ಯರ್ಥಿಯ ಅಂಕಗಳಿಗೆ ಕೂಡಬೇಕು.
- ಹೀಗೆ ಲೆಕ್ಕಿಸಿ ನಿರ್ಧರಿಸಿದ ಅಂಕಗಳೇ ಕೆಲಸ ನೀಡಲು ಮತ್ತು ಬೇರೆ ಬೇರೆ ವ್ಯಾಸಂಗಗಳಿಗೆ ಪ್ರವೇಶ ನೀಡಲು ಮಾನದಂಡವಾಗಿರಬೇಕು. ಇದಕ್ಕಿಂತಲೂ ಇನ್ನೂ ಉತ್ತಮ ಪರಿಹಾರ ಮಾರ್ಗಗಳಿರಬಹುದು. ಚಿಂತಕರು ಅದನ್ನು ತಿಳಿಸಿ, ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವವರು ಅವುಗಳಲ್ಲಿ ಸೂಕ್ತವಾದುದನ್ನು ಅಧಿಕೃತಗೊಳಿಸಿ ಎಲ್ಲರೂ ಅದನ್ನು ಪಾಲಿಸುವಂತೆ ಕಟ್ಟುನಿಟ್ಟಾದ ಕಾನೂನನ್ನು ಮಾಡಬೇಕು.

ಇನ್ನು ಸಾಮಾಜಿಕವಾಗಿ ಆಲೋಚಿಸಿದರೆ, ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುವ ಯಾವುದೇ ಸಂಸ್ಥೆಯು ತನ್ನ ಎಲ್ಲ ಅಥವಾ ಬಹುಪಾಲು ನೌಕರರು ಕನ್ನಡಿಗರಾಗಿರಲೇಬೇಕೆಂಬುದನ್ನು ಮನಸ್ಸಿಗೆ ತಂದುಕೊಂಡು ಅದನ್ನು ಪ್ರಾಮಾಣಿಕವಾಗಿ ಜಾರಿಗೆ ತರಬೇಕು. ಕನ್ನಡಿಗ ಪದವೀಧರರು ಬುದ್ಧಿವಂತಿಕೆಯಲ್ಲಿ ಬೇರೆ ರಾಜ್ಯದ ಯಾರಿಗೂ ಕಡಿಮೆ ಇಲ್ಲವಾದ್ದರಿಂದ ಈ ರೀತಿಯ ಒತ್ತಡ, ಒತ್ತಾಯಗಳು ಅತ್ಯಂತ ನ್ಯಾಯಸಮ್ಮತವಾದುದೇ ಆಗಿರುತ್ತದೆ.

ಕರ್ನಾಟಕದಲ್ಲಿ ಪ್ರಾಥಮಿಕ ತರಗತಿಗಳಲ್ಲಿ ಇಂಗ್ಲಿಷ್‌ಗೆ ಪ್ರಾಧಾನ್ಯತೆ ಇಲ್ಲ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಂದುಳಿದಿದ್ದಾರೆ, ಪದವೀಧರರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಮುಂತಾದ ಮಾತುಗಳೂ ಕೇಳಿಬರುತ್ತಿವೆ. ಆದರೆ ಮಕ್ಕಳು ಮೊದಲ ಮೂರು ಅಥವಾ ನಾಲ್ಕು ವರ್ಷಗಳಲ್ಲಿ ಅತ್ಯಂತ ವೈಜ್ಞಾನಿಕ ಭಾಷೆಯಾದ ಕನ್ನಡದಲ್ಲಿ ಕಲಿತರೆ ಅವರು ತಮ್ಮ ಮೆದುಳಿನ ಆರೋಗ್ಯಕರ ವಿಕಾಸಕ್ಕೆ ಪಕ್ಕಾಗಿರುತ್ತಾರೆ. ಆ ವೇಳೆಗೆ, ವಿಷಯಗಳನ್ನು ಅರ್ಥಮಾಡಿಕೊಂಡು ವಿಷಯಗಳ ಬಗ್ಗೆ ಸ್ವತಂತ್ರವಾಗಿ ಆಲೋಚಿಸುವ ಪ್ರವೃತ್ತಿ ಅವರಲ್ಲಿ ಉಂಟಾಗಿರುತ್ತದೆ. ಮಕ್ಕಳಲ್ಲಿ ಇಂತಹ ಪ್ರವೃತ್ತಿ ಉಂಟಾಗುವುದು ಕೇವಲ ಹನ್ನೆರಡು ವರ್ಷಗಳೊಳಗೆ ಮಾತ್ರ ಎಂದು ಮನೋವೈದ್ಯರು ಹೇಳುತ್ತಾರೆ. ಈ ವಯಸ್ಸಿನೊಳಗೆ ಗೊಂದಲಮಯವಾದ ಇಂಗ್ಲಿಷನ್ನು ಕಲಿಯಲಾರಂಭಿಸಿದರೆ ಅವರ ಬೌದ್ಧಿಕ ಆಲೋಚನಾ ಪ್ರವೃತ್ತಿಯು ಕಡಮೆಯಾಗುತ್ತದೆ. ಆದರೆ ಮಕ್ಕಳಿಗೆ ಸುಮಾರು ೧೨ ವರ್ಷಗಳಾದ ನಂತರ ಅನಿವಾರ್ಯವೂ ಹಾಗೂ ಅತ್ಯಗತ್ಯವೂ ಆದ ಇಂಗ್ಲಿಷನ್ನು ವ್ಯಾವಹಾರಿಕವಾಗಿಯೂ, ಸಂಭಾಷಣಾತ್ಮಕವಾಗಿಯೂ ಹೇಳಿಕೊಡಬೇಕು. ಅಂದರೆ ೫ನೆಯ ತರಗತಿಯಿಂದ ಇಂಗ್ಲಿಷನ್ನು ಹೇಳಿಕೊಡುವಾಗ ಹೆಚ್ಚು ಎಚ್ಚರ, ಮುತುವರ್ಜಿ ಇರಬೇಕು. ಆಗ ನಮ್ಮ ವಿದ್ಯಾರ್ಥಿಗಳು ಕೇವಲ ನಾಲ್ಕು ವರ್ಷಗಳಲ್ಲಿ ಎಲ್ಲರಿಗಿಂತ ಚೆನ್ನಾಗಿ ಇಂಗ್ಲಿಷನ್ನು ಕಲಿತುಬಿಡುತ್ತಾರೆ. ಇದಕ್ಕಾಗಿ ಕರ್ನಾಟಕ ಸರ್ಕಾರ ಮತ್ತು ಇತರ ವ್ಯವಸ್ಥೆಗಳು ತೀವ್ರವಾದ ಗಮನವನ್ನು ಹರಿಸಬೇಕು. ಆಗ ಕನ್ನಡನಾಡಿನ ಮಕ್ಕಳು ಅವೈಜ್ಞಾನಿಕವೂ, ಗೊಂದಲ ಪೂರಿತವೂ, ಧ್ವನ್ಯಾತ್ಮಕವಲ್ಲದ್ದೂ ಆದ ಇಂಗ್ಲಿಷನ್ನು ಧೈರ್ಯವಾಗಿ ಎದುರಿಸಿ, ಗೊಂದಲಕ್ಕೆಡೆಮಾಡಿಕೊಳ್ಳದೆ ಇಂಗ್ಲಿಷನ್ನು ಅತ್ಯಂತ ಸಲೀಸಾಗಿ ಚೆನ್ನಾಗಿ ಕಲಿತು ಎಲ್ಲರಿಗಿಂತ ಬುದ್ಧಿವಂತರಾಗುತ್ತಾರೆ. ಆದರೆ ಬಹುಮುಖ್ಯವಾಗಿ ವಿದ್ಯಾಕ್ಷೇತ್ರದ ಮತ್ತು ನೌಕರಿಕ್ಷೇತ್ರದ ಎಲ್ಲ ಹಂತಗಳಲ್ಲೂ ಕರ್ನಾಟಕದ ಮಕ್ಕಳು ಅನ್ಯಾಯಕ್ಕೊಳಗಾಗುತ್ತಿರುವ ಮೇಲೆ ಕಾಣಿಸಿದ ಇತರ ಅಂಶಗಳನ್ನು ಎಲ್ಲರೂ ತೀವ್ರವಾಗಿ ಗಮನಿಸಬೇಕು.

೧೨೩/೧, ಮೊದಲ ಮಹಡಿ, 'ಅನುಗ್ರಹ', ನೇತಾಜಿ ರಸ್ತೆ, ೪ನೆಯ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು ೫೬೦ ೦೨೮

ಬಿ. ಸುರೇಶ ಅವರ

ನಾಟಕಂತಿ

'ಪ್ರಜಾಸಾಹಿತ್ಯ'ಕ್ಕೆ 'ಅಭಿನಯತರಂಗ' ಗೌರಿದತ್ತು ನೆರವು

ಕರ್ನಾಟಕದಲ್ಲಿ ರಂಗಶಾಲೆಗಳು ಇವೆ. ಕೆಲವೊಂದು ಕೆಲವೇ ಕೆಲವರ ಒಡ್ಡೋಲಗವಾಗಿವೆ. ಹಣ ಕೂಡಾ ಕಿಟಕಿ, ಬಾಗಿಲುಗಳಿಂದ ಬಂದು ಸುರಿಯುತ್ತಲೇ ಇರುತ್ತದೆ. ಅದು ಫೋರ್ಡ್ ಫಂಡ್ ಆಗಿರಲಿ, ಮಾನವ ಸಂಪನ್ಮೂಲವಾಗಿರಲಿ. ವಿನಿಯೋಗ (ಕನ್ನಡದಲ್ಲಿ ಹಂಚಿಕೆ) ಸರ್ರಿಯಾಗಿ ಆದರೆ ಸರಿ ಎನ್ನುವ ದ್ವಿಮುಖ ಅಲ್ಲ ವಿಮುಖ ಕಮ್ಯುನಿಸ್ಟ್ ವಿಮರ್ಶಕರ ಬೆಂಬಲವೂ ಇಂಥವರಿಗೆ ಶ್ರೀರಕ್ಷೆ. ಆದರೆ ರೂಪಾಯಿಯ ನೆರವಿಲ್ಲದೆ ಕಳೆದ ೨೬ ವರ್ಷಗಳಿಂದ ಬೆಂಗಳೂರಿನಲ್ಲಿ 'ಅಭಿನಯತರಂಗ' ಮುಕ್ತವಾಗಿ, ಸಾಮಾನ್ಯರಿಂದ ಅಸಾಮಾನ್ಯ ಪ್ರತಿಭಾವಂತರು-ಕಾರ್ಯಕರ್ತರನ್ನು ಒಳಗೊಂಡು; ರಂಗಭೂಮಿ, ಚಲನಚಿತ್ರ, ದೂರದರ್ಶನ ಮಾಧ್ಯಮಗಳಿಗೆ ಸಕ್ರಿಯವಾಗಿ ಸಂಬಂಧ ಬೆಳೆಸಿದೆ. ಕಲಾಮಂದಿರ, ಚಿತ್ರ, ಬಿಂಬ, ಪಪೆಟ್ ಲ್ಯಾಂಡ್‌ಗಳ ಭಾಗವೂ ಆದ 'ಅಭಿನಯತರಂಗ'ದ ಆಧಾರಸ್ತಂಭ ೮೦ರ ಎ.ಎಸ್. ಮೂರ್ತಿ. ಜೊತೆಗೆ ದಿಟ್ಟ ಸ್ವಭಾವದ ಕಲಾವಿದೆ ಗೌರಿದತ್ತು ಅವರು ಪ್ರಾಂಶುಪಾಲರು. ಹಾಡುಗಾರ್ತಿ, ನಟಿ, ಸಂಘಟಕಿ, ಮುಖ್ಯವಾಗಿ ಈವತ್ತಿನ ರಂಗಭೂಮಿ ನಿರ್ದೇಶಕರಲ್ಲಿ ಒಬ್ಬರು.

೩೦ ವರ್ಷಗಳ ಹಿಂದೆಯೇ ಲಂಕೇಶರ 'ಪಲ್ಲವಿ' ಚಲನಚಿತ್ರದಲ್ಲಿ ಅಭಿನಯಿಸಬೇಕಾಗಿದ್ದವರು ಗೌರಿ. ಅಲ್ಲಿಂದಲೇ ಅವರ ನನ್ನ ಪರಿಚಯ. ಆ ಕಥೆ ಮತ್ತೊಮ್ಮೆ. ದಶಕಗಳೇ ಉರುಳಿದರೂ ರಂಗಭೂಮಿ, ಸಾಹಿತ್ಯ, ಸಂಸ್ಕೃತಿಯೊಂದಿಗೆ ತನ್ನನ್ನು ತೊಡಗಿಸಿಕೊಂಡ ಗೌರಮ್ಮ, 'ಪ್ರಜಾಸಾಹಿತ್ಯ'ಕ್ಕೆ ಎರಡು ವರ್ಷದ ಚಂದಾ ಮಾತ್ರವಲ್ಲ, ತನ್ನಿಂದಾದ ನೆರವು ಕೂಡ ನೀಡಿ ಸಹಕರಿಸಿದ್ದಾರೆ. ಅವರಿಗೆ, ಅವರ ಸಂಸ್ಥೆಗೆ ಅನಂತ ವಂದನೆಗಳು.

* * *

ಸಿ.ವಿ., ಸಿ.ಕೆ. ಬಾಂಧವ್ಯ

ಸಿ.ವಿ. ಅಥವ ಚಿಣ್ಣ ರಾಜಗೋಪಾಲರೆಂದರೆ ಎಷ್ಟು ಜನಕ್ಕೆ ತಿಳಿದೀತೊ ಕಾಣೆ. 'ಪ್ರಜಾವಾಣಿ' ರಾಜಗೋಪಾಲರೆಂದರೆ, ಇಡೀ ಪತ್ರಿಕಾಮಾಧ್ಯಮ, ಕನ್ನಡ ಸಾಂಸ್ಕೃತಿಕ ರಂಗವೇ ಗೌರವಿಸುತ್ತದೆ. 'ಪ್ರಜಾವಾಣಿ'ಯಲ್ಲಿ ಇರುವವರೆಲ್ಲ ದೊಡ್ಡವರೊ ಅಲ್ಲವೊ, ದೊಡ್ಡವರು ಅನ್ನಿಸಿಕೊಂಡವರು ಕೆಲವರು. ಲಂಕೇಶ್ ಅಂಥವರು ಅಂಕಣ ಬರೆಯಲು ಕಾರಣರಾದದ್ದು, ಎಚ್.ಡಿ. ದೇವೇಗೌಡ ಅಂಥವರು ರಾಜಕೀಯ ರಂಗದಲ್ಲಿ ಬೆಳೆಯಲು ಬೆನ್ನೆಲುಬಾಗಿದ್ದವರು ಸಿ.ವಿ. ಅವರು. ಅಂಥವರ ಬಂಧುಗಳು ಸುಮಿತ್ರಾ - ಸಿ.ಕೆ. ಪ್ರಭಾಕರ ದಂಪತಿಗಳು. ನಮ್ಮ ಬಡಾವಣೆಯಲ್ಲಿದ್ದಾರೆ. ಎರಡು ವರ್ಷದಿಂದ 'ಪ್ರಜಾಸಾಹಿತ್ಯ' ಗಮನಿಸುತ್ತ ಇದ್ದವರು, ಮೊನ್ನೆ ದಿಢೀರನೆ ಮನೆಗೆ ಕರೆದು ಆತಿಥ್ಯ ನೀಡಿ, ತಟ್ಟೆಯಲ್ಲಿ ಎಲೆ ಅಡಿಕೆ ಜೊತೆಗೆ ಷರ್ಟ್‌ಪೀಸ್ ಇಟ್ಟು, ಒಂದು ಸಾವಿರದ ಒಂದು ರೂಪಾಯಿಗಳನ್ನು ಕೊಟ್ಟು ಹರಸಿದ್ದಾರೆ. ನಮ್ಮ ನಡುವೆ ಸಿ.ವಿ. ರಾಜಗೋಪಾಲ್ ಬದುಕಿಲ್ಲ ಎಂದು ನಾನು ತಿಳಿಯಲಾರೆ.

ಸಂಪಾದಕ

ದಯವಿಟ್ಟು ನಿಮ್ಮ ಪರಿಚಿತರನ್ನು 'ಪ್ರಜಾಸಾಹಿತ್ಯ'ಕ್ಕೆ ಚಂದಾದಾರರನ್ನಾಗಿಸಿ, ನೆರವಾಗಿ

ಕೇಂದ್ರ ಸಾಹಿತ್ಯ ಅಕಾಡೆಮಿ

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–೫೬೦ ೦೦೧

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು

- ಆ ದೀರ್ಘ ಮೌನ (ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ — ೧೨೦.೦೦
- ಆರು ಅಡಿ ಭೂಮಿ ಉರ್ದು ಮೂಲ : ಅಬ್ದುಸ್ಸಮದ್ ; ಅನು : ಪಂಚಾಕ್ಷರಿ ಹಿರೇಮಠ — ೧೫೦.೦೦
- ಅರ್ಧನಾರೀಶ್ವರ (ಹಿಂದಿ ಮೂಲ : ವಿಷ್ಣು ಪ್ರಭಾಕರ್ ; ಅನು : ಎಸ್.ಎಮ್. ರಾಮಚಂದ್ರಸ್ವಾಮಿ) — ೨೫೦.೦೦
- ನೀಲಿಚಂದಿರ (ಹಿಂದಿ ಮೂಲ : ಶಿವಪ್ರಸಾದ ಸಿಂಹ ; ಅನು : ಪಿ. ಶಶಿಕಲಾ) — ೩೫೦.೦೦
- ಚಿಟ್ಟಾಲಹು (ಪಂಜಾಬೀ ಮಲ : ನಾನಕ್ ಸಿಂಗ್ ; ಅನು : ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) — ೮೫.೦೦
- ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) — ೧೦೦.೦೦
- ಶಾಂಬ (ಬಂಗಾಳಿ ಮೂಲ: ಸಮರೇಶ್ ಬಸು, ಅನು: ಜಿ. ಕುಮಾರಪ್ಪ) — ೧೦೦.೦೦
- ಹಗ್ಗ – ೧, ೨, ೩ ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರಪಿಳ್ಳೆ, ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) — ೩೨೫.೦೦ / ೨೫೦.೦೦ / ೨೫೦.೦೦

ಕಥಾ ಸಂಕಲನ

- ಸ್ವರ್ಣ ಕಮಲಗಳು (ತೆಲುಗು ಮೂಲ : ಇಲ್ಲಿಂದಲ ಸರಸ್ವತೀದೇವಿ ; ಅನು–ಪಿ. ವೇಣು–ಗೋಪಾಲ್) — ೩೦೦.೦೦
- ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು–ಅಶೋಕ್ ಕುಮಾರ್) — ೩೦೦.೦೦
- ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೋಮನಾಥ್) — ೧೨೫.೦೦
- ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) — ೧೦೦.೦೦
- ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ: ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) — ೧೫೦.೦೦
- ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) — ೧೬೦.೦೦

ಕಾವ್ಯ

- ಕನ್ನಡ ಸಾನೆಟ್ ಸಂಗ್ರಹ (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) — ೮೫.೦೦
- ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ : ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) — ೯೦.೦೦
- ಸಂಬಂಧ (ಇಂಗ್ಲಿಷ್ : ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) — ೫೦.೦೦
- ತಮಿಳು ಕವಿತೆಗಳು (ಸಂಪಾದಕರು; ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣ ಸ್ವಾಮಿ) — ೪೦.೦೦
- ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಚಾರ್) — ೨೦೦.೦೦
- ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) — ೧೨೫.೦೦

ಇತರ

- ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) — ೬೦೦.೦೦
- ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು; ವಿ. ಗೋಪಾಲಕೃಷ್ಣ) — ೨೦೦.೦೦
- ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) — ೨೦೦.೦೦
- ತೆಲುಗು–ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) — ೧೫೦.೦೦
- ಟೀಕಾ ಸ್ವಯಂವರ : ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) — ೧೮೦.೦೦
- ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ — ೭೫.೦೦

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ.೨೫.೦೦)

- ವ.ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
- ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್ (೪೦.೦೦) * ಬಸವರಾಜ ಕಟ್ಟೀಮನಿ (೪೦.೦೦) * ಅಲೂರು ವೆಂಕಟರಾಯರು (೪೦.೦೦)